ಸಂಪುಟ 20 ಸಂಚಿಕೆ 47-48
ನವೆಂಬರ್ 28, 1999 ಬೆಲೆ ರೂ. 3.00

ಐಕ್ಯರಂಗ


ದುಡಿವ ಜನರ ಪ್ರಾಣಮಿತ್ರ

ಕಾರ್ಮಿಕರ ಭವಿಷ್ಯ ನಿಧಿ ನುಂಗಿದ ಇನ್ನೂರು ಕೋಟಿ ರೂ.ಗಳ ಹಗರಣ

ಬಂಡಾಯ ಸಾಹಿತ್ಯ ಸಮ್ಮೇಳನ

ಆನೇಕಲ್-ವಿದ್ಯಾರ್ಥಿಗಳ ಮೇಲೆ ಸಂಘ ಪರಿವಾರದ ಧಾಳಿ

ಕಾಶ್ಮೀರದಲ್ಲಿ ಪರಿಸ್ಥಿತಿ ಹದಗೆಡುತ್ತಿದೆ ಏಕೆ?



ಸಮಿತಿಗಳು, ಟಾಸ್ಕ್‌ಫೋರ್ಸ್‌ಗಳ ರಾಜಕೀಯ

ಕೂಲಿಕಾರರ ವಸತಿ ಪ್ರಶ್ನೆ ಹಾಗೂ ಆಶ್ರಯ ಯೋಜನೆಯಲ್ಲಿ ಅಕ್ರಮಗಳು

ಆಶ್ರಯ ಯೋಜನೆಯಲ್ಲಿ ಬೆಂಗಳೂರು ನಗರದ ಬಳಿಯ ಪ್ರದೇಶದಲ್ಲಿ ನಡೆದ ಅವ್ಯವಹಾರವನ್ನು ತನಿಖೆಗೊಳಪಡಿಸಿದ ಹೈಕೋರ್ಟ್‌ನ ವಿಭಾಗೀಯ ಪೀಠ ಯೋಜನೆಯನ್ನೇ ರದ್ದು ಪಡಿಸಿದೆ. ಆಶ್ರಯ ಯೋಜನೆಯನ್ನು ರೂಪಿಸಿದ ಹಿಂದಿನ ಕಾಂಗ್ರೆಸ್ ಸರ್ಕಾರ ಅದರ ರೂಪುರೇಷೆಯನ್ನೇ ಅಕ್ರಮಗಳ ಆಗರವಾಗುವಂತೆ ರಚಿಸಲಾಗಿತ್ತು. ಪಂಚಾಯ್ತಿ ವ್ಯವಸ್ಥೆ, ಆಡಳಿತ ವಿಕೇಂದ್ರೀಕರಣಗಳನ್ನೇ ಧಿಕ್ಕರಿಸಿ ಅದಕ್ಕಾಗಿಯೇ ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಅಧಿಕಾರಿಗಳ ಸಮಿತಿಯನ್ನು ನೇಮಿಸಲಾಗಿತ್ತು.

ನಗರಗಳ ಹೊರವಲಯದಲ್ಲಿಯಂತೂ 'ಆಶ್ರಯ' ಯೋಜನೆ ಹಲವು ಭ್ರಷ್ಟ ಅಧಿಕಾರಿ-ರಾಜಕಾರಣಿಗಳಿಗೆ ಹಣ ಲೂಟಿ ಮಾಡುವ ಆಶ್ರಯಧಾಮವಾಗಿತ್ತು. ಆಶ್ರಯದ ನಿವೇಶನಗಳನ್ನು ಮಾಡಿದ ಪ್ರದೇಶಗಳ ಮಗ್ಗುಲಿನಲ್ಲಿ ಒಂದು ಸಣ್ಣ ನಿವೇಶನಕ್ಕೆ ಲಕ್ಷಗಟ್ಟಲೆ ಬೆಲೆ ಇರುವಾಗ, ಆಶ್ರಯ ಯೋಜನೆಯ ವಸತಿ ನಿವೇಶನಗಳು ಬೆಲೆ ಅದಕ್ಕಿಂತ ಕಡಿಮೆಯಾಗುವುದು ಹೇಗೆ? ನಗರಗಳ ವಸತಿ ಹೀನ ನಾಗರಿಕರನ್ನು ಸುಲಿದು ರಾತ್ರೋರಾತ್ರಿ ಬಡ ವಸತಿ ರಹಿತರ ಪಟ್ಟಿಗಳು ತಯಾರಾದವು. ನಿವೇಶನ ವಿತರಿಸಲ್ಪಟ್ಟವು ಒಬ್ಬೊಬ್ಬ ಅಧಿಕಾರಿ ರಾಜಕಾರಣಿ ಕೆಲವೇ ತಿಂಗಳುಗಳಲ್ಲಿ ಕೋಟ್ಯಾಧಿಪತಿಗಳಾಗಿ ಬಿಟ್ಟರು. ಕೂಲಿಕಾರರು ವಸತಿಯಿಲ್ಲದೆಯೇ ಉಳಿದರು.

ಇನ್ನು ಗ್ರಾಮೀಣ ಪ್ರದೇಶಗಳಲ್ಲಿ ವಸತಿಗಾಗಿ ಗ್ರಾಮಸ್ಥರಿಂದ ಅವರು ಹೇಳಿದ ಬೆಲೆಗೆ ಜಮೀನು ಖರೀದಿಸಿ ಅದರಲ್ಲೊಂದು ಹಗರಣ. ನಿವೇಶನ ಹಂಚಿಕೆಯಲ್ಲಿ ಮತ್ತೊಂದು ಹಗರಣ. ಆಳುವ ಪಕ್ಷದ ಪುಢಾರಿಗಳು, ಶಾಸಕರು, ಅಧಿಕಾರಿಗಳು ಯಾರು 1000, 2000 ರೂ. ಲಂಚ ನೀಡುವರೋ ಅವರಿಗೆ ಹರಾಜು ಹಾಕಿದರು. ಒಬ್ಬೊಬ್ಬ ಶ್ರೀಮಂತ, ಮಧ್ಯಮ ವರ್ಗದ ರೈತನೂ ಮೂರು, ನಾಲ್ಕು ನಿವೇಶನ ಕೊಂಡು ಅಧಿಕಾರಿ-ರಾಜಕಾರಣಿಗಳ ಜೊಕ್ಕಸ ತುಂಬಿದರು. ಈ ಲಂಚದ ಹಣಕ್ಕಾಗಿ ತುಂಬಲು ಅನೇಕ ಕೂಲಿಕಾರರು ತಮ್ಮ ಬಳಿಯ ವಸ್ತುಗಳನ್ನೆಲ್ಲಾ ಅಡವಿಟ್ಟರು. ಅಂತಹ ವಸ್ತುಗಳೂ ಇಲ್ಲದ ಕೋಟ್ಯಾಂತರ ಕೂಲಿಕಾರರು ಮನೆಯಿಲ್ಲದೇ ಉಳಿದರು.


ಸಂಪಾದಕೀಯ

ಹೀಗೆ ಆಶ್ರಯ ಯೋಜನೆ ಭ್ರಷ್ಟರಿಗೆ ಆಶ್ರಯನೀಡಿತೇ ಹೊರತು ಬಡವಸತಿರಹಿತರಿಗಲ್ಲ. ಅಲ್ಲೊಂದು ಕಡೆ ಇಲ್ಲೊಂದು ಕಡೆ ಸಂಘಟನೆಗಳ ಹೋರಾಟದಿಂದ ಕೆಲವುಕೂಲಿಕಾರರಿಗೆ ಆಶ್ರಯ ಸಿಕ್ಕಿದೆ ಎಂಬುದಷ್ಟೇ ತೃಪ್ತಿ. ಮತ್ತು ಅನೇಕ ಕಡೆ ಆಶ್ರಯ ಮನೆಗಳ ನಿರ್ಮಾಣವಾದ ಮೇಲೆಯೇ ಊರಿನ ಜನಕ್ಕೆ ಈ ಮನೆಗಳ ಹಕ್ಕುದಾರರು ಎಂತೆಂತಹವರು ಎಂದು ತಿಳಿದುಬಂದದ್ದು. ಅಂತಹವರೆಗೂ ಪಟ್ಟಿ ಶಾಸಕ, ತಹಶೀಲ್ದಾರ, ಬಿಡಿಓಗಳು ಸುಪರ್ದಿಯಲ್ಲಿ, ಯಾಕೆಂದರೆ ಯಾರು ಈ ಅಧಿಕಾರಿಗಳಿಗೆ ಎಷ್ಟು ಹಣ ನೀಡಿ ಅದನ್ನು ಪಡೆದರು ಎಂಬುದು ಬಯಲಾಗಬಾರದಲ್ಲ ಅದಕ್ಕಾಗಿ. ಕೊನೆಗೆ ಅದು ಬಯಲಾಗಿ ಊರಿನಲ್ಲಿ ಹತ್ತಾರು, ನೂರಾರು ಎಕರೆಯ ಭೂ ಒಡೆಯರಿಗೆ ಈ ಮನೆಗಳು ಆಶ್ರಯ ನೀಡಲಿದೆ ಎಂದು ತಿಳಿದ ಮೇಲೆ ಗ್ರಾಮದ ಕೂಲಿಕಾರರು ರೊಚ್ಚಿಗೆದ್ದು ಮನೆಗಳನ್ನು ಆಕ್ರಮಿಸಿಕೊಂಡು ಯೋಜನೆಯ ಉದ್ದೇಶವನ್ನು ಸಾರ್ಥಕಗೊಳಿಸಿರುವುದೂ ಉಂಟು.

ಕರ್ನಾಟಕ ಸರ್ಕಾರ ಈಗಲಾದರೂ ಕಣ್ತೆರೆದು 'ಆಶ್ರಯ' ಯೋಜನೆಯ ಅಕ್ರಮಗಳನ್ನು ಬಯಲಿಗೆಳೆಯುವಂತಹ ಆಮೂಲಾಗ್ರ ತನಿಖೆ ನಡೆಸಬೇಕು. ಅಕ್ರಮವಾಗಿ ಅನರ್ಹರಿಗೆ ನೀಡಲಾದ ವಸತಿಗಳನ್ನು ಹಿಂದಕ್ಕೆ ಪಡೆದು ಬಡ ಜನರ ನಡುವೆ ಹಂಚಬೇಕು.

ನಿಜವಾದ ಬಡವರಿಗೆ - ವಸತಿಹೀನರಿಗೆ ತಲೆಯ ಮೇಲೊಂದು ಸೂರು ಸಿಗಬೇಕಾದದ್ದು ಬಹಳ ಅಗತ್ಯ ಇಂತಹದೊಂದು ವಸತಿಯಿಲ್ಲದ ಕೂಲಿಕಾರರು ಊರಿನ ಭೂಮಾಲಕ ಧಣಿಗಳ ಕೃಪೆಯಲ್ಲಿ ಅವರು ಹೇಳಿದಂತೆ ಕೇಳುವ ಗುಲಾಮಗಿರಿಗೆ ತಳ್ಳಲ್ಪಟ್ಟಿದ್ದಾರೆ. ಕರ್ನಾಟಕದಲ್ಲಿ ಅರ್ಧ ಕೋಟಿಯಷ್ಟಿರುವ ಕೂಲಿಕಾರರಿಗೆ, ಹಾಗೂ ಬಡರೈತರಿಗೆ ವಸತಿ ಸಿಗಬೇಕಾದರೆ ಬಹಳ ಮುಖ್ಯವಾಗಿ, ಮೊತ್ತಮೊದಲು ಮಾಡಬೇಕಾದ ಕೆಲಸವೆಂದರೆ ವಸತಿಹೀನರು ಈಗ ವಾಸವಿರುವ ಪ್ರದೇಶಗಳನ್ನು ಅವರಿಗೆ ಖಾಯಂಗೊಳಿಸುವುದು. ಇದರಿಂದ ಮಾತ್ರ ಲಕ್ಷಗಟ್ಟಲೆ ವಸತಿಹೀನರ ಸಮಸ್ಯೆ ತಟ್ಟನೆ ಪರಿಹಾರವಾದೀತು. ಹೊಸ ಪ್ರದೇಶಗಳನ್ನು ಹುಡುಕಿ ವಶಪಡಿಸಿಕೊಂಡು ಊರಿಗೆ ದೂರದಲ್ಲಿ ಯಾವುದೇ ನಾಗರಿಕ ಸೌಲಭ್ಯಗಳಿರದ ಕಡೆ ಒಂದು ಕಾಲೋನಿಯನ್ನು ಆರಂಭಿಸುವ ವರ್ಷಗಳೇ ಹಿಡಿಯುವ ಕೆಲಸಕ್ಕೆ ಬದಲಾಗಿ ಒಂದೇ ಏಟಿಗೆ ವಸತಿ ಸಮಸ್ಯೆಗೆ ಪರಿಹಾರಸಿಗುತ್ತದೆ.

ಇನ್ನು ಮನೆಗಳಲ್ಲಿ, ಗುಡಿಸಲುಗಳಲ್ಲಿ ಹೆಚ್ಚಾಗಿರುವ ಜನರ ಸಂಖ್ಯೆಯನ್ನು ಕಡಿಮೆ ಮಾಡಲು, ಹೊಸದಾಗಿ ಹೂಡಿದ ಸಂಸಾರಗಳ ಸಲುವಾಗಿ ವಸತಿ ಯೋಜನೆಗಳನ್ನು ರೂಪಿಸಬೇಕು. ಅದನ್ನು ರೂಪಿಸುವಾಗಲೇ ಗ್ರಾಮೀಣ ಬಡವರ ಸಂಘಟನೆಗಳ ಸಲಹೆಯನ್ನು ಪಡೆಯಬೇಕು. ಪಂಚಾಯತ್ ವ್ಯವಸ್ಥೆಗೆ ಅದರ ಜಾರಿಯನ್ನು ಒಪ್ಪಿಸಿ, ಗ್ರಾಮ ಸಭೆಗಳ ಮೂಲಕ ಅದನ್ನು ನಿಯಂತ್ರಿಸಬೇಕು. ಈ ನಿಯಂತ್ರಣದಲ್ಲಿ ಉಸ್ತುವಾರಿಯಲ್ಲಿ ಗ್ರಾಮೀಣ ಬಡವರ ಸಂಘಟನೆಗಳನ್ನು ಒಳಗೊಳ್ಳಬೇಕು.



ಸಮಿತಿಗಳ ಮೇಲೆ ಸಮಿತಿಗಳು ಟಾಸ್ಕ್ ಫೋರ್ಸ್‌ಗಳು, ಘೋಷಣೆಗಳು

ಜಿ.ಎನ್.ನಾಗರಾಜ

ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಮುಖ್ಯಮಂತ್ರಿಯವರು ತಾನು ಕೆಲಸ ಮಾಡುವ ಸರ್ಕಾರವೆಂದುತೋರಿಸಿಕೊಳ್ಳಲು ಪ್ರತಿದಿನ ಒಂದಲ್ಲ ಒಂದು ಘೋಷಣೆ ಮಾಡುತ್ತಿದ್ದಾರೆ. ಅದನ್ನೂ, ಇದನ್ನೂ, ಎಲ್ಲವನ್ನೂ ತಮ್ಮ ಸರ್ಕಾರ ಮಾಡಿಬಿಡುತ್ತದೆ ಎನ್ನುವ ಕಲ್ಪನೆಯನ್ನು ಮೂಡಿಸಲು ಪ್ರಯತ್ನಿಸುತ್ತಿದೆ. ವಿದ್ಯುತ್, ನೀರಾವರಿ, ಕೈಗಾರಿಕಾ ಬೆಳವಣಿಗೆ, ಶಿಕ್ಷಣ, ಆರೋಗ್ಯ, ವಸತಿ, ರಸ್ತೆ, ಕಂಪ್ಯೂಟರ್ ಆಡಳಿತ, ಮಾಹಿತಿ ತಂತ್ರಜ್ಞಾನ, ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸುವುದು. ಎಲ್ಲವನ್ನೂ ಮಾಡಲು ಟಾಸ್ಕ್ ಫೋರ್ಸ್‌ಗಳು ತಜ್ಞ ಸಮಿತಿಗಳನ್ನು ರಚಿಸುತ್ತಿದೆ. ಅವರು ವರದಿಗಳನ್ನು ನೀಡುತ್ತಾರೆ. ನೂರೆಂಟು ಕ್ರಮಗಳನ್ನು ಸೂಚಿಸುತ್ತಾರೆ. ಮುಂದೆ? ಅವುಗಳನ್ನು ಕಾರ್ಯಗತ ಮಾಡುವವರು ಯಾರು? ಅದಕ್ಕೆ ಬೇಕಾದ ಸಂಪನ್ಮೂಲಗಳು ಎಲ್ಲಿಂದ? ರಾಜ್ಯ ಸರ್ಕಾರ ದಿವಾಳಿಯಾಗಿದೆ ಎಂದು ಹೇಳುತ್ತಲೇ ಇವೆಲ್ಲವನ್ನು ನಾವು ಸಾಧಿಸುತ್ತೇವೆ ಎಂದೂ ಹೇಳುತ್ತಿರುವುದು ಯಾರನ್ನು ವಂಚಿಸಲಿಕ್ಕಾಗಿ?

ಇಲ್ಲಿಯವರೆಗೆ ರಾಜ್ಯ ಸರ್ಕಾರ ತನ್ನ ಆದಾಯವನ್ನು ಗಣನೀಯ ಪ್ರಮಾಣದಲ್ಲಿ - ಜನರ ಆಕಾಂಕ್ಷೆಗಳನ್ನು ಈಡೇರಿಸುವ ಪ್ರಮಾಣದಲ್ಲಿ - ಹೆಚ್ಚಿಸಿಕೊಳ್ಳುವ ಎರಡೇ ಮಾರ್ಗಗಳಲ್ಲಿ ಯಾವೊಂದಕ್ಕೂ ಪ್ರಯತ್ನ ಮಾಡಿಲ್ಲ. ಒಂದನೆಯದು ಕೇಂದ್ರ ಸರ್ಕಾರದಿಂದ ಹಣಕಾಸು ಸಂಪನ್ಮೂಲದ ವರ್ಗಾವಣೆ, ಆರ್ಥಿಕ ಅಧಿಕಾರದ ವಿಕೇಂದ್ರೀಕರಣದ ಬಗ್ಗೆ ದನಿಯೆತ್ತುವುದು ಇಡೀ ರಾಜ್ಯದ ಜನರನ್ನೂ ಒಳಗೊಳ್ಳುವುದು ಮತ್ತು ಇತರ ರಾಜ್ಯಗಳ ಸರ್ಕಾರ ಪಕ್ಷಗಳ ಸಹಾಯವನ್ನು ಪಡೆಯುವುದು. ಇತ್ತೀಚೆಗೆ ತಾನೆ ಹನ್ನೊಂದನೆಯ ಹಣಕಾಸು ಆಯೋಗ ರಚಿತವಾಗಿರುವುದರಿಂದ ಈ ಹಣಕಾಸು ವರ್ಗಾವಣೆಗಾಗಿ ಒತ್ತಾಯಿಸುವುದಕ್ಕೆ ಇದು ಸಕಾಲವೂ ಹೌದು. ಆದರೆ ರಾಜ್ಯ ಸರ್ಕಾರದಿಂದ ಈ ಬಗ್ಗೆ ಒಂದೇ ಒಂದು ಚಕಾರವೂ ಇಲ್ಲ.

ಮತ್ತೊಂದು ಮಾರ್ಗವೆಂದರೆ ರಾಜ್ಯದಲ್ಲಿಯೇ ಸಂಪನ್ಮೂಲ ಕ್ರೋಢಿಸುವುದು - ಬೆಲೆ ಏರಿಕೆಗಳಿಂದ ಬಳಲಿ ಬೆಂಡಾಗಿರುವ ಜನ ಸಾಮಾನ್ಯರ ಮೇಲೆ ಮತ್ತಷ್ಟು ತೆರಿಗೆ, ಬಸ್‌ದರ, ವಿದ್ಯುತ್ ದರ, ನೀರಿನ ದರ ಏರಿಕೆ ಮಾಡುವುದರ ಹೊರತು ಸರ್ಕಾರಕ್ಕೆ ಏನೂ ತೋಚುತ್ತಿಲ್ಲ. ದಿನ ಒಬ್ಬ ಮಂತ್ರಿ ಯಿಂದ ಈ ದರ ಏರಿಕೆ ಹಾಗೂ ತೆರಿಗೆ ಏರಿಕೆಯ ಬೆದರಿಕೆ ಬರುತ್ತಿವೆ. ಬಸ್ ದರ ಏರಿಕೆಯನ್ನಂತೂ ಈಗಾಗಲೇ ಮಾಡಲಾಗಿದೆ.

ಆದರೆ ವಾಣಿಜ್ಯ ತೆರಿಗೆಗಳ ಸೋರಿಕೆಯನ್ನು ತಡೆಗಟ್ಟುವುದು ಕೃಷಿ ಮತ್ತು ಆದಾಯ ತೆರಿಗೆಯನ್ನು ಹಾಕುವುದು, ನಗರಗಳಲ್ಲಿ ಶ್ರೀಮಂತರ ಆಸ್ತಿಗಳ ಮೇಲೆ ತೆರಿಗೆ ವಿಧಿಸುವುದು ಅಥವಾ ಏರಿಸುವುದು, ಇವುಗಳಿಂದ ಸಾವಿರಾರು ಕೋಟಿ ರೂ.ಗಳ ಹೊಸ ಮೂಲ ಕಂಡುಕೊಳ್ಳುವುದು ಸಾಧ್ಯವಿದೆ. ಆದರೆ ಇದು ಸರ್ಕಾರದ ತಲೆಯಲ್ಲಿಯೇ ಇಲ್ಲ.

ಹಾಗಾದರೆ ಈಸಮಿತಿಗಳು ಟಾಸ್ಕ್ ಫೋರ್ಸ್, ಮಿಷನ್‌ಗಳಿಗೆ ಅರ್ಥವೇನು?

ಈಗ ಸದ್ಯಕ್ಕೆ ಸರ್ಕಾರ ಆಡುತ್ತಿರುವ ಮಾತು ಎರಡೇ. ಒಂದು ಸಾಲ, ಸಾಲ, ಸಾಲ - ಕೇಂದ್ರ ಸರ್ಕಾರಂದ ಸಂಸ್ಥೆಗಳಿಂದ ಸಾಲ, ವಿಶ್ವ ಬ್ಯಾಂಕ್‌ನಿಂದ ಸಾಲ, ಬಂಡವಾಳ ಮಾರುಕಟ್ಟೆಯಿಂದ ಸಾಲ ಮತ್ತೊಂದು - ಖಾಸಗಿ ಬಂಡವಾಳಕ್ಕೆ ಆಹ್ವಾನ - ದೇಶಿ, ವಿದೇಶಿ ಖಾಸಗಿ ಬಂಡವಾಳಕ್ಕೆ ರತ್ನ ಗಂಬಳಿ ಹಾಸಿಕರೆಯುವುದು.

ಸಾಲವೆಂದರೆ ಅದರ ಬೆನ್ನ ಹಿಂದೆಯೇ ದುಬಾರಿ ಬಡ್ಡಿ ಹಾಗೂ ಸಾಲವನ್ನು ತೀರಿಸುವ ಹೊಣೆ ಹೋರಬೇಕಾಗುತ್ತದೆ. ಕೇಂದ್ರ ಸರ್ಕಾರದ ಸಂಸ್ಥೆಗಳಿಂದ ಮಾತ್ರ ಕಡಿಮೆ ಬಡ್ಡಿಯ ಹಣ ಸಿಗುವುದು. ಆದರೆ ಅವರಲ್ಲಿ ರಾಜ್ಯದ ಅವಶ್ಯಕತೆಯನ್ನು ಪೂರೈಸುವಷ್ಟು ಹಣವಿಲ್ಲ.

ಇಂತಹ ಪರಿಸ್ಥಿತಿಯಿಂದಾಗಿ ಇಂದು ಎಲ್ಲದಕ್ಕೂ ವಿಶ್ವಬ್ಯಾಂಕ್ ಕಡೆಗೆ ಕೈ ಚಾಚುವುದೇ ಆಗಿದೆ. ರಾಜ್ಯದ ದಿನದಿನದ ಅಗತ್ಯಕ್ಕೂ ವಿಶ್ವಬ್ಯಾಂಕ್ ಸಾಲಬೇಕಾಗಿದೆ. ಹೊಸ ಶಾಲೆ ಸ್ಥಾಪಿಸಲು, ಇರುವ ಶಾಲೆಗಳಿಗೆ ಮಾಸ್ತರರನ್ನು ನೇಮಿಸಲು, ಆಸ್ಪತ್ರೆಗಳನ್ನು ಸ್ಥಾಪಿಸಲು, ಅವುಗಳಿಗೆ ಉಪಕರಣ, ಔಷಧಿ ಒದಗಿಸಲು, ರಸ್ತೆರಿಪೇರಿ ಮಾಡಲು, ಹೊಸ ರಸ್ತೆ ಹಾಕಲು, ವಿದ್ಯುತ್ ತಯಾರಿಸಲು, ವಿದ್ಯುತ್ ಹರಿಸಲು ಎಲ್ಲದಕ್ಕೂ ವಿಶ್ವಬ್ಯಾಂಕ್ ಸಾಲಕ್ಕೆ ಕೈ ಚಾಚುವುದರ ಪರಿಣಾಮವೇನು? ಇದನ್ನು ಕಾಂಗ್ರೆಸ್ ಸರ್ಕಾರ, ಸಚಿವಸಂಪುಟ, ಹಾಗೂ ಪಕ್ಷ ಸ್ವಲ್ಪವಾದರೂ ಯೋಚಿಸಿದೆಯೇ?

ವಿಶ್ವ ಬ್ಯಾಂಕ್ ಸಾಲವೆಂದರೆ ಅವರ ಶರತ್ತುಗಳು ನಿಬಂಧನೆಗಳಿಗೆ ಮಣಿಯುವುದೆಂದೇ ಅರ್ಥ. ಅವರ ಶರತ್ತುಗಳು ನೂರಾರು. ಬಹಳ ಮುಖ್ಯವಾಗಿ

ಯಾವುದಕ್ಕಾಗಿ ಸಾಲ ಎತ್ತುತ್ತಿದ್ದರೋ
ವ್ಯವಸ್ಥೆಯಲ್ಲಿ ಲಾಭ ಬರುವಂತೆ ಬೆಲೆ, ದ
ಏರಿಸುವುದು, ರಸ್ತೆಯಾದರೆ ಸಾಗಣಿಕೆ ಗ
ವಿದ್ಯುತ್ ದರ, ಹೀಗೆ ಸಾಲ, ಬಡ್ಡಿ ತೆರ
ಸಾಧ್ಯವಾಗುವಂತೆ ಏರಿಸುವುದು. ಅಂದ
ರಾಜ್ಯ ಸರ್ಕಾರ ಯಾವುದಕ್ಕೂ ಸಬ್ಸಿಡಿ
ಸಹಾಯಧನ ನೀಡಬಾರದು ಎನ್ನು
ಅಂತರ್ಗತ ಸಿದ್ಧಾಂತ. ಒಟ್ಟಿನ
ಬಡವರನ್ನು ವಿವಿಧ ಸರ್ಕಾರಿ ಸೇವೆಗಳಿಂ
ವಂಚಿತರನ್ನಾಗಿ ಮಾಡುವುದು ಹಾಗ
ಇತರ ದುಡಿಯುವ ಜನರ ಜೀವನವ
ಕಸಿಯುವುದು. ಈ ಶರತ್ತಿನ ಜೊತೆ
ಅಂತರ್ರಾಷ್ಟ್ರೀಯ ಟೆಂಡರ್ ಕರೆಯಬೇಕ
ವಿದೇಶಗಳಿಂದ ದುಬಾರಿ ಬೆಲೆಯ ಸಾಮ
ಖರೀದಿಸಬೇಕು, ಆಧುನಿಕ ಯಂತ್ರಗಳ
ಉಪಯೋಗಿಸಿ ಈ ಯೋಜನೆಗಳಿಂ
ಉದ್ಯೋಗ ನಿರ್ಮಾಣ ಸಾಧ್ಯತೆಗಳ
ಕೊಲ್ಲಬೇಕು. ಬಹುರಾಷ್ಟ್ರೀಯ ಕಂಪನಿಗ
ಲಾಭ ಮಾಡಿಕೊಡಬೇಕು. ಇಂತ
ಶರತ್ತುಗಳಿಗೆ ಒಪ್ಪಿಕೊಂಡು ಕಾಂಗ್ರೆಸ್ ಅ
ಬೆಂಬಲಿಸಿದ ಬಡ, ಕೆಳ ಜಾತಿಗಳ ಜನ
ಹೊಟ್ಟೆಯ ಮೇಲೆ ಹೊಡೆಯಬೇಕು. ಇ
ಕಾಂಗ್ರೆಸ್ ಸರ್ಕಾರ ಸಿದ್ಧವಾದಂತಿದೆ. ಅ
ಪರಿಣಾಮವೇನು?

ಇವೆಲ್ಲದರ ಜೊತೆಗೆ ಈ ಸಾಲವ
ತೀರಿಸುವ ಹೊಣೆ ಮುಂದೆ ಕರ್ನಾಟಕ
ಜನತೆಯ ಮೇಲೆಯೇ.ಇಂದು ತೆ
ಹಾಕಲು ಹೆದರುವ ಸರ್ಕಾರಗಳು ಆದ
ಮುಂದಿನ ಸರ್ಕಾರಗಳ ಮೇಲೆ ವಗ
ಯಿಸಲು ಸಾಲಕ್ಕೆ ಮೊರೆ ಹೋಗುತ್ತ
ಆದ್ದರಿಂದ ಇಂದಲ್ಲದಿದ್ದರೆ ಮುಂ
ಕರ್ನಾಟಕದ ಸಾಮಾನ್ಯ ಜನರೇ ದುಬಾ
ತೆರಿಗೆಗಳು, ಬೆಲೆ ಏರಿಕೆಗಳ ಮೂ
ಸಾಲವನ್ನು ತೀರಿಸಬೇಕು, ಒಟ್ಟಿನ
ರಾಜ್ಯದ ಬಡಜನತೆಯನ್ನು ಹಿಂಡು
ಕೆಲಸ.

ಒಟ್ಟಿನಲ್ಲಿ ಶ್ರೀಮಂತರ ಮೇಲೆ ಇಂ
ತೆರಿಗೆ ಹಾಕಿ ರಾಜ್ಯದ ಅಭಿವೃದ್ಧಿಗೆ ಬೇಕ
ಹಣ ಸಂಗ್ರಹಿಸಲು ನಿರಾಕರಿಸು
ಸರ್ಕಾರಗಳು ಇಂದು ಮತ್ತೆ ಮುಂ
ಬಡಜನರು, ಸಾಮಾನ್ಯ ಜನರ ಮೇ
ದುಬಾರಿ ಹೊರೆಯನ್ನು ಹೇರಿ ಶ್ರೀಮಂ
ಶ್ರೀಮಂತಿಕೆ ಬೆಳೆಯಲು ಅನು
ಮಾಡಿಕೊಡುವ ಉದ್ದೇಶವುಳ್ಳ
ಕಾಂಗ್ರೆಸ್ ಪಕ್ಷ ದೇಶದಲ್ಲಿ ಹಾಗ
ರಾಜ್ಯದಲ್ಲಿ ಆಳಿದ ದೀರ್ಘ ಕಾಲದ
ಪ್ರದರ್ಶಿಸಿದ ತನ್ನ ಸ್ವರೂಪವನ್ನೇ ಯಾವ
ಮಾರ್ಪಾಟಿಲ್ಲದೆ ಪ್ರದರ್ಶಿಸುತ್ತಿದೆಯಷ್ಟೆ.

ಜ್ಯೋತಿಬಸು ನಿವೃತ್ತರಾಗುವುದಿಲ್ಲ

ಜ್ಯೋತಿಬಸು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಪದವಿಯಿಂದ ನಿವೃತ್ತರಾಗುವುದಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ನಿರ್ಧರಿಸಿದೆ. ಈ ನಿರ್ಧಾರವನ್ನು ಜ್ಯೋತಿಬಸು ಒಪ್ಪಿಕೊಂಡಿದ್ದಾರೆ. ಇತ್ತೀಚೆಗೆ ನಡೆದ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಆರೋಗ್ಯದ ಸಮಸ್ಯೆಗಳಿಂದ ಮುಖ್ಯಮಂತ್ರಿ ಪದವಿಯಿಂದ ನಿವೃತ್ತರಾಗುವ ಜ್ಯೋತಿಬಸುರವರ ಕೋರಿಕೆಯನ್ನು ಚರ್ಚಿಸಿ ಈ ನಿರ್ಧಾರಕ್ಕೆ ಬಂದಿದೆ. ಜ್ಯೋತಿಬಸುರವರ ಮೇಲೆ ಕೆಲಸದ ಹೊರೆ ಕಡಿಮೆ ಮಾಡಲು ಉಪಮುಖ್ಯಮಂತ್ರಿ ನೇಮಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಪಶ್ಚಿಮ ಬಂಗಾಳ ರಾಜ್ಯ . ಸಮಿತಿಯನ್ನು ಪೊಲಿಟ್‌ಬ್ಯೂರೋ ಕೋರಿದೆ.

ಪಶ್ಚಿಮ ಬಂಗಾಳ ಮತ್ತು ದೇಶ ಇಂದು ಎದುರಿಸುತ್ತಿರುವ ಸಂದಿಗ್ಧ ಪರಿಸ್ಥಿತಿಯಲ್ಲಿ ಜ್ಯೋತಿಬಸುರವರ ಅಗಾಧ ರಾಜಕೀಯ, ಆಡಳಿತ ಪರಿಣತೆ ಅನುಭವ ಬೇಕಾಗಿದೆ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಜ್ಯೋತಿಬಸು ಅವರ ಅಪಾರ ಅನುಭವದ ಕೊಡುಗೆ ಮುಂದುವರೆಯುವ ಅಗತ್ಯವಿದೆ ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ಜ್ಯೋತಿಬಸು ಕೆಲವು ಕಾಲದಿಂದ ನಿವೃತ್ತರಾಗುವ ಬಯಕೆ ವ್ಯಕ್ತಪಡಿಸಿದ್ದು, ಸಿಪಿಐ(ಎಂ) ಪಶ್ಚಿಮ ಬಂಗಾಳ ರಾಜ್ಯಸಮಿತಿ, ಪಶ್ಚಿಮ ಬಂಗಾ
ಇತರ ಎಡಪಕ್ಷಗಳು, ಎಡರಂ
ರಾಜ್ಯ ಸಮಿತಿ ಅವರು ಮುಂದುವರೆಯಬೇಕೆಂದು ಕೋರಿದ್ದರು. ಈ ಬಗ್ಗೆ ಸುದ್ದಿ ಮಾಧ್ಯಮಗಳು ಭಾರೀ ಪ್ರಚಾ
ನಡೆಸಿದ್ದರು, ಇದು ಒಂದು ದೊಡ್ಡ ವಿಷಯ ಎಂಬಂತೆ. ಪೊಲಿಟ್‌ಬ್ಯೂರೋ ನಿರ್ಣಯ ಇದಕ್ಕೆಲ್ಲಾ ಮಂಗಳ ಹಾಡಿದೆ.

ರಾಜ್ಯದ ಭವಿಷ್ಯ ನಿಧಿ ಸಂಘಟನೆ ಈಗ ಸುದ್ದಿಯಲ್ಲಿದೆ. ಭವಿಷ್ಯ ನಿಧಿ ವಂತಿಗೆದಾರರ ಹೆಸರಲ್ಲಿ ಸುಳ್ಳು ಅರ್ಜಿಯ ಮೂಲಕ ಸಾಲದ ಮೊತ್ತವನ್ನು ನುಂಗಿಹಾಕಿ ಕಾರ್ಮಿಕರ ಬೆವರಿನ ದುಡಿತದ ಉಳಿತಾಯವನ್ನು ವಂಚಿಸುವ ಒಂದು ವ್ಯವಸ್ಥಿತ ಜಾಲವೇ ಕಾರ್ಯರತವಾಗಿದೆ ಎಂದು ತಿಳಿದುಬಂದಿದೆ. ಕಾರ್ಮಿಕರ ನಿವೃತ್ತ ಬದುಕನ್ನು ತುಸುವಾದರೂ ಸುಗಮಗೊಳಿಸಲೆಂದು ರೂಪುಗೊಂಡ ಈ ಸಂಘಟನೆ ವಾಸ್ತವವಾಗಿ ಕಾರ್ಮಿಕರ ದುಡಿಮೆಯ ಬದುಕನ್ನೇ ಕಿರುಕುಳಮಯವಾಗಿಸಿದೆ. ಇದರ ವಿರುದ್ಧ ಕಾರ್ಮಿಕರ ಆಕ್ರೋಶಕ್ಕೆ ಒಂದು ಸಂಘಟಿತ ರೂಪ ಇದೇ ನವೆಂಬರ್ ೧೫ ರಂದು ರಾಜ್ಯದ ಭವಿಷ್ಯ ನಿಧಿ ಕಚೇರಿಗಳ ಮುಂದೆ ಕಾರ್ಮಿಕರ ಧರಣಿಯ ಮೂಲಕ ವ್ಯಕ್ತಗೊಂಡಿದೆ. ಈ ಸಂದರ್ಭದಲ್ಲಿ ಕಾರ್ಮಿಕರ ಸಮಸ್ಯೆಯ ಬಗ್ಗೆ ಸಿಐಟಿಯು ಬೆಂಗಳೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿಯವರ ಲೇಖನ.

ಕಾರ್ಮಿಕರ ಭವಿಷ್ಯ ನಿಧಿ ನುಂಗಿದ ಇನ್ನೂರು ಕೋಟಿ ರೂ. ಹಗರಣ

ಮೀನಾಕ್ಷಿ ಸುಂದರಂ

ಭವಿಷ್ಯ ನಿಧಿ ಅಥವಾ ಪ್ರಾವಿಡೆಂಟ್ ಫಂಡ್ ಒಬ್ಬಕಾರ್ಮಿಕ ತನ್ನ ಉದ್ಯೋಗದಿಂದ ನಿವೃತ್ತನಾಗಿ ಆದಾಯವಿಲ್ಲದಂತಾದಾಗ ಆತನ ಉಳಿದ ಬದುಕು ಬೀದಿ ಪಾಲಾಗದಿರಲಿ ಎಂಬ ಆಶಯದಿಂದ ರೂಪಿಸಲಾಗಿರುವ ಯೋಜನೆ. ನೌಕರರ ಭವಿಷ್ಯ ನಿಧಿ ಸಂಘಟನೆ ವಿಶ್ವದಲ್ಲೆ ಅತ್ಯಂತ ದೊಡ್ಡ ಸಾಮಾಜಿಕ ಭದ್ರತಾ ಸಂಘಟನೆ ಎಂದು ಹೇಳಲಾಗುತ್ತಿದೆ. ಆದರೆ ಇಲ್ಲಿ, ಕರ್ನಾಟಕದಲ್ಲಿ ಬಡು ಕಾರ್ಮಿಕರು ಬೆವರು ಸುರಿಸಿ ಗಳಿಸಿದ್ದರಲ್ಲಿ ಕಷ್ಟಪಟ್ಟು ಉಳಿಸಿದ್ದನ್ನು ನುಂಗಿ, ನಿವೃತ್ತನಾಗುವ ವೇಳೆಗೆ ಕಾರ್ಮಿಕನ ಭವಿಷ್ಯ ಬೀದೀಪಾಲಾಗುವಂತೆ ಮಾಡುವವರ ತಾಣವಾದಂತಿದೆ.

ಲಂಚ - ಈಗ ನಮ್ಮ ಜನಸಾಮಾನ್ಯರ ಬದುಕಿನ ಸಾಮಾನ್ಯ ಸಂಗತಿ. ಸಂಘಟಿತ ಕಾರ್ಮಿಕನಿಗೆ ಭವಿಷ್ಯ ನಿಧಿ ಕಚೇರಿಯಲ್ಲಿನ ಲಂಚವೂ ಆಶ್ಚರ್ಯ ತರುವುದಿಲ್ಲ. ಆದರೂ ಇತ್ತೀಚೆಗೆ ಬಂದಿರುವ ಸುದ್ದಿ ಈ ಹಿನ್ನೆಲೆಯಲ್ಲೂ ಆಘಾತಕಾರಿ. ಸುಮಾರು 200 ಕೋಟಿ ರೂ.ಗಳಷ್ಟು ಕಾರ್ಮಿಕರ ಬೆವರಿನ ಉಳಿತಾಯವನ್ನು ನುಂಗಿ ನೀರು ಕುಡಿದ ಒಂದು ಹಗರಣದ ಸಿಬಿಐ ತನಿಖೆ ಈಗ ನಡೆಯುತ್ತಿದೆ.

ಈ ಬಗ್ಗೆ ಹೆಚ್ಚಿನ ವಿವರಗಳು ಇನ್ನೂ ದೊರೆತಿಲ್ಲ. ಆದರೆ ಇದೊಂದು ವ್ಯವಸ್ಥಿತ ವಂಚಕ ಜಾಲ ಎಂಬುದು ಸ್ಪಷ್ಟ. ಪ್ರತಿತಿಂಗಳು ಕಾರ್ಮಿಕನ ಸಂಬಳದಿಂದ 10% ಕಡಿತ ಮಾಡಿ, ಮಾಲಕನೂ ಅಷ್ಟೇ ಹಣವನ್ನು ಅದಕ್ಕೆ ಸೇರಿಸಿ ಭವಿಷ್ಯನಿಧಿ ಸಂಘಟನೆಗೆ ತೆರಬೇಕು. ಇದು ಆತನ ಹೆಸರಲ್ಲಿ ಅಲ್ಲಿ ವೃದ್ಧಿಯಾಗುತ್ತಿರುತ್ತದೆ. ಆತನ ನಿವೃತ್ತಿಯ ವೇಳೆಗೆ ಇದು ಬಡ್ಡಿಯೊಂದಿಗೆ ಮೊತ್ತವಾಗಿ, ಭವಿಷ್ಯನಿಧಿಯಾಗಿ ಸಿಗುತ್ತದೆ. ಅದಕ್ಕೆ ಮೊದಲು ಕಾರ್ಮಿಕನಿಗೆ ತನ್ನ ಕುಟುಂಬದವರ ಮದುವೆ, ಶಿಕ್ಷಣ, ಕಾಯಿಲೆ ಇತ್ಯಾದಿ ಖರ್ಚುಗಳಿಗೆ ಸಾಲ ಪಡೆಯುವ ವ್ಯವಸ್ಥೆಯಿರುತ್ತದೆ. ಹಗರಣಕೋರರು ಇದನ್ನು ವ್ಯವಸ್ಥಿತವಾಗಿ ಬಳಸಿಕೊಂಡಿದ್ದಾರೆ ಎಂದು ತಿಳಿದು ಬಂದಿದೆ.

ರಾಮಣ್ಣ ಒಬ್ಬ ಕಾರ್ಮಿಕ, ಆತನ ಸಂಬಳದಿಂದ ಪ್ರತಿತಿಂಗಳು 200 ರೂ. ಕಡಿತ ಮಾಡಿ, ಆತನ ಮಾಲಕನೂ 200 ರೂ. ಸೇರಿಸಿ ಭವಿಷ್ಯನಿಧಿ ಕಚೇರಿಗೆ ಜಮಾ ಮಾಡುತ್ತಿರುತ್ತಾನೆ ಎಂದಿಟ್ಟುಕೊಳ್ಳಿ. ಈ ಹಗರಣಕೋರರು ರಾಮಣ್ಣನ ಕೆಲಸದ, ಆತನ ಕಾರ್ಖಾನೆಯ, ಭವಿಷ್ಯ ನಿಧಿ ಖಾತೆಯ ವಿವರಗಳನ್ನು ತಿಳಿದುಕೊಂಡು ಆತನ ಹೆಸರಲ್ಲಿ ಒಂದು ಸಾಲದ ಅರ್ಜಿಯನ್ನು ತಾವೇ ಸಲ್ಲಿಸುತ್ತಾರೆ - ಮಗಳ ಮದುವೆಯೆಂದು. ಸಾಲ ನೀಡಲಾಗುತ್ತದೆ. ಅದು ಈ ಹಗರಣಕೋರರ ಜೇಬು ಸೇರುತ್ತದೆ. ಆದರೆ ರಾಮಣ್ಣನಿಗೆ ಇದರ ಪತ್ತೆಯೇ ಸಿಗುವುದಿಲ್ಲ. ನಿವೃತ್ತನಾಗುವ ವೇಳೆಗ 'ನಿನ್ನ ಭವಿಷ್ಯನಿಧಿ ಖಾತೆಯಲ್ಲಿ ಬಿಡಿಕಾಸು ಮಾತ್ರ. ಜಮಾ ಆದ ಅಸಲು, ಬಡ್ಡಿ ಸಾಲ ಮತ್ತು ಅದರ ಬಡ್ಡಿಗೆ ವಜಾ ಆಗಿದೆ' ಎಂದು ಪಿ.ಎಫ್. ಆಫೀಸಿನವರು ಹೇಳಿದಾಗ ರಾಮಣ್ಣ ಕಕ್ಕಾಬಿಕ್ಕಿಯಾಗುತ್ತಾನೆ. ಇಲ್ಲಾ ಸ್ವಾಮಿ, ನನಗೆ ಮಗಳೇ ಇಲ್ಲ, ಸಾಲ ತಗೊಂಡೇ ಇಲ್ಲ ಎಂದು ಹೇಳುವ ರಾಮಣ್ಣನಿಗೆ ಆತನ ಸಹಿ ಇರುವ ಸಾಲದ ಅರ್ಜಿಯನ್ನು ಆತನ ಹೆಸರಲ್ಲಿ ನೀಡಿದ ಸಾಲದ ವಿವರವನ್ನು ತೋರಿಸಲಾಗುತ್ತದೆ. ಹೀಗೆ ಹಲವಾರು ಕಾರ್ಮಿಕರ ಹೆಸರಲ್ಲಿ ಸಾಲದ ಅರ್ಜಿಗಳ ಫೋರ್ಜರಿ ಮಾಡಿ 200 ಕೋಟಿ ರೂ. ನುಂಗಿದ ಹಗರಣ ಇದು. ಇದೊಂದು ವ್ಯವಸ್ಥಿತ ಜಾಲ ಎಂದು ಬೇರೆ ಹೇಳಬೇಕಾಗಿಲ್ಲ.

ಹೌದು, ಇದೊಂದು ಸಾಮಾನ್ಯ ಹಗರಣವಲ್ಲ. ಆದರೆ ಈ ಮೊದಲೇ ಹೇಳಿದಂತೆ ತನ್ನದೇ ಉಳಿತಾಯದ ಹಣದಿಂದ ಮದುವೆ, ಕಾಯಿಲೆ ಇತ್ಯಾದಿಗಳಿಗೆ ಸಾಲಕೇಳಲೆಂದು ಬಂದ ಕಾರ್ಮಿಕ ಹಲವು ಕೈಗಳನ್ನು ಬೆಚ್ಚಗೆ ಮಾಡಬೇಕಾಗುತ್ತದೆ. ಇದೂ ವ್ಯವಸ್ಥಿತವಾಗಿ ನಡೆಯುತ್ತದೆ. ಈ ಕೆಲಸಕ್ಕೇ ಏಜೆಂಟುಗಳಿರುತ್ತಾರೆ. ಲಂಚದ ದರಗಳೂ ನಿಗದಿತ. ಈ ವ್ಯವಸ್ಥೆಯನ್ನು ಒಪ್ಪದಿದ್ದರೆ ತಿಂಗಳಾದರೂ ಸಾಲ ಸಿಗುವುದಿಲ್ಲ. ನಿವೃತ್ತನಾದಾಗ ಭವಿಷ್ಯನಿಧಿಯ ಇತ್ಯರ್ಥವೂ ಆಗುವುದಿಲ್ಲ.

ಮಾಲಕರ ವಂಚನೆ ಇನ್ನೊಂದು ತರದ್ದು. ಪಿ.ಎಫ್. ಸೌಲಭ್ಯ ಕಾನೂನು ನಿರ್ದಿಷ್ಟ ಉದ್ದಿಮೆಗಳಲ್ಲಿ 20 ಅಥವಾ ಅದಕ್ಕಿಂತ ಹೆಚ್ಚು ಕಾರ್ಮಿಕರು/ನೌಕರರು ಇದ್ದಲ್ಲಿ ಜಾರಿ ಮಾಡಲೇಬೇಕು. ಕಾಂಟ್ರಾಕ್ಟ್ ಕಾರ್ಮಿಕರಿಗೂ ಈ ಕಾನೂನು ಅನ್ವಯವಾಗುತ್ತದೆ. ಇದಲ್ಲದೆ ಪಿ.ಎಫ್. ಸದಸ್ಯರಿಗೆ ಪೆನ್ಷನ್ ಮತ್ತು ವಿಮಾ ಸೌಲಭ್ಯ ಜಾರಿಯಾಗಬೇಕು. ಜಾರಿ ಮಾಡಲೇಬೇಕು. ಇದು ಜ್ಯಾರಿಯಾಗುವಂತೆ ಪಿ.ಎಫ್. ಕಛೇರಿ ನಿಗಾ ವಹಿಸಬೇಕು. ಕರ್ನಾಟಕವೂ ಸೇರಿದಂತೆ ಒಟ್ಟು 17 ಪ್ರಾದೇಶಿಕ ಕಚೇರಿಗಳಿವೆ. ಕರ್ನಾಟಕದಲ್ಲಿ 5 ಉಪಪ್ರಾದೇಶಿಕ ಕಚೇರಿಗಳಿವೆ - ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಮೈಸೂರು ಮತ್ತು ಗುಲ್ಬರ್ಗಾದಲ್ಲಿ ಇದಲ್ಲದೆ ಇನ್ಸ್‌ಪೆಕ್ಟರ್ ಕಚೇರಿಗಳಿವೆ. ನಮ್ಮ ರಾಜ್ಯದಲ್ಲಿ ಬೆಂಗಳೂರು, ಕೋಲಾರ, ಮೈಸೂರು, ಹುಬ್ಬಳ್ಳಿ, ಬೆಳಗಾಂ, ಬಿಜಾಪುರ ಬಳ್ಳಾರಿ, ಗುಲ್ಬರ್ಗ, ಚಿಕ್ಕಮಗಳೂರು, ಮಡಿಕೇರಿ, ರಾಯಚೂರು, ಹಾಸನ, ಶಿವಮೊಗ್ಗ ಮತ್ತು ಮಂಗಳೂರಿನಲ್ಲಿ ಇನ್ನೂ ಇವೆ. ಪಿ.ಎಫ್. ಪೆನ್ಶನ್ ಮತ್ತು ವಿಮಾ ಸೌಲಭ್ಯ ಜಾರಿಯಾಗುತ್ತಿದೆಯೇ ಎಂಬುದರ ಉಸ್ತುವಾರಿ ನಡೆಸಲು ಇಷ್ಟೆಲ್ಲಾ ವ್ಯವಸ್ಥೆಯಿದ್ದರೂ ಮಾಲಕರು ಮತ್ತು ಪಿ.ಎಫ್. ಕಚೇರಿ ಶಾಮೀಲಿನೊಂದಿಗೆ ಹಲವಾರು ನೌಕರರು/ಕಾರ್ಮಿಕರನ್ನು ಈ ಸೌಲಭ್ಯಗಳಿಂದ ವಂಚಿಸಲಾಗುತ್ತಿದೆ. ಕರ್ನಾಟಕದ ಕೋಟ್ಯಾಂತರ ಕಾರ್ಮಿಕರಲ್ಲಿ ಭವಿಷ್ಯನಿಧಿ ಯೋಜನೆಯ ಸೌಲಭ್ಯ ಪಡೆದಿರುವವರ ಸಂಖ್ಯೆ ಕೇವಲ 16.46 ಲಕ್ಷ.

ಮಾಲಕರು ಮಾಡುವ ಮತ್ತೊಂದು ವಂಚನೆಯೆಂದರೆ ಕಾರ್ಮಿಕರ ಸಂಬಳದಿಂದ ಕಡಿತ ಮಾಡಿದ ಪಿ.ಎಫ್. ವಂತಿಗೆಯನ್ನು ಪಿ.ಎಫ್. ಕಚೇರಿಗೆ ಸಲ್ಲಿಸದಿರುವುದು. ಹೀಗೆ ಸಲ್ಲಿಸಿಲ್ಲ ಎಂಬ ಅಂಶವೂ ಕಾರ್ಮಿಕರ ಗಮನಕ್ಕೆ ಬರುವುದಿಲ್ಲ. ಇದು ಪಿ.ಎಫ್. ಕಚೇರಿಯವರ ಶಾಮೀಲಿನೊಂದಿಗೆ ಮಾತ್ರ ಸಾಧ್ಯ ಎಂಬುದು ಸ್ವಯಂವೇದ್ಯ.

31.3.1999 ರ ವೇಳೆಗೆ ಕರ್ನಾಟಕದ ಒಟ್ಟು 758 ಕಾರ್ಖಾನೆ/ಕಚೇರಿಗಳಿಂದ 14.38 ಕೋಟಿ ರೂ. ಪಿ.ಎಫ್. ವಂತಿಗೆ ಬಾಕಿಯಿದೆ. ಇದರಲ್ಲಿ ಖಾಸಗೀ ವಲಯದ್ದು 12.67 ಕೋಟಿ ರೂ. ಹಾಗೂ ಸಾರ್ವಜನಿಕ ವಲಯದ 12 ಸಂಸ್ಥೆಗಳ ಬಾಕಿ 170.74 ಕೋಟಿ ರೂ. ಇದೆ.

ಇದಲ್ಲದೆ ದೊಡ್ಡ-ದೊಡ್ಡ ಕಾರ್ಖಾನೆ-ಕಚೇರಿಗಳು ತಮ್ಮದೇ ಆದ ಭವಿಷ್ಯನಿಧಿ ಟ್ರಸ್ಟ್‌ಗಳನ್ನು ಹೊಂದಲು ಅವಕಾಶವಿದೆ. ಇದನ್ನು ವಿನಾಯ್ತಿ ಪಡೆದ ಸಂಸ್ಥೆಗಳು ಎನ್ನಲಾಗುತ್ತದೆ. ಕರ್ನಾಟಕದಲ್ಲಿ ಇಂತಹ 122 ಸಂಸ್ಥೆಗಳಿದ್ದು ಇವುಗಳಲ್ಲಿಯೂ 7 ಸಂಸ್ಥೆಗಳು 31.3.99 ರವರೆಗೆ 20.86 ಕೋಟಿ ರೂ. ವಂತಿಗೆ ಬಾಕಿ ಮಾಡಿಕೊಂಡಿವೆ. ಇವುಗಳಲ್ಲಿ ಬಹುದೊಡ್ಡ ಪಾಲು ಹೆಚ್.ಎಂ.ಟಿ. ಯದ್ದು(12.51 ಕೋಟಿ ರೂ.) ಇದು ಖಾಸಗೀಕರಣ, ಉದಾರೀಕರಣ, ಜಾಗತೀಕರಣದ 'ಆರ್ಥಿಕ ಸುಧಾರಣೆ'ಯ ಫಲ ಎಂದು ಬೇರೆ ಹೇಳಬೇಕಾಗಿಲ್ಲ. ಇದಲ್ಲದೆ ಎಂ.ಇ.ಐ. 4.7 ಕೋಟಿ ರೂ, ಬಿನ್ನಿ ಮಿಲ್ 1.38 ಕೋಟಿ ರೂ. ಬಾಕಿ ಮಾಡಿಕೊಂಡಿವೆ.

ಪುಟ 8 ನೋಡಿ

ಭವಿಷ್ಯ ನಿಧಿ ಸಂಘಟನೆ


ಹಲವಾರು ವರ್ಷಗಳ ಸತತ ಹೋರಾಟದ ಫಲವಾಗಿ ಸ್ವತಂತ್ರ ಭಾರತದ ಸರಕಾರ 1952 ರಿಂದ ನೌಕರರ ಭವಿಷ್ಯ ನಿಧಿ ಯೋಜನೆಯನ್ನು ಜಾರಿಗೆ ತಂದಿತು. ಹಲವಾರು ವರ್ಷಗಳ ದುಡಿಮೆಯ ನಂತರ ನಿವೃತ್ತನಾಗಿ ಹೋಗುವಾಗ ಕಾರ್ಮಿಕ/ನೌಕರ ಬರಿಗೈಯಲ್ಲಿ ಹೋಗುವಂತಾಗದಿರಲಿ ಎಂದು ಪ್ರತಿತಿಂಗಳು ಆತನ/ಆಕೆಯ ಸಂಬಳದಿಂದ ನಿರ್ದಿಷ್ಟ ವಂತಿಗೆಯನ್ನು(ಈಗ 10%) ಸಂಗ್ರಹಿಸಿ, ಅದಕ್ಕೆ ಸಮನಾಗಿ ಮಾಲಕರಿಂದಲೂ ಸಂಗ್ರಹಿಸಿ ಅದನ್ನು ಭವಿಷ್ಯನಿಧಿ ಖಾತೆಯಲ್ಲಿ ಹಾಕಿ ಬಡ್ಡಿ ಸಹಿತ (ಪ್ರಸಕ್ತ ದರ 12% ವಾರ್ಷಿಕ) ನಿವೃತ್ತಿಯ ವೇಳೆಗೆ ಒಂದು ಗಂಟಾಗಿ ನೀಡುವ ಯೋಜನೆಯಿದು.

- 1976 ರಲ್ಲಿ ಭವಿಷ್ಯ ನಿಧಿಗೆ ಸಂಬಂಧ ಪಟ್ಟಂತೆ ಇನ್ನೊಂದು ಯೋಜನೆಯನ್ನು ಜಾರಿಗೆ ತರಲಾಯಿತು. ಅದೆಂದರೆ ನೌಕರರ ಠೇವಣಿ-ಸಂಬಂಧಿತ ವಿಮಾ ಯೋಜನೆ. ಉದ್ಯೋಗದಲ್ಲಿರುವಾಗ ಒಬ್ಬ ನೌಕರ ಸತ್ತರೆ ಆತನ ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಆತನ ಭವಿಷ್ಯ ನಿಧಿ ಖಾತೆಯಲ್ಲಿ ಕೊನೆಯ 12 ತಿಂಗಳು ಇದ್ದ ಸರಾಸರಿ ಹಣದಷ್ಟು (ಗರಿಷ್ಠ ಮಿತಿ ರೂ. 35000/-)ವಿಮಾ ಹಣವನ್ನು ಈ ಯೋಜನೆಯಡಿ ನೀಡಲಾಗುತ್ತದೆ.
- 1995 ರಲ್ಲಿ ಭವಿಷ್ಯ ನಿಧಿ ವಂತಿಗೆದಾರರಿಗೆ ಪೆನ್ಶನ್ ಯೋಜನೆಯನ್ನು ಜಾರಿಗೆ ತರಲಾಯಿತು. ಇದರಲ್ಲಿ ಮಾಲಕರ 8.33% ವಂತಿಗೆಯನ್ನು ಹಾಗೂ ಸರಕಾರದ 1.16%ವನ್ನು ಸೇರಿಸಿ ವಂತಿಗೆದಾರರಿಗೆ ನಿವೃತ್ತಿವೇತನ ಕೊಡಲಾಗುತ್ತದೆ. ಇದೂ ಕೂಡಾ ಕಾರ್ಮಿಕ ಚಳುವಳಿಯ ಬಹುದಿನಗಳ ಹೋರಾಟದ ಫಲ. ಆದರೂ ಕಾರ್ಮಿಕ ಆಂದೋಲನದ ನಿರೀಕ್ಷೆಯ ಮಟ್ಟವನ್ನು ತಲುಪದ ಯೋಜನೆಯಿದು.

ಈ ವಂತಿಗೆಗಳ ಸಂಗ್ರಹ, ಹೂಡಿಕೆ, ಇತ್ಯರ್ಥಗಳಿಗಾಗಿ ರೂಪಿಸಿದ ಸಂಘಟನೆ ನೌಕರರ ಭವಿಷ್ಯ ನಿಧಿ ಸಂಘಟನೆ, ಸರಕಾರದ ಮಾಲಕರ ಮತ್ತು ನೌಕರರ ಪ್ರತಿನಿಧಿಗಳಿರುವ 'ಕೇಂದ್ರ ಟ್ರಸ್ಟಿ ಮಂಡಳಿ' ಯೆಂಬ ತ್ರಿಪಕ್ಷೀಯ ವ್ಯವಸ್ಥೆ ಈ ಯೋಜನೆಗಳ ಆಡಳಿತವನ್ನು ನೋಡಿಕೊಳ್ಳುತ್ತದೆ. ಕೇಂದ್ರ ಟ್ರಸ್ಟಿ ಮಂಡಳಿಯಡಿ ವಿವಿಧ ರಾಜ್ಯಗಳಲ್ಲಿ ಇದೇ ರೀತಿ ಒಟ್ಟು 17 ತ್ರಿಪಕ್ಷೀಯ ಪ್ರಾದೇಶಿಕ ಸಮಿತಿಗಳು, 58 ಉಪ ಪ್ರಾದೇಶಿಕ ಕಚೇರಿಗಳು, 11 ಉಪ ಲೆಕ್ಕಪತ್ರ ಕಚೇರಿಗಳು ಕೆಲಸ ಮಾಡುತ್ತಿದೆ. ಕರ್ನಾಟಕದಲ್ಲಿ 5 ಉಪ ಪ್ರಾದೇಶಿಕ ಕಚೇರಿಗಳು ಹಾಗೂ ಪೀಣ್ಯದಲ್ಲಿ ಉಪ ಲೆಕ್ಕಪತ್ರ ಕಚೇರಿ ಕೆಲಸ ಮಾಡುತ್ತಿದೆ. ಇದಲ್ಲದೆ ರಾಜ್ಯದಲ್ಲಿ 14 ಸ್ಥಳಗಳಲ್ಲಿ ಇನ್ಸ್‌ಪೆಕ್ಷನ್ ಕಚೇರಿಗಳಿವೆ. ಮಾಲಕರು ಭವಿಷ್ಯ ನಿಧಿ ಯೋಜನೆಯನ್ನು ಕಾನೂನಿನ ಪ್ರಕಾರ ಜಾರಿ ಮಾಡುತ್ತಿದ್ದಾರೆಯೇ ಎಂದು ಪರೀಕ್ಷಿಸುವುದು ಇವುಗಳ ಕೆಲಸ.

ಜೆಮ್ ಗ್ರೆನೈಟ್ಸ್ ಇಳಕಲ್‌ನಲ್ಲಿರುವ ಒಂದು ಮಧ್ಯಮ ಪ್ರಮಾಣದ ಉದ್ದಿಮೆ. ಆದರೆ ಇಲ್ಲಿನ 700 ಕ್ಕೂ ಹೆಚ್ಚು ಕಾರ್ಮಿಕರನ್ನು ಪಿ.ಎಫ್. ವಂತಿಗೆದಾರರನ್ನಾಗಿ ಇದುವರೆಗೂ ಮಾಡಿಲ್ಲ. ಒಬ್ಬ ಕಾರ್ಮಿಕ ಇಲ್ಲಿ 2.4.84 ರಿಂದ ದುಡಿಯುತ್ತಿದ್ದಾರೆ. ಆದರೆ ಆತನನ್ನು ಪಿ.ಎಫ್. ವಂತಿಗೆದಾರನ್ನನ್ನಾಗಿ ಮಾಡಿದ್ದು 1.1.99 ರಿಂದ ಮಾತ್ರವೇ. ನೌಕರರ ಭವಿಷ್ಯನಿಧಿ ಸಂಘಟನೆಯ ಕರ್ನಾಟಕ ಪ್ರಾದೇಶಿಕ ಸಮಿತಿಯಲ್ಲಿ ಸಿಐಟಿಯುವನ್ನು ಪ್ರತಿನಿಧಿಸುತ್ತಿರುವ ಕೆ.ವಿ.ಶ್ರೀನಿವಾಸನ್ ಈ ವಿಷಯವನ್ನು ಇತ್ತೀಚೆಗೆ ಪ್ರಾದೇಶಿಕ ಕಚೇರಿಯ ಗಮನಕ್ಕೆ ತಂದರು. ಪ್ರಾದೇಶಿಕ ಕಚೇರಿ ಈ ಬಗ್ಗೆ ಗುಲ್ಬರ್ಗ ಉಪ ಪ್ರಾದೇಶಿಕ ಕಚೇರಿಗೆ ಬರೆದಿರುವುದಾಗಿ ಸಿಐಟಿಯುಗೆ ತಿಳಿಸಿದೆ.

ಇದು ಹೇಗಾಗಲು ಸಾಧ್ಯ? ನೌಕರರ ಭವಿಷ್ಯ ನಿಧಿ ವ್ಯವಸ್ಥೆ ಕೆಲಸ ಮಾಡುತ್ತಿರುವ ರೀತಿಗೆ ಇದೊಂದು ನಿದರ್ಶನ ಮಾತ್ರ.



ಕಂತು 16

ಸ್ವಾತಂತ್ರ್ಯದ ಆರಂಭದ ದಿನಗಳಲ್ಲಿ ಕಮ್ಯುನಿಸ್ಟ್ ಪಕ್ಷದ ಬೆಳವಣಿಗೆಯನ್ನು ತಡೆಯಲು ಮುಖಂಡರ ಮೇಲೆ ಸುಳ್ಳು ಆರೋಪ, ಮೊಕದ್ದಮೆ, ಪೋಲೀಸರ ಕಿರುಕುಳ, ವಿಚಾರಣೆಯ ನಾಟಕ ಇತ್ಯಾದಿಗಳ ಒಂದು ನೋಟ ಕಳೆದೆರಡು ಸಂಚಿಕೆಗಳಲ್ಲಿ ಜ್ಯೋತಿ ಬಸುರವರ ಮಾತುಗಳಲ್ಲಿ ನಿಮಗೆ ದೊರೆತಿದೆ. ಮುಂದೆ ಓದಿ............

ಭೂಗತನಾಗಲು ಮಾನಸಿಕ ಸಿದ್ಧತೆ

ದಾಳಿ ಮತ್ತು ಬಂಧನಗಳು ಮಾಮೂಲಾಗಿತ್ತು. 1948 ಸೆಪ್ಟೆಂಬರ್ ಮತ್ತು 1949 ಜನವರಿ ನಡುವೆ ನಾನು ಟ್ರೇಡ್ ಯೂನಿಯನ್‌ಗಳಲ್ಲಿ ಬಹಿರಂಗವಾಗಿ ಕೆಲಸ ಮಾಡಿದೆ, ಭೂಗತರಾಗಿದ್ದ ನಮ್ಮ ನಾಯಕರ ಜತೆ ಸಂಪರ್ಕ ಇರಿಸಿಕೊಂಡೆ. ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅಸೆಂಬ್ಲಿಯನ್ನು ನಾನು ಬಳಸಿಕೊಂಡೆ.

ನಾನು ಆಗ ಬಿ.ಎಸ್.ರೈಲ್ ರೋಡ್ಸ್ ವರ್ಕರ್ಸ್ ಯೂನಿಯನ್ ಪ್ರಧಾನ ಕಾರ್ಯದರ್ಶಿಯಾಗಿದ್ದೆ. ಅದು ಆಲ್ ಇಂಡಿಯಾ ರೈಲ್ವೆ ಮೆನ್ಸ್ ಫೆಡರೇಷನ್‌ಗೆ (AIRF) ಸಂಯೋಜಿತವಾಗಿತ್ತು. ನಾನು ದಕ್ಷಿಣ ಭಾರತ ರೈಲ್ವೆ ಕಾರ್ಮಿಕರ ಸಂಘದ (ಗೋಲ್ಡನ್ ರಾಕ್) ಉಪಾಧ್ಯಕ್ಷನೂ ಆಗಿದ್ದೆ. ಕಲ್ಯಾಣ ಸುಂದರಂ ಅದರ ಅಧ್ಯಕ್ಷರಾಗಿದ್ದರು. ಜಯಪ್ರಕಾಶ್ ನಾರಾಯಣ ಎ.ಐ.ಆರ್.ಎಫ್.ನ ನೇತಾರರಾಗಿದ್ದರು. ಗುರುಸ್ವಾಮಿ ಪ್ರಧಾನ ಕಾರ್ಯದರ್ಶಿ ಆಗಿದ್ದರು. ಗುರುಸ್ವಾಮಿ ಯಾವುದೇ ರಾಜಕೀಯ 'ಪಕ್ಷದ ಸಂಪರ್ಕ ಹೊಂದಿರಲಿಲ್ಲ, ಆದರೆ ನಮ್ಮ ನಡುವಿನ ಸಂಬಂಧ ಸೌಹಾರ್ದವಾಗಿತ್ತು.

1948 ಸೆಪ್ಟೆಂಬರ್ 14 ರಂದು ಕಲ್ಕತ್ತ ಬಳಿಯ ಲಿತೌಹ್‌ನಲ್ಲಿ ನಾವು ರೈಲ್ವೆ ಕಾರ್ಮಿಕರು ಅಖಿಲ ಭಾರತ ಸಭೆಯೊಂದನ್ನು ನಡೆಸಿದೆವು. ನಮ್ಮ ಮುಖಂಡರಲ್ಲಿ ಒಬ್ಬರಾದ ಕಮಲ್ ಸರ್ಕಾರ್ ಸಭೆ ಮಧ್ಯದಿಂದಲೇ ಕಾಫಿಗೆಂದು ಹೊರ ಹೋದರು. ಅವರನ್ನು ತಕ್ಷಣವೇ ಬಂಧಿಸಿ ಪ್ರೆಸಿಡೆನ್ಸಿ ಜೈಲಿಗೆ ಕಳಿಸಲಾಯಿತು. ವಿಚಾರಣೆಯಿಲ್ಲದೆ ಬಂಧನ ಮಾಡುವುದರಿಂದ ನಮಗೇನೂ ಅಚ್ಚರಿಯೇ ಆಗುತ್ತಿರಲಿಲ್ಲ.

ವಿಧಾನಸಭೆ ಒಳಗೆ ಒಂದೇ ಅಂಶದ ಬಗ್ಗೆ ನಾನು ಪಟ್ಟು ಹಿಡಿದು ವಾದಿಸಿದೆ. ಈ ಸರಕಾರ ಯಾವತ್ತಾದರೂ ನಮ್ಮನ್ನು ಬಂಧಿಸಿ ವಿಚಾರಣೆಯಿಲ್ಲದೆ ಜೈಲಿನಲ್ಲಿ ಇಡಬಹುದಿತ್ತು. ಆದರೆ ನಾನು ಹೊರಗೆ ಇರುವಷ್ಟು ಕಾಲ ಹಾಗೂ ಜೀವಂತವಾಗಿರುವವರೆಗೆ ಈ ಜನವಿರೋಧಿ ಸರಕಾರವನ್ನು ವಿರೋಧಿಸುವುದನ್ನು ಮುಂದುವರೆಸಲು ನಿರ್ಧರಿಸಿದೆ. ಅದು ದ್ರೋಹಿಗಳ ಸರ್ಕಾರವಾಗಿತ್ತು.

ರಾಷ್ಟ್ರವ್ಯಾಪಿ ಚಳುವಳಿಗೆ ಸಿದ್ಧತೆ

ಎಐಆರ್‌ಎಫ್ ನೇತೃತ್ವದಲ್ಲಿ ರಾಷ್ಟ್ರವ್ಯಾಪಿ ಮುಷ್ಕರಕ್ಕೆ ರಂಗ ಸಜ್ಜುಗೊಂಡಿತ್ತು. ಬೇಡಿಕೆಗಳ ಪಟ್ಟಿಯನ್ನು ಸಿದ್ಧಪಡಿಸಲಾಯಿತು. ಕಾರ್ಮಿಕ ಕಾನೂನಿಗೆ ತಿದ್ದುಪಡಿ ಹಾಗೂ ವೇತನ ಸಮಾನತೆಯ ಬೇಡಿಕೆಗಳನ್ನು ಸೇರಿಸಲಾಯಿತು.

1948 ಅಕ್ಟೋಬರ್‌ನಿಂದ ಮುಷ್ಕರ ಸಂಘಟಿಸುವ ಕೆಲಸ ಆರಂಭವಾಯಿತು. ಈ ಮುಷ್ಕರವನ್ನು ಯಶಸ್ವಿಗೊಳಿಸುವುದು ನನ್ನ ಅಂದಿನ ಮೊದಲ ಗುರಿಯಾಗಿತ್ತು. ಚೌಬಜಾರ್ ಮತ್ತು ಕಾಲೇಜ್ ರಸ್ತೆ ಕ್ರಾಸಿಂಗ್‌ನ ಒಂದು ಮನೆಯ ಮೂರನೇ ಮಹಡಿಯಲ್ಲಿ ರೈಲ್ವೆ ಯೂನಿಯನ್ ಕಚೇರಿಯಿತ್ತು.

1945 ರ ನಾವಿಕರ ಬಂಡಾಯಕ್ಕೆ ಬೆಂಬಲವಾಗಿ ನಡೆಸಿದ ಬಿ.ಎನ್.ರೈಲ್ವೇಸ್ ಮುಷ್ಕರ ಅಭೂತಪೂರ್ವ ಯಶಸ್ಸುಕಂಡಿತ್ತು. ಆದರಿಂದ ಪಕ್ಷ ಹೊಸ ಅನುಭವವನ್ನು ಗಳಿಸಿತ್ತು. ಆದರೆ ಈ ಬಾರಿಯದು ಅತಿದೊಡ್ಡ ಹಾಗೂ ದೇಶಾದ್ಯಂತ ರೈಲ್ವೆ ಸಂಚಾರ ಸ್ಥಗಿತಗೊಳಿಸುವ ಸಂಚಾಗಿತ್ತು. ಹೀಗಾಗಿ ಇದು ಇನ್ನೂ ಹೆಚ್ಚು ಪರಿಣಾಮಕಾರಿ ಅನುಭವವನ್ನು ಒದಗಿಸಿತು.

ಗುರುಸ್ವಾಮಿ ದೇಶಾದ್ಯಂತ ಪ್ರವಾಸ ಆರಂಭಿಸಿದರು. ನಾನು ಕೂಡ ಸುಂಟರಗಾಳಿ ರೀತಿಯಲ್ಲಿ ಪ್ರವಾಸ ಮಾಡುತ್ತಿದ್ದೆ. ನಮ್ಮ ಶ್ರಮ ಮತ್ತು ಉತ್ಸಾಹಕ್ಕೆ ಮೇರೆಯೇ ಇರಲಿಲ್ಲ.

ನಾನು ಮೊದಲೇ ಹೇಳಿದಂತೆ ಸುಧಾರಣಾವಾದಿ ನಾಯಕರು ಆಗಲೇ ಎಐಆರ್‌ಎಫ್‌ಗೆ ಲಗ್ಗೆ ಹಾಕಿದ್ದರು. ಈ ಮುಖಂಡರು ಮುಷ್ಕರವನ್ನು ನಡೆಸದೆ ಇರಲು ಸರಕಾರದ ಜತೆ ಸಮಾಲೋಚನೆ ನಡೆಸುತ್ತಿದ್ದಾರೆ ಎಂದು ನಮಗೆ ತಿಳಿಸಲಾಯಿತು. ಈ ಹಿನ್ನೆಲೆಯಲ್ಲಿ ಮುಷ್ಕರಕ್ಕೆ ಒಂದು ದಿನವನ್ನು ಬೇಗನೇ ಪ್ರಕಟಿಸುವಂತೆ ನಾನು ಪಕ್ಷದ ನಾಯಕರನ್ನು ಆಗ್ರಹಿಸಿದೆ. ಇನ್ನೊಂದು ಮಟ್ಟದಲ್ಲಿ ಸಿದ್ಧತೆಗಳು ಮುಂದುವರಿದವು.

1948 ಡಿಸೆಂಬರ್ 5 ರಂದು ನಾನು ಎರಡನೇ ಮದುವೆಯಾದೆ. ಪಕ್ಷದ ಚಟುವಟಿಕೆಗಳನ್ನು ನಡೆಸಲು ಹಾಗೂ ಭೂಗತನಾಗುವ ಹೊಣೆಯನ್ನು ಹೊರಲು ನಾನು ಸಿದ್ಧನಾಗುವೆನೋ ಇಲ್ಲವೋ ಎಂದು ಅನುಮಾನ ಅಂದಿನ ಕೇಂದ್ರ ಸಮಿತಿ ಮತ್ತು ಪ್ರಾಂತೀಯ ಸಮಿತಿ ನಾಯಕತ್ವವನ್ನು ಕಾಡಿತ್ತು. ಅವರ ಅನುಮಾನಗಳಿಗೆ ಆಧಾರವೇ ಇರಲಿಲ್ಲ. ಸಾರ್ವಜನಿಕವಾಗಿ ಪಕ್ಷದ ಕೆಲಸವನ್ನು ನಡೆಸಲು ನನಗೆ ಸ್ಪಷ್ಟ ನಿರ್ದೇಶನವಿತ್ತು.

ಪಕ್ಷದ ಭೂಗತ ರಹಸ್ಯ ಕೇಂದ್ರದಿಂದ ಇದ್ದಕ್ಕಿದ್ದಂತೆ ನನಗೊಂದು ಪತ್ರ ಬಂತು. ನಾನು ಯಾಕೆ ಇನ್ನೂ ಭೂಗತನಾಗಿಲ್ಲ ಎಂದು ವಿವರಣೆ ನೀಡುವಂತೆ ಅದರಲ್ಲಿ ಸೂಚಿಸಲಾಗಿತ್ತು. ಮದುವೆಯಾಗುವ ನನ್ನ ನಿರ್ಧಾರವನ್ನು ಅವರು ಪ್ರಶ್ನಿಸಿದರು. ನನ್ನ ಎಲ್ಲಾ ಕೃತ್ಯಗಳಿಗೆ ನಾಯಕತ್ವದ ಸಮ್ಮತಿಯಿದೆ ಎಂದು ಉತ್ತರದಲ್ಲಿ ನಾನು ತಿಳಿಸಿದೆ.

ಹಾಗೊಂದು ವೇಳೆ ಪಕ್ಷ ಬಯಸಿದ್ದೇ ಆದಲ್ಲಿ ಮುಂದಿನ ಒಂದೇ ಒಂದು ಗಂಟೆಯೊಳಗೆ ಭೂಗತನಾಗಲು ನಾನು ಸಿದ್ಧ ಎಂದೂ ಸ್ಪಷ್ಟಪಡಿಸಿದೆ.

ಪಕ್ಷದಲ್ಲಿ ಎಲ್ಲರಿಗೂ ನನ್ನ ಸ್ಥಾನದ ಬಗ್ಗೆ ತಿಳಿಸುವಂತೆ ನಾನು ನಾಯಕತ್ವಕ್ಕೆ ಮನವಿ ಮಾಡಿದೆ. ನನ್ನ ವಿವರಣೆ ಕೋರಿದ ಪತ್ರವನ್ನು ಸರ್ಕ್ಯುಲೇಟ್ ಮಾಡಲಾಯಿತು. ಆದರೆ ತನ್ನ ಉತ್ತರವನ್ನೂ ಹಾಗೆ ಮಾಡಲಾಯಿತೇ ಎಂಬುದು ನನಗೆ ಗೊತ್ತಿಲ್ಲ. ನ... ತಂದೆ ಇನ್ನೂ ಜೀವಂತವಾಗಿದ್ದರು ಹಾಗೂ ನಾನು ಹಿಂದೂಸ್ತಾನ್ ಪಾರ್ಕ್‌ನ ಮನೆಯಲ್ಲಿ ಕುಟುಂಬದ ಜತೆ ವಾಸಿಸುತ್ತಿದ್ದೆ.

ಪಾಟ್ನಾ ಸಮೀಪದ ದಾನಪುರದಲ್ಲಿ 194... ಫೆಬ್ರವರಿ 16 ರಂದು ಎಐಆರ್‌ಎಫ್... ಅಧಿವೇಶನವನ್ನು ಕರೆಯಲಾಯಿತು. ಅಷ್ಟುಹೊತ್ತಿ... ಸಂಘಟನೆಯೊಳಗಿನ ಸುಧಾರಣಾವಾದಿಗಳ... ಸರಕಾರದ ಜತೆ ರಾಜಿ ಮಾಡಿಕೊಂಡಿದ್ದಾರ... ಎಂಬುದು ನಮಗೆ ಗೊತ್ತಾಯಿತು.

ಏನಿದ್ದರೂ ಮುಷ್ಕರ ನಡೆಸಬೇಕೆಂಬ... ನಿರ್ಧಾರದಲ್ಲಿ ಯಾವುದೇ ಬದಲಾವಣೆ ಆಗಲಿಲ್ಲ... ಮಾರ್ಚ್‌ನಲ್ಲಿ ಯಾವತ್ತಾದರೂ ಸಂಪ... ಆರಂಭಿಸುವುದೆಂದು ಅಂದಾಜು ಮಾಡಲಾಯಿತು... ಅದೇ ರೀತಿ ನಮಗೆ ಸೂಚನೆ ನೀಡಲಾಯಿತು... ಅನಂತರ ಮಾರ್ಚ್ 9 ನ್ನು ಮುಷ್ಕರದ ದಿನವನ್ನಾ... ನಿಗದಿಪಡಿಸಲಾಯಿತು.

ನಾವು ದಾನಪುರಕ್ಕೆ ತೆರಳಿದೆವು. ಅನಿರ್ದಿ... ಕಾಲದವರೆಗೆ ನನಗೆ ಮನೆಗೆ ಹಿಂದಿರುಗಲ... ಅಸಾಧ್ಯವಾಗಬಹುದು ಎಂದು ಮನೆ ಬಿಡುವ ಮು... ಹೆಂಡತಿಗೆ ಹೇಳಿದೆ. ಆ ವೇಳೆಗೆ ನನ್ನ ವಿರು... ಬಂಧನದ ವಾರಂಟ್ ಹೊರಟಿತ್ತು. ಕೆಲ... ಸಂಗಾತಿಗಳೊಂದಿಗೆ ದಾನಪುರಕ್ಕೆ ಹೋದ ನಾ... ಭದ್ರತಾ ಕಾರಣಗಳಿಗಾಗಿ ಸಮೀಪ... ಹಳ್ಳಿಯೊಂದರಲ್ಲಿ ವಾಸ್ತವ್ಯ ಹೂಡಿದೆ. ಮಾರ್ಚ್ 9 ರಂದು ಮುಷ್ಕರವನ್ನು ನಡೆಸಬೇಕೆಂ... ಗೊತ್ತುವಳಿಯನ್ನು ಮಂಡಿಸಲಾಯಿತ... ಮತದಾನದಲ್ಲಿ ಅದು ಬಿದ್ದು ಹೋಯಿತು. ನನ್ನ... ಎ.ಐ.ಆರ್.ಎಫ್. ನಿಂದ ಉಚ್ಚಾಟಿಸಲಾಯಿತು...

(ಮುಂದುವರಿಯುವುದು)

ಸಂತ ಕಬೀರ್



ಪಾನಿ ವಿಚ್ ಮೀನ್ ಪ್ಯಾಸಿ
ಮೊಹಿ ಸುನ ಸುನ ಆವತ ಹಸಿ
ಘರ್‌ಮೇ ವಸ್ತು ನಜರ್ ನಹಿ ಆವತ
ವನ ವನ ಫಿರತ ಉದಾಸಿ
ಆತ್ಮಜ್ಞಾನ ವಿನ ಜಗ್ ಜೂಠಾ
ಕ್ಯಾ ಮಥುರಾ ಕ್ಯಾ ಕಾಶಿ

(ನನಗೆ ನಗು ಬರುತ್ತಿದೆ, ನೀರಿನಲ್ಲಿರುವ ಮೀನಿಗೆ ತೃಷೆಯಾಗಿದೆ ಎಂದು ಹೇಳಿದಾಗ. ಮನೆಯಲ್ಲಿರುವ ವಸ್ತುಗಳಲ್ಲಿ ನಿಜವನ್ನರಸಲು ನಿನಗಾಗುತ್ತಿಲ್ಲ. ನಿಜವನ್ನು ಹುಡುಕುತ್ತಾ ಕಾತುರತೆಯಿಂದ ಅರಣ್ಯದಿಂದ ಅರಣ್ಯಕ್ಕೆ ಅಲೆದಾಡುತ್ತಿದ್ದೆ. ಆದರೆ ನಿಜ ಇಲ್ಲಿದೆ, ನೀನು ಬನಾರಸ್ ಅಥವಾ ಮಥುರಾಕ್ಕೆ ನಿಜವನ್ನುಡುಕುತ್ತಾ ಹೋಗು. ಆದರೆ ನಿನ್ನಾತ್ಮವನ್ನೇ ಕಾಣಲಾಗದಿದ್ದರೆ ಜಗವೆಂಬುದು ನಿನಗೆ ನಿಜವಾಗಿ ಕಾಣದು)

ಇದು ಕಬೀರ್ ಅವರು ರಚಿಸಿದ ದೋಹಾದ ಒಂದು ತುಣುಕು. ಕಬೀರ್‌ನ ಇಂತಹ ಅನೇಕ ಕವಿತೆಗಳು ಉತ್ತರ ಭಾರತದ ಜನತೆ ... ಜನಸಂಸ್ಕೃತಿಯನ್ನು ರೂಪಿಸುವುದರಲ್ಲಿ ಕಬೀರ್ ನೀಡಿದ ಕೊಡುಗೆ ಅತ್ಯಮೋಘ.

ಕಬೀರ್ ಎಂದಾಕ್ಷಣ ನಮ್ಮೆದುರಿಗೆ ಬರುವುದು ಕುರುಚಲು ಗಡ್ಡದ ಸಂತನೊಬ್ಬನ ಭಾವಚಿತ್ರ. ಆದರೆ ಇದೇ ವ್ಯಕ್ತಿ ಉತ್ತರ ಭಾರತದ ಜನಜೀವನಕ್ಕೆ ಬಹುದೊಡ್ಡ ಕೊಡುಗೆ ನೀಡಿದ ಎಂಬುದನ್ನು ಮಾತ್ರ ಮರೆಯಲಾಗದು. ಹಿಂದೂ ಮುಸ್ಲಿಂ ಐಕ್ಯತೆ, ಸಹಬಾಳ್ವೆಗೆ ಸಂತ ಕಬೀರ್ ನೀಡಿದ ಕಾಣಿಕೆ ಮಹೋನ್ನತವಾದದ್ದು.

ಆಗಿನ ಕಾಲವೂ ಧಾರ್ಮಿಕ ನಂಬಿಕೆ, ಆಚಾರ ವಿಚಾರಗಳು ಸೂಕ್ಷ್ಮತೆಯನ್ನು ಪಡೆದಿದ್ದವು. ಈ ಮಧ್ಯೆಯೂ ಯಾವುದೇ ಎಗ್ಗಿಲ್ಲದೆ ಮೂರ್ತಿ ಪೂಜೆ, ಧಾರ್ಮಿಕ ಆಡಂಬರಗಳನ್ನು ಧೈರ್ಯವಾಗಿ ಖಂಡಿಸಿದ ಕಬೀರ್ ಅತ್ತ ಹಿಂದೂಗಳಲ್ಲೂ ಇತ್ತ ಮುಸಲ್ಮಾನರಲ್ಲೂ ಬೆಂಬಲಿಗ ವರ್ಗವನ್ನು ಪಡೆದಿದ್ದ. ಆಗಿನ ಕಾಲದಲ್ಲಿ ನಡೆಯುತ್ತಿದ್ದ ಶೋಷಣೆಗಳನ್ನು ವಿರೋಧಿಸಿ ಸಾಮಾಜಿಕ ಸುಧಾರಣೆಗಳಿಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟ ಆತ ನಿಜವಾಗಿಯೂ ಒಬ್ಬ ಕ್ರಾಂತಿಕಾರಿ ನಾಯಕನಾಗಿ ಮೂಡಿಬರುತ್ತಾನೆ.

14ನೇ ಶತಮಾನದಲ್ಲಿ ತನ್ನ ಪ್ರಗತಿಪರ ವಿಚಾರಗಳ ಮೂಲಕ ಗಮನಸೆಳೆದ ಸಂತ ಕಬೀರ್ ಈಗಲೂ ಉತ್ತರ ಭಾರತದಲ್ಲಿ ಜನಪ್ರಿಯ. ಅವನ ದೋಹಾಗಳು ಈಗಲೂ ಜನಮನದಲ್ಲಿ ಅಚ್ಚಳಿಯದಾಗಿವೆ. ಅತ್ಯಮೋಘ ಜೀವಸೆಲೆಯನ್ನು ಮೊಳಗಿಸುವ ಅವರ ಕವಿತ್ವ ಶಕ್ತಿ ಯಾರನ್ನೂ ಮೋಡಿ ಮಾಡುವಂತಹದ್ದು.

ಕಬೀರ್ ತನ್ನ ಕವಿತೆಗಳು, ದೋಹಾಗಳ ಮೂಲಕ ಸಾಮಾಜಿಕ ಪ್ರಜ್ಞೆಯನ್ನು ಎತ್ತರಿಸುವ ಪ್ರಯತ್ನ ನಡೆಸಿದ. ... ಎತ್ತಿದ. ಆದುದರಿಂದಲೇ ಆಗಿನ ಕಾಲದ ಕೋಮುವಾದಿಗಳಿಗೆ ಆತ ನುಂಗಲಾರದ ತುತ್ತಾಗಿದ್ದ.

ಧಾರ್ಮಿಕತೆ ಇಂದು ಅತೀ ಸೂಕ್ಷ್ಮತೆ ಪಡೆದುಕೊಂಡಿದೆ. ಕೋಮುಭಾವನೆಗಳನ್ನು ಕೆರಳಿಸಿ ಆನಂದಿಸುವವರೂ ನಮ್ಮ ಮಧ್ಯೆ ಇದ್ದಾರೆ. ಮನುಷ್ಯನ ಭಾವನೆ ಮತ್ತು ನಂಬಿಕೆಗಳ ಬುಡಕ್ಕೇ ಸಂಚಕಾರ ತರಬಹುದಾದ ಮಂದಿರ-ಮಸೀದಿ ನಾಶದಂತಹ ಕೃತ್ಯಗಳು ಘಟಿಸುತ್ತಿವೆ. ಸಹಸ್ರಾಬ್ದದ ಕೊನೆಯಲ್ಲಿ ಜಾತಿ ಹೆಸರಿನಲ್ಲಿ ನಡೆಯುತ್ತಿರುವ ಘರ್ಷಣೆಗಳು ಹೆಚ್ಚುತ್ತಿವೆ.

ಇತ್ತೀಚಿನ ದಿನಗಳಲ್ಲಿ ಶಾಂತಿ, ಸಹಬಾಳ್ವೆಯ ಜೀವನ ಕಲ್ಪನೆಗೂ ಮೀರಿದಂತಹುಗಳಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಹಿಂದೂ-ಮುಸ್ಲಿಂ ಸೌಹಾರ್ದತೆಯ ಸಂಕೇತವಾದ ಸಂತ ಕಬೀರ ಇಂದಿಗೂ ಪ್ರಸ್ತುತರಾಗುತ್ತಾರೆ.

ಮಧ್ಯಕಾಲೀನ ಯುಗದಲ್ಲಿ ಭಾರತದ ಸಾಮಾಜಿಕ, ಸಾಂಸ್ಕೃತಿಕ ರಂಗಕ್ಕೆ ಕೊಡುಗೆ ನೀಡಿದ ಸಂತರ ಪೈಕಿ ಕಬೀರ್ ಅವರದ್ದು ಪ್ರಮುಖ ಹೆಸರು. 1398 ರಲ್ಲಿ ಬನಾರಸ್‌ನಲ್ಲಿ ಜನ್ಮತಾಳಿದ ಈತನ ಜೀವನ ಇತರ ಪ್ರಖ್ಯಾತ ಸಂತರಂತೆ ದಂತಕಥೆಗಳಿಂದ ಮತ್ತು ರಹಸ್ಯ ಕಥೆಗಳಿಂದ ಕೂಡಿವೆಯಾದರೂ ತನ್ನ ಧ್ಯೇಯ, ಜೀವನಶ್ರದ್ಧೆಗಳಿಂದ ಬೇರೆಯೇ ಆದ ವ್ಯಕ್ತಿತ್ವ ಹೊಂದಿದ್ದಾನೆ.

ಕಬೀರ್ ಹುಟ್ಟಿನಿಂದ ಮುಸ್ಲಿಮನೋ ಅಥವಾ ಹಿಂದೂ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದನೋ ಎಂಬ ವಿಷಯ ಇನ್ನೂ ಜಿಜ್ಞಾಸೆಯಾಗಿಯೇ ಉಳಿದಿದೆ. ಆದರೆ ಓರ್ವ ವಿಧವೆಯಿಂದ ಪರಿತ್ಯಕ್ತ ಮಗುವಾಗಿದ್ದ ಆತನನ್ನು ಬಡ ಮುಸ್ಲಿಂ ಕುಟುಂಬವೊಂದು ದತ್ತು ತೆಗೆದುಕೊಂಡು ಸಾಕಿತು. ... ಕಥೆ ಅಡಕವಾಗಿದೆ. ಒಬ್ಬ ಕಾಜಿ ಕುರಾನ್ ಅನ್ನು ತೆರೆದಾ... ಕಂಡುಬಂದ ಪ್ರಥಮ ಅಕ್ಷರ 'ಕಬೀರ್' ಎಂಬುದನ್ನೇ ಮಗುವಿಗೆ ನಾಮಕರಣ ಮಾಡಿದ. ಇಸ್ಲಾಮಿನಲ್ಲಿ ಕಬೀರ... ಎಂದರೆ 'ಶ್ರೇಷ್ಠ' ಅಥವಾ 'ದೇವರು' ಎಂಬ ಅರ್ಥವಿದ...

ಕಬೀರ್ ದ್ವಿಪದಿಗಳ ತನ್ನ ಹಾಡಿನಲ್ಲಿ ಹೀ... ವರ್ಣಿಸುತ್ತಾನೆ.

ಕಬೀರ ತು ಹಿ ಕಬೀರು ತು ತೆರೆ ನಾಮ್ ಕಬೀರ್
ರಾಮ್ ರತನ್ ತಬ್ ಪಾಯೆ ಜದ್ ಪಾಹಿಲೆ ತಜ...
ಶರೀರ್

(ರಾಮ, ನೀನು ಶ್ರೇಷ್ಠ, ನಿನ್ನ ಹೆಸರೇ ಕಬೀರ, ಈ... ಬಂಧನಗಳಿಂದ ಶರೀರವು ಮುಕ್ತವಾದಾಗಲೇ ನಿನ್ನ ದರ್ಶ... ಭಾಗ್ಯ ದೊರೆಯುವುದು)

ಹಿಂದೂ-ಮುಸ್ಲಿಂ ಭಾವೈಕ್ಯತೆಯ ಸಂಕೇತವಾಗಿರು... ಕಬೀರ, ತನ್ನ ದೋಹಾಗಳ ಮೂಲಕ ಧಾರ್ಮಿ... ಡಾಂಬಿಕತೆಯನ್ನು ಉಗ್ರವಾಗಿ ಖಂಡಿಸುವ ಮೂ... ಸಾಮಾಜಿಕ ಸುಧಾರಣೆಗಳಿಗೆ ಒತ್ತು ನೀಡಿ ಜಡತ್ವ ತುಂಬ... ಸಮಾಜವನ್ನು ಎಚ್ಚರಿಸುತ್ತಾನೆ. ಈ ರೀತಿ... ಚಿಂತನೆಗಳಿಂದಲೇ ಕಬೀರ್ ಇಂದಿಗೂ ಉತ್ತರ ಭಾರ... ಜನಮನದಲ್ಲಿ ಅಚ್ಚಳಿಯದೆ ಉಳಿದಿದ್ದಾನೆ.

ಹಿಂದೂಗಳಿಂದ ಆದರಪೂರ್ವಕವಾಗಿ ಕಬೀರ್ ... ಎಂದು ಗುರುತಿಸಲ್ಪಟ್ಟರೆ, ಮುಸ್ಲಿಮರು ಇತರರು ಬಾಬಾ ಕಬೀರ್ ಅಥವಾ ಕಬೀರ ದಾಸ್ ಎಂದು ಗೌರವಿಸಿದ... ತನ್ನ 120 ವರ್ಷಗಳ ಸಾರ್ಥಕ ಜೀವನದುದ್ದಕ್ಕೂ ಅದ... ರೋಚಕ ಘಟನೆಗಳ ಅನುಭವವನ್ನು ಹೊಂದಿದ್ದಾನೆ...

ಮಧ್ಯಕಾಲೀನ ಯುಗದಲ್ಲಿ ಬಾಳಿದ ನಾನ... ರಜಬ್‌ದಾಸ್, ರೂಲ್‌ದಾಸ್, ದದು ಅಥವಾ ಲ... ಮೊದಲಾದವರಂತೆ ಈತ ಕೂಡ ಅನಕ್ಷರಿ. ಆದರೆ ... ಪ್ರಖರ ಕವಿತೆಗಳು, ಸುಮಧುರ ಸಂಗೀತಗಳಿಂದಲೇ ಜ... ಮನಗೆದ್ದ. ಸೂಫೀ ಹಾಗೂ ವೇದಾಂತಗಳ ಅದ... ಪಾಂಡಿತ್ಯ ಹೊಂದಿದ್ದ ಸಂತ ಕಬೀರ್, ವೈಷ್ಣವ ಪಂ...

ಕಾಶ್ಮೀರದಲ್ಲಿ ಪರಿಸ್ಥಿತಿ ಹದಗೆಡುತ್ತಿದೆಯೇಕೆ?

ನವೆಂಬರ್ 30 ಜಮ್ಮು-ಕಾಶ್ಮೀರದ ರಾಜಧಾನಿ ಶ್ರೀನಗರದಲ್ಲಿನ ತೀವ್ರ ಭದ್ರತಾ ವ್ಯವಸ್ಥೆ ಇರುವ ಬಾದಾಮಿ ಬಾಗ್ ದಂಡು ಪ್ರದೇಶದೊಳಗೆ ನುಗ್ಗಿ ಉಗ್ರಗಾಮಿಗಳು ಸೇನೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಮೇಜರ್ ಪುರುಷೋತಮ್ ಮತ್ತು ಇತರ ಐದು ಸೈನಿಕರನ್ನು ಕೊಂದು ಹಾಕಿದ ಘಟನೆ ಇಡೀ ದೇಶವನ್ನು ತಲ್ಲಣಗೊಳಿಸಿತ್ತು. ಹಿಂದೆಂದೂ ಹೀಗೆ ಉಗ್ರಗಾಮಿಗಳು ಸೇನೆಯ ಕಚೇರಿಯೊಳಗೇ ನುಗ್ಗಿ ಧಾಳಿ ಮಾಡಿದ ಘಟನೆ ನಡೆದಿರಲಿಲ್ಲ. ಬಿಜೆಪಿ ಆಳ್ವಿಕೆಯಲ್ಲಿ ಕಾಶ್ಮೀರದಲ್ಲಿ ಪರಿಸ್ಥಿತಿ ಹದಗೆಡುತ್ತಿರುವುದರ ಒಂದು ಸಂಕೇತ ಇದು. ಏಕೆ ಹೀಗಾಗುತ್ತಿದೆ ಎಂಬುದನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಇಲ್ಲಿ ಪರಿಶೀಲಿಸಿದ್ದಾರೆ.

ಸುರ್ಜಿತ್

1996 ರಲ್ಲಿ ಕೇಂದ್ರದಲ್ಲಿ ಸಂಯುಕ್ತ ರಂಗ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜಮ್ಮು-ಕಾಶ್ಮೀರದಲ್ಲಿ ಪರಿಸ್ಥಿತಿ ಸುಧಾರಿಸ ಪ್ರಾರಂಭಿಸಿತ್ತು. 1991 ರಲ್ಲಿ ದೇಶದ ಇತರ ಭಾಗಗಳೊಂದಿಗೆ ಚುನಾವಣೆ ನಡೆಯದಿದ್ದ ಈ ರಾಜ್ಯದಲ್ಲಿ 1997 ರಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ 50% ಕ್ಕಿಂತಲೂ ಹೆಚ್ಚು ಜನ ಭಾಗವಹಿಸಿದರು. ತಮ್ಮ ಸಂಕಟದ ದಿನಗಳು ಮುಗಿದು ಸಾಮಾನ್ಯ ಜೀವನ ನಡೆಸಲು ಸಾಧ್ಯವಾಗಬಹುದು ಎಂಬ ನಿರೀಕ್ಷೆ ಜಾಗೃತಗೊಳಿಸುವಲ್ಲಿ ಸಂಯುಕ್ತ ರಂಗ ಸರ್ಕಾರ ಯಶಸ್ವಿಯಾಗಿತ್ತು. ಆದರೆ ನಂತರ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜನಗಳ ಈ ನೀರಿಕ್ಷೆಯನ್ನು ಈಡೇರಿಸಲಿಲ್ಲ.

ಇದು ಪಾಕಿಸ್ತಾನದ ಆಳರಸರಿಗೆ ಸುವರ್ಣಾವಕಾಶ ಒದಗಿಸಿತು. ಕಾಶ್ಮೀರ ಕಣಿವೆ, ಜಮ್ಮು ಮತ್ತು ಕಾರ್ಗಿಲ್‌ನಲ್ಲಿ ಗಲಭೆ ಎಬ್ಬಿಸುವ ಪ್ರಯತ್ನಗಳನ್ನು ಅವರು ತೀವ್ರಗೊಳಿಸಿದರು. ಭಾರತೀಯ ಸೇನಾಪಡೆಗಳನ್ನು ಕಾರ್ಗಿಲ್‌ನತ್ತ ಸೆಳೆದು ಕಾಶ್ಮೀರ ಕಣಿವೆಯಲ್ಲಿ ಉಗ್ರಗಾಮಿಗಳನ್ನು ನುಸುಳಿಸುವುದು ಅವರ ತಂತ್ರವಾಗಿತ್ತು. ಈ ಅವಧಿಯಲ್ಲಿ ಕಾಶ್ಮೀರ ಕಣಿವೆಯಲ್ಲಿ 2000 ಸಶಸ್ತ್ರ ಅತಿಕ್ರಮಣಕೋರರು ನುಗ್ಗಿ ಬಂದರು ಎಂಬ ಜಮ್ಮು-ಕಾಶ್ಮೀರದ ರಾಜ್ಯ ಪೋಲೀಸ್ ಅಧಿಕಾರಿಗಳೇ ಹೇಳಿದ್ದಾರೆ.

ವಾಜಪೇಯಿ ಸರಕಾರ ಇದನ್ನು ಪತ್ತೆ ಹಚ್ಚಿ ತಡೆಯುವಲ್ಲಿ ವಿಫಲವಾದರೂ ಭಾರತೀಯ ಸೈನಿಕರು ಭಾರಿ ಬೆಲೆ ತೆತ್ತು ಪಾಕಿಸ್ತಾನೀ ಆಳರಸರ ಯೋಜನೆಯನ್ನು ವಿಫಲಗೊಳಿಸಿದರು. ನವಾಜ್ ಶರೀಫ್ ಸರಕಾರ ತಮ್ಮ ಪಡೆಗಳನ್ನು ನಿಯಂತ್ರಣ ರೇಖೆಯಿಂದ ಹಿಂತೆಗೆದುಕೊಳ್ಳಬೇಕಾಯಿತು. ಇದು ಲಷ್ಕರ್-ಎ-ತಯ್ಯಬಾ ಮತ್ತಿತರ ಅತಿಕ್ರಮಣಕೋರ ತಂಡಗಳಲ್ಲಿ ಅಸಂತೃಪ್ತಿ ಉಂಟು ಮಾಡಿತು. ಕೊನೆಗೆ ಪಾಕಿಸ್ತಾನದಲ್ಲಿ ಮಿಲಿಟರಿ ಕ್ಷಿಪ್ರಕ್ರಾಂತಿ ನಡೆಯುವಂತಾಯಿತು. ಜನರಲ್ ಪರ್ವೇಜ್ ಮುಷ್ರಾಫ್ ತಾನೇ ಪಾಕಿಸ್ತಾನದ ಮುಖ್ಯಸ್ಥ ಎಂದು ಸಾರಿದರು.

ಶರೀಫ್ ಪದಚ್ಯುತಿಯ ನಂತರ

ನವಾಜ್ ಶರೀಫ್ ಪದಚ್ಯುತಿಗೆ ಪಾಕಿಸ್ತಾನದಲ್ಲಿ ಬಹಳಷ್ಟು ವಿರೋಧವೇನೂ ಬಂದಿಲ್ಲ. ಕಾರಣ ಸ್ಪಷ್ಟ. ಅಲ್ಲಿಯ ರಾಷ್ಟ್ರೀಯ ಅಸೆಂಬ್ಲಿಗೆ ನಡೆದ ಚುನಾವಣೆಯಲ್ಲಿ 25% ಜನ ಮಾತ್ರ ಮತದಾನ ಮಾಡಿದ್ದರು. ದೊಡ್ಡ ಬಹುಮತ ಪಡೆದ ನವಾಜ್ ಶರೀಫ್ ಮನ ಬಂದಂತೆ ಆಡಳಿತ ನಡೆಸಲು ತನಗೆ ಜನಾದೇಶ ಸಿಕ್ಕಿದೆ ಎನ್ನುವಂತೆ ವರ್ತಿಸಿದರು. ಅಧ್ಯಕ್ಷರನ್ನು ಬದಲಿಸಿದರು, ಸುಪ್ರೀಂ ಕೋರ್ಟ್ ನ್ಯಾಯಾಧೀಶರನ್ನು ಬದಲಿಸಿದರು, ವಜಾ ಮಾಡಿದರು, ತಮಗೆ ಬೇಕಾದವರನ್ನು ಸೇನಾಧಿಕಾರಿ ಸ್ಥಾನಗಳಲ್ಲಿ ತುಂಬಿದರು. ಅದೇ ವೇಳೆಗೆ ಆರ್ಥಿಕ ಹದಗೆಟ್ಟಿತು. ಜನಗಳ ಸಂಕಟ ಹೆಚ್ಚಾಯಿತು. ಅತ್ತ ಸೇನೆ ಮತ್ತು ಐಎಸ್‌ಐ ನ ಬಜೆಟ್ ದೇಶದ ಬಜೆಟ್‌ನ ಮೂರನೇ ಒಂದಂಶ ಇದ್ದದ್ದು ಇನ್ನಷ್ಟು ಹೆಚ್ಚಾಯಿತು. ಭಾರತದ ಪೋಖ್ರಾನ್ ದುಸ್ಸಾಹಸಗಳನ್ನು ಸರಿಗಟ್ಟಲು ಪಾಕಿಸ್ತಾನದ ಆಳರಸರೂ ಕೈಗೊಂಡ ಪರಮಾಣು ಸ್ಫೋಟದಿಂದ ಆರ್ಥಿಕ ಪರಿಸ್ಥಿತಿ ಎಷ್ಟು ಹದಗೆಟ್ಟಿತೆಂದರೆ ನವಾಜ್ ಶರೀಫ್ ಆರ್ಥಿಕ ತುರ್ತುಪರಿಸ್ಥಿತಿ ಘೋಷಿಸಿದರು.

ಈ ಹಿನ್ನೆಲೆಯಲ್ಲಿ ನವಾಜ್ ಶರೀಫ್ ಪದಚ್ಯುತಿಗೆ ಜನ ಕಣ್ಣೀರು ಸುರಿಸಲಿಲ್ಲ. ಹೆಚ್ಚಿನ ರಾಜಕೀಯ ಪಕ್ಷಗಳು ಅದನ್ನು ಸ್ವಾಗತಿಸಿದವು. ನಿಜ. ಜತೆಗೆ ಪ್ರಜಾಪ್ರಭುತ್ವ ಬೇಗನೇ ಮರಳಬೇಕು ಎಂದೂ ಕೇಳಿದರು. ಮುಷ್ರಾಫ್ ಹಲವು ಭ್ರಷ್ಟಾಚಾರದ ಕೇಸುಗಳನ್ನು ತೆರೆದು ಒಂದೆಡೆ ರಾಜಕಾರಣಿಗಳನ್ನು ಹೀಗಳೆಯಲು ಪ್ರಾರಂಭಿಸಿದರೆ, ಇನ್ನೊಂದೆಡೆ ಜನಗಳಿಗೆ ಅವಶ್ಯಕ ವಸ್ತುಗಳನ್ನು ತುಸು ಕಮ್ಮಿ ಬೆಲೆಗಳಲ್ಲಿ ಒದಗಿಸಿ ಸ್ವಲ್ಪ ಪರಿಹಾರ ಒದಗಿಸಿ ಅವರನ್ನು ತನ್ನತ್ತ ಗೆದ್ದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಬೆನಝಿರ್ ಮತ್ತು ನವಾಜ್‌ರ ಆಳ್ವಿಕೆಯಲ್ಲಿ ಐಎಂಎಫ್-ವಿಶ್ವಬ್ಯಾಂಕ್ ಆದೇಶಿತ ಉದಾರೀಕರಣ, ಜಾಗತೀಕರಣ ನೀತಿಗಳಿಂದ ಜರ್ಝರಿತವಾಗಿದ್ದ ಸಾಮಾನ್ಯರ ಮೇಲೆ ಇದು ಪ್ರಭಾವವನ್ನಂತೂ ಬೀರಿದೆ.

ಇತ್ತ ಮೂಲಭೂತವಾದಿ ಸಂಘಟನೆಗಳೂ ಮುಷ್ರಾಫ್‌ರನ್ನು ಹಾಡಿ ಹೊಗಳಲಾರಂಭಿಸಿದವು. ಕಾಶ್ಮೀರವನ್ನು ಸ್ವತಂತ್ರಗೊಳಿಸುವಲ್ಲಿ ಈಗ ತಮಗೆ ಸತತ ನೆರವು ಸಿಗಬಹುದೆಂಬ ಅವರ ಯೋಚನೆ. ಬಾದಾಮಿ ಬಾಗ್ ಘಟನೆ ಅವರ ನಿರೀಕ್ಷೆ ನಿರಾಧಾರವಲ್ಲ ಎಂಬುದನ್ನು ತೋರಿಸಿ ಕೊಟ್ಟಿದೆ. ಮುಷ್ರಾಫ್ ಆಡಳಿತದ ಗುರಿ ಕೂಡಾ ಕಾಶ್ಮೀರ ಪ್ರಶ್ನೆಯನ್ನು ಅಂತರ್ರಾಷ್ಟ್ರೀಯಗೊಳಿಸುವುದು. ಅದು ಬಳಸುವ ತಂತ್ರ ಮಾತ್ರ ಭಿನ್ನವಾಗಿರಬಹುದು.

ಅಮೆರಿಕಾದ ಆಟ

ಪಾಕಿಸ್ತಾನದ ಉದ್ದೇಶವನ್ನು ಚರ್ಚಿಸುವಾಗ ನಾವು ಅಮೆರಿಕನ್ ಸಾಮ್ರಾಜ್ಯಶಾಹಿಯ ಆಟವನ್ನು ಮರೆಯುವಂತಿಲ್ಲ. 1953 ರಿಂದಲೇ ಅಮೆರಿಕ ಕಾಶೀರದ ಸ್ವಾತಂತ್ರ್ಯದಲ್ಲಿ ವಿಪರೀತ ಆಸಕ್ತಿ ತಳೆದಿದೆ. ಅಲ್ಲಿ ಜನಮತ ಸಂಗ್ರಹ ನಡೆಸಿ ಭಾರತಕ್ಕೆ ಕಾಶ್ಮೀರದ ಸೇರ್ಪಡೆಯ ಇತ್ಯರ್ಥವಾದ ವಿಷಯವನ್ನು ಮತ್ತೆ ತೆರೆಯಬೇಕು ಎಂದು ಪ್ರತಿಪಾದಿಸುತ್ತಾ ಬಂದಿದೆ. ಎಲ್ಲಾ ಅಮೆರಿಕನ್ ರಾಯಭಾರಿಗಳೂ ಆಗಾಗ ಈ ಬಗ್ಗೆ ಬಹಿರಂಗವಾಗಿಯೇ ಮಾತನಾಡಿದ್ದಾರೆ.

ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಭಾರತ ಮತ್ತು ಪಾಕಿಸ್ತಾನಗಳ ನಡುವೆ ಒಂದು ಸ್ವತಂತ್ರವಾದ, ಆದರೆ ತಾನು ಹೇಳಿದಂತೆ ಕುಣಿಯಬಹುದಾದ ಕಾಶ್ಮೀರ ಇದ್ದರೆ ಈ ಪ್ರದೇಶದಲ್ಲಿ ಅದರ ರಾಜಕೀಯಕ್ಕೆ ಬಹಳ ಅನುಕೂಲ. ಇಲ್ಲಿ ಪಾಕಿಸ್ತಾನವಂತೂ ಈಗಾಗಲೇ ತನ್ನ ಪರವಾಗಿದೆ. ಕಾಶ್ಮೀರದಲ್ಲಿ ಕಾಲೂರಲು ಅವಕಾಶವಾದರೆ ಭಾರತ, ಚೀಣ, ಅಫಘಾನಿಸ್ತಾನ ಎಲ್ಲವುಗಳ ಮೇಲೂ ತನ್ನ ಪ್ರಾಬಲ್ಯ ಹೇರುವುದು ಸುಲಭವಾಗುತ್ತದೆ ಎಂಬುದು ಅದರ ಲೆಕ್ಕಾಚಾರ. ಈ ಲೆಕ್ಕಾಚಾರದ ಅರಿವಿಲ್ಲದೆ ಪಾಕಿಸ್ತಾನದ ಆಳರಸರು ಧರ್ಮದ ಹೆಸರಿನಲ್ಲಿ ಕಾಶ್ಮೀರವನ್ನು ಪಾಕಿಸ್ತಾನದಲ್ಲಿ ವಿಲೀನಗೊಳಿಸುವ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಅಮೆರಿಕಾ ಮಾತ್ರ ಕಾಶ್ಮೀರ ಸ್ವತಂತ್ರವಾಗಬೇಕೆಂದು ಈಗಲೂ ಬಯಸುತ್ತಿದೆ. ಕೇವಲ ಎರಡು ತಿಂಗಳ ಹಿಂದೆ ಕ್ಲಿಂಟನ್ ಆಡಳಿತಕ್ಕೆ ಅಲ್ಲಿಯ ಗೃಹ ಇಲಾಖೆ ಸಲ್ಲಿಸಿದ ವರದಿಯಲ್ಲಿ ಪ್ರತಿಪಾದಿಸಿದ ಈ ಕ್ರಮಗಳನ್ನು ಗಮನಿಸಿ -

1. ಭಾರತದಲ್ಲಿರುವ ಜಮ್ಮು-ಕಾಶ್ಮೀರ ರಾಜ್ಯ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ ನಡುವಿನ ಗಡಿಗಳನ್ನು ತೆರೆಯುವುದು
2. ಭಾರತ ಮತ್ತು ಪಾಕಿಸ್ತಾನ ತಮ್ಮ ಸೇನಾಪಡೆಗಳನ್ನು ನಿಯಂತ್ರಣ ರೇಖೆಯ ವರೆಗೆ ಹಿಂತೆಗೆದುಕೊಳ್ಳುವುದು
3. ಕಾಶ್ಮೀರದ ಎರಡೂ ಭಾಗಗಳಲ್ಲಿ ಐದು ವರ್ಷಗಳ ನಂತರ ಜನಮತ ಸಂಗ್ರಹಣೆ
4. ಈ ಅವಧಿಯಲ್ಲಿ ಎಲ್ಲಾ ಗುಂಪುಗಳಿಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಸಂಪೂರ್ಣ 'ಸ್ವಾತಂತ್ರ್ಯ' ಇದರರ್ಥ ಭಾರತದಿಂದ ಪ್ರತ್ಯೇಕವಾಗುವ ಅಭಿಪ್ರಾಯವನ್ನು ರೂಪಿಸಲು ಬಲಿಷ್ಟ ಸಾಮ್ರಾಜ್ಯಶಾಹಿ ಮಾಧ್ಯಮಗಳಿಗೆ ಅವಕಾಶ ಕೊಡುವುದು.

ಎರಡು ವರ್ಷಗಳ ಹಿಂದೆ ಆಗ ಪಾಕಿಸ್ತಾನದ ಪ್ರಧಾನಿಯಾಗಿದ್ದ ಬೆನಝಿರ್ ಭುಟ್ಟೋ ಬೇರೆ ಭಾಷೆಯಲ್ಲಿ ಸುಮಾರಾಗಿ ಇದನ್ನೇ ಪ್ರತಿಪಾದಿಸಿದರು. ಈ ಮೂಲಕ ಅಮೆರಿಕನ್ ಸಾಮ್ರಾಜ್ಯಶಾಹಿಗಳ ವಶೀಲಿ ಪಡೆಯಲು ಪ್ರಯತ್ನಿಸಿದರು.

ಅಮೆರಿಕಾದ ಮೇಲೆ ಹೀನ ಅವಲಂಬನೆ

ಇಂತಹ ಒಂದು ಸನ್ನಿವೇಶವೂ ಭಾರತ ಅಮೆರಿಕನ್ ನಿಜ ಉದ್ದೇಶಗಳ ಬಗ್ಗೆ ಬಹಳ ಜಾಗರೂಕತೆಯಿಂದ ಇರಬೇಕಾಗಿತ್ತು. ಆದರೆ 1998 ರಲ್ಲಿ ಮೊದಲು ಅಧಿಕಾರಕ್ಕೆ ಬಂದಂದಿನಿಂದ ವಾಜಪೇಯಿ ಸರ್ಕಾರ ತದ್ವಿರುದ್ಧವಾಗಿಯೇ ವರ್ತಿಸುತ್ತಿದೆ.

ಸಮಾಜವಾದಿ ಬಣ ಇಲ್ಲದ ಈಗಿನ ಪರಿಸ್ಥಿತಿಯಲ್ಲಿ ಈಗ ಅಮೆರಿಕಾ ಎಲ್ಲಾ ದೇಶಗಳ ಮೇಲೆ ತನ್ನ ಪ್ರಾಬಲ್ಯ ಹೇರಲು ಪ್ರಯತ್ನಿಸುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ವಾರ್ಸಾ ಸಂಧಿ ಅಂತ್ಯಗೊಂಡರೂ ಆಟಕ್ಕೆ ಪ್ರತಿಸ್ಪರ್ಧಿ ಎನಿಸಿದ ನಾಟೋವನ್ನು ಇನ್ನಷ್ಟು ವಿಸ್ತರಿಸಿ ಬೇರೆ ದೇಶಗಳನ್ನು ಹತ್ತಿಕ್ಕುವ ಪ್ರಯತ್ನಗಳನ್ನು ಇರಾಕ್‌ನಲ್ಲಿ, ಸೋಮಾಲಿಯಲ್ಲಿ ಹಾಗೂ ಇತ್ತೀಚೆಗೆ ಯುಗೋಸ್ಲಾವಿಯದ ಮೇಲೆ 78 ದಿನಗಳ ಕಾಲ ನಾಟೋ ಬಾಂಬ್ ದಾಳಿಯಲ್ಲಿ ಜಗತ್ತು ಕಂಡಿದೆ. ಜೆಕೋಸ್ಲೋವೆಕಿಯಾ ಮತ್ತು ಈಗ ಯುಗೋಸ್ಲಾವಿಯಾದ ವಿಘಟನೆಯಲ್ಲಿ ಅಮೆರಿಕದ ಪಾತ್ರ ಎಲ್ಲರಿಗೂ ಗೊತ್ತು. ಇತ್ತೀಚೆಗೆ ಜಾರ್ಜ್ ಟೌನ್ ವಿಶ್ವವಿದ್ಯಾಲಯದಲ್ಲಿ ಮಾತನಾಡುತ್ತಾ ಕ್ಲಿಂಟನ್ ತಮ್ಮ ದೇಶ ಹೇಗೆ ವಿಶ್ವದ ವ್ಯವಹಾರಗಳಲ್ಲಿ ಸ್ವಯಂ ನೇಮಿತ ಪೋಲಿಸ್ ಪಡೆಯಾಗಿ ಕಾರ್ಯ ನಿರ್ವಹಿಸ ಬಯಸುತ್ತದೆ ಎಂಬುದರ ಯೋಜನೆಯನ್ನು ಬಿಡಿಸಿಟ್ಟಿದ್ದಾರೆ. ಇದರಲ್ಲಿ ಭಾರತ-ಪಾಕಿಸ್ತಾನಗಳ ನಡುವೆ ಶಾಂತಿ, ವ್ಯಾಪಾರ ಉದಾರೀಕರಣ ಇತ್ಯಾದಿಗಳೆಲ್ಲವೂ ಸೇರಿವೆ.

ಆದರೆ ವಾಜಪೇಯಿ ಸರಕಾರಕ್ಕೆ ಈ ಯಾವುದರ ಚಿಂತೆಯೂ ಇದ್ದಂತಿಲ್ಲ. ಏನಾದರೂ ಮಾಡಿ ಅಮೆರಿಕನ್ ಸರಕಾರ ತನ್ನ ಕಡೆಗಿರುವಂತೆ ಅದನ್ನು ಸಂತುಷ್ಟಗೊಳಿಸುವಲ್ಲೇ ಅದು ಮಗ್ನವಾಗಿದೆ. ಇದು ದಶಕಗಳ ಕಾಲ ಭಾರತ ಅನುಸರಿಸಿಕೊಂಡು ಬಂದ ವಿದೇಶಾಂಗ ನೀತಿಗೆ ವ್ಯತಿರಿಕ್ತವಾದ ನಿಲುವು. ಭಾರತ ಮಾತ್ರವಲ್ಲ, ಈಗ ಸ್ವತಂತ್ರಗೊಂಡ ಎಲ್ಲಾ ದೇಶಗಳಿಗೆ ಅನುಕೂಲಕರವಾದ ನಿಲುವು ಅದು. ಅದನ್ನು ಕೈಬಿಟ್ಟ ವಾಜಪೇಯಿ ಸರಕಾರದ ಅಧಿಕಾರಾವಧಿಯಲ್ಲಿ ಅಮೆರಿಕಾದ ಮೇಲೆ ಭಾರತ ಅವಲಂಬನೆ ಬಹಳ ಹೆಚ್ಚಿರುವುದು ಜಸ್ವಂತ್ ಸಿಂಗ್-ಟಾಲ್ಬೋಟ್ ಗುಪ್ತ ಮಾತುಕತೆಗಳ ಬಗ್ಗೆ ತಿಳಿದುಬಂದಿರುವ ಅಲ್ಪಮಾಹಿತಿಯಿಂದಲೇ ಸ್ಪಷ್ಟವಾಗಿದೆ. ಆರ್ಥಿಕ ವಿಷಯಗಳಲ್ಲಿ ಮಾತ್ರವಲ್ಲ ಮಿಲಿಟರಿ ವಿಷಯಗಳಲ್ಲೂ ಇದೇ ವಿಪರೀತ ಅವಲಂಬನೆ ಎದ್ದು ಕಾಣುತ್ತಿದೆ. ಜಸ್ವಂತ್ ಸಿಂಗ್ ತಮ್ಮ ಹೆಚ್ಚಿನ ಸಮಯವನ್ನು ವಾಶಿಂಗ್ಟನ್‌ಗೆ ಧಾವಿಸುವಲ್ಲಿ, ಅಥವಾ ಎಲ್ಲೆಲ್ಲಿ ಅಮೆರಿಕನ್ ರಾಜತಾಂತ್ರಿಕರನ್ನು ಭೇಟಿಯಾಗಬಹುದೋ ಅಲ್ಲಿಗೆಲ್ಲಾ ಭೇಟಿ ನೀಡುವಲ್ಲೇ ಕಳೆದಿದ್ದಾರೆ. ಪ್ರಧಾನಮಂತ್ರಿಗಳಿಗೆ ಬಹಳ ಸಮೀಪದವರೆನಿಸಿಕೊಳ್ಳುವ ಬ್ರಿಜೇಶ್ ಮಿಶ್ರ ಕೂಡ ಅದನ್ನೇ ಮಾಡುತ್ತಿದ್ದಾರೆ. ಈಗ ನಮ್ಮ ಸೇನಾಧಿಪತಿಗಳೂ ಮಿಲಿಟರಿ ಸಹಕಾರದ ಬಗ್ಗೆ ಪರಿಶೀಲಿಸಲು ಅಮೆರಿಕಾಕ್ಕೆ ಹೋಗಿ ಬಂದಿದ್ದಾರಂತೆ.

ಅಮೆರಿಕಾದಿಂದ ವ್ಯರ್ಥನಿರೀಕ್ಷೆ

ಇವೆಲ್ಲಾ ಏತಕ್ಕೆ? ಪಾಕಿಸ್ತಾನದೊಡನೆ ತನ್ನ ಜಗಳದಲ್ಲಿ ಅಮೆರಿಕಾ ಭಾರತದ ಪರ ನಿಲ್ಲಬಹುದೆಂಬ ವ್ಯರ್ಥ ನಿರೀಕ್ಷೆಯಿಂದ! ಇದು ಮುಗ್ಧತೆಯ ಚರಮಸೀಮೆ. ನಿಜ, ಜಗತ್ತಿನ ಮೇಲೆ ಪ್ರಾಬಲ್ಯ ಮೆರೆಸುವ ಪ್ರಯತ್ನದಲ್ಲಿ ಭಾರತ ತನ್ನ ಪರ ಇರಲಿ ಎಂದು ಅಮೆರಿಕಾ ಬಯಸುತ್ತದೆ. ಆದರೆ ಇಸ್ಲಾಮಿ ದೇಶಗಳ ಮೇಲೆ ಭಾರಿ ಪ್ರಭಾವವಿರುವ ಪಾಕಿಸ್ತಾನವನ್ನು ಅದು ಬದಿಗೊತ್ತಲು ಸಾಧ್ಯವೇ? ಸಾಮಾನ್ಯ ಜ್ಞಾನವುಳ್ಳವರಿಗೂ ಅರ್ಥವಾಗುವ ಸಂಗತಿಯಿದು. ಅಮೆರಿಕಾದ ಈ ಜಾಣ ಆಟವನ್ನು ವಾಜಪೇಯಿಯ ಮಂದಿ ನಿರ್ಲಕ್ಷಿಸುತ್ತಿದ್ದಾರೆ.

ನಿಜ ಸಂಗತಿಯೆಂದರೆ ವಾಜಪೇಯಿ ಸರಕಾರದ ವಿದೇಶಾಂಗ ನೀತಿಯ ನಿಲುವುಗಳು ಅಮೆರಿಕಾಕ್ಕೆ ನೆರವಾಗುತ್ತಿವೆ. ಭಾರತ ಹಲವು ದಾಸ್ಯಕ್ಕೊಳಗಾದ ದೇಶಗಳ ವಿಮೋಚನೆಗೆ ಹಾಗು ಅಭಿವೃದ್ಧಿಶೀಲ ದೇಶಗಳು ಅಂತರ್ರಾಷ್ಟ್ರೀಯ ರಂಗದಲ್ಲಿ ಒಂದು ದೊಡ್ಡ ಪಾತ್ರ ವಹಿಸುವಲ್ಲಿ ಗಮನಾರ್ಹ ಪಾತ್ರ ವಹಿಸಿದ ಅಲಿಪ್ತ ಆಂದೋಲನದ ಸಂಸ್ಥಾಪಕ ದೇಶಗಳಲ್ಲೊಂದು. ಅದೀಗ ನಿಷ್ಕ್ರಿಯಗೊಂಡಿದೆ. ಹಲವು ಕಡೆಗಳಿಂದ ಇದನ್ನು ಸಕ್ರಿಯಗೊಳಿಸಲು ಕರೆ ಬರುತ್ತಿದ್ದರೂ ವಾಜಪೇಯಿ ಆಡಳಿತ ಅದನ್ನು ಪುನಶ್ಚೇತನಗೊಳಿಸಲು ನಿರಾಕರಿಸುತ್ತಿದೆ. ವಿಶ್ವದಲ್ಲಿ ಭಾರತದ ಪ್ರತಿಷ್ಟೆ ಇದರಿಂದ ಕುಗ್ಗುತ್ತಿದೆ.

ಇತ್ತೀಚೆಗಷ್ಟೇ ಈ ಸರಕಾರ ಸಾರ್ಕ್ ಶೃಂಗ ಸಭೆಯನ್ನು ಮುಂದೂಡುವಂತೆ ಸಾರ್ಕ್ ಕಾರ್ಯದರ್ಶಿ ಮಂಡಳಿಯನ್ನು ಕೇಳಿತ್ತು. ಪ್ರಾದೇಶಿಕ ಸಂಘಟನೆಗಳು ಮಹತ್ವದ ಪಾತ್ರ ವಹಿಸುತ್ತಿರುವ ಇಂದಿನ ಅವಧಿಯಲ್ಲಿ ಭಾರತದ ನಿಲುವನ್ನು ಯಾರೂ ಮೆಚ್ಚಲಾರರು. ಈ ಮೂಲಕ ನಮ್ಮ ಉಪಖಂಡದಲ್ಲಿ ಸೌಹಾರ್ದದ ವಾತಾವರಣ ನಿರ್ಮಿಸುವ ತನ್ನ ಹೊಣೆಯನ್ನು ನಿಭಾಯಿಸುವಲ್ಲಿ ಈ ಪ್ರದೇಶದ ಅತಿದೊಡ್ಡ ದೇಶವಾದ ಭಾರತ ವಿಫಲಗೊಳ್ಳುವಂತಾಗಿದೆ.

ಒಟ್ಟಿನಲ್ಲಿ, ಬಿಜೆಪಿ ನೇತೃತ್ವದ ಎನ್.ಡಿ.ಎ. ಸರಕಾರ ದೇಶದ ದೀರ್ಘಾವಧಿಯ ಹಿತಾಸಕ್ತಿಗಳೊಂದಿಗೆ ಚೆಲ್ಲಾಟವಾಡುತ್ತಿದೆ. ಅಂತರ್ರಾಷ್ಟ್ರೀಯ ರಂಗದಲ್ಲಿ ಭಾರತ ಇದುವರೆಗೆ ಅಲಿಪ್ತ ನೀತಿ, ದೇಶಗಳ ಸ್ವಾತಂತ್ರ್ಯ, ಸರ್ವತೋಮುಖ ನಿಶ್ಶಸ್ತ್ರೀಕರಣ ಹಾಗೂ ವಿಶ್ವಶಾಂತಿಯ ರಕ್ಷಣೆಯಲ್ಲಿ ವಹಿಸುತ್ತಿದ್ದ ಪಾತ್ರವನ್ನು ಕೈ ಬಿಟ್ಟಿದೆ. ಈ ಧೋರಣೆಯನ್ನು ನಮ್ಮ ಜನಗಳು ಅರಿತುಕೊಳ್ಳಬೇಕು, ಅದನ್ನು ಸೋಲಿಸಬೇಕು. ಆ ಮೂಲಕ ನಮ್ಮ ದೇಶ ವಿಶ್ವದಲ್ಲಿ ತನಗೆ ಸಲ್ಲತಕ್ಕ ಸ್ಥಾನವನ್ನು ಮತ್ತೆ ಪಡೆಯಬೇಕು. ○

12ನೇ ಬಂಡಾಯ ಸಾಹಿತ್ಯ ಸಮ್ಮೇಳನ

ಬಂಡಾಯ ಸಾಹಿತ್ಯ ಚಳುವಳಿಗೊಂದ

ಮುಂಡರಗಿ ಭೀಮರಾಯನ ಬಂಡಾಯ ಕರ್ನಾಟಕದಲ್ಲಿ ಬ್ರಿಟಿಷರ ವಿರುದ್ಧ ನಡೆಸಿದ ಒಂದು ಪ್ರಮುಖ ಸೆಣೆಸಾಟ, ಮೈಸೂರು ಸಂಸ್ಥಾನದ ಆಕ್ರಮಣದ ವಿರುದ್ಧ ನಡೆದ ಟಿಪ್ಪು ಸುಲ್ತಾನರ ಯುದ್ಧ ಕಿತ್ತೂರು ಚೆನ್ನಮ್ಮನ ಹೋರಾಟನಂತರ ನರಗುಂದ ಹಾಗೂ ಸುರಪುರದ ಬಂಡಾಯದ ಜೊತೆಗೆ ಏಕೀಭವಿಸಿ ನಡೆದ ಮುಂಡರಗಿ ಭೀಮ ರಾಯನ ಬಂಡಾಯ ಕರ್ನಾಟಕದಲ್ಲಿ ಪರಕೀಯರ ಆಕ್ರಮಣದ ವಿರುದ್ಧದ ಭಾವನೆಗಳನ್ನು ಜನಮನದಲ್ಲಿ ಜೀವಂತವಾಗಿರಿಸಲು ಕಾಣಿಕೆ ನೀಡಿದವು.

ಈ ಬಂಡಾಯಕ್ಕೆ ಸಂಬಂಧಿಸಿದ ಕುರುಹುಗಳು ಜನರಲ್ಲಿ ತಾವು ಪರಕೀಯರ ಆಕ್ರಮಣದಲ್ಲಿದ್ದೇವೆ. ಅವರ ಕಾಲ್ತುಳಿತಕ್ಕೆ ತಮ್ಮ ಬದುಕು ಒಳಗಾಗಿದೆ ಅದರ ವಿರುದ್ಧ ಬಂಡೇಳಬೇಕಾಗಿದೆ ಎಂಬ ಎಚ್ಚರವನ್ನು ಸಾಮಾಜಿಕ ಪ್ರಜ್ಞೆಯ ಭಾಗವಾಗಿಸಿದವು. ಹಲವು ಲಾವಣಿಗಳ ಮೂಲಕ ಸಾಹಿತ್ಯದ ಭಾಗವಾದವು. ಮುಂದಿನ ಮಜಲಿನ ಸ್ವಾತಂತ್ರ್ಯ ಚಳುವಳಿಗೆ ಒಂದು ಅಡಿಪಾಯವಾಯಿತು ಅಂದು ಮೂಡಿಸಿದ ಪ್ರತಿಭಟನೆಯ ಮನಸ್ಸು.

ಇಂತಹ ಐತಿಹಾಸಿಕ ಮಹತ್ವದ ಬಂಡಾಯದ ನೆಲೆಯಾದ ಮುಂಡರಗಿಯಲ್ಲಿ ಬಂಡಾಯ ಸಾಹಿತ್ಯ ಚಳುವಳಿಯ ಎರಡು ದಶಕಗಳ ಅಂತ್ಯದಲ್ಲಿನ 12 ನೇ ಸಮ್ಮೇಳನ ಸಂಘಟಿತವಾದದ್ದು ಉಚಿತವಾದದ್ದೇ ಮತ್ತೊಮ್ಮೆ ಅಂತಹುದೇ ಪರಕೀಯರ ದುರಾಕ್ರಮಣದ ವಿರುದ್ಧ ಸೆಣೆಸಾಡಬೇಕಾದ ಸಂದರ್ಭಕ್ಕೆ ಇದು ಯೋಗ್ಯ ಹಿನ್ನೆಲೆಯನ್ನು ಒದಗಿಸಿತ್ತು.

ಬಂಡಾಯ ಸಾಹಿತ್ಯ ಚಳುವಳಿ ಆರಂಭವಾದ ನಂತರ ಒಂದು ಒಂದೂವರೆ ವರ್ಷದ ಅಂತರದಲ್ಲಿ ನಡೆಯುತ್ತಿದ್ದ ರಾಜ್ಯ ಸಮ್ಮೇಳನ ನಾಲ್ಕು ವರ್ಷದ ದೀರ್ಘ ಅವಧಿಯನಂತರ ಸಂಘಟಿತವಾಗಿತ್ತು. ಈ ನಾಲ್ಕು ವರ್ಷಗಳ ಅವಧಿಯಲ್ಲಿ ದೇಶದ ರಾಜಕೀಯದಲ್ಲಿನ ಒಂದು ಪ್ರಮುಖ ತಿರುವು, ಪ್ರಗತಿಪರರೆಲ್ಲರಿಗೂ ಆಂತಕವನ್ನು ಹುಟ್ಟಿಸುತ್ತಿರುವುದು ಆರಂಭವಾಗಿದೆ. ದೇಶ್ಯಾದ್ಯಂತ ಕೋಮುವಾದದ ವಿಷ ಬೀಜ ಬಿತ್ತುತ್ತಿದ್ದ, ಕೋಮುದಂಗೆಗಳನ್ನು ಹಬ್ಬಿಸುತ್ತಿದ್ದ ಸಂಘ ಪರಿವಾರಕ್ಕೆ ಕೇಂದ್ರ ಸರ್ಕಾರದ ಅಧಿಕಾರ ದೊರೆತಿದೆ. ಸಾಂಸ್ಕೃತಿಕ ಬದುಕನ್ನು ಕಲುಷಿತಗೊಳಿಸಲು ಅದನ್ನು ಸಂಘಪರಿವಾರದ ಅಧ್ವರ್ಯು ಸಮರ್ಥವಾಗಿಯೇ ಬಳಸಿ ಕೊಳ್ಳುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಬಂಡಾಯ ಸಾಹಿತ್ಯ ಚಳುವಳಿ ಏನು ಪಾತ್ರವಹಿಸಿತು. ಮುಂದೆ ಈ ಸವಾಲನ್ನು ಎದುರಿಸುವಲ್ಲಿ ಬಂಡಾಯ ಸಾಹಿತ್ಯ ಚಳುವಳಿಯ ಹೊಣೆ ಏನು, ಎಂಬ ಪ್ರಶ್ನೆಗಳು; ಹಾಗೆಯೇ ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಅಂತರಾಷ್ಟ್ರೀಯ ಧಾಳಿ ನಮ್ಮ ಬದುಕಿನ ಮೇಲೆ ಬೀರುತ್ತಿರುವ ವಿನಾಶಕಾರಿ ಪರಿಣಾಮ ಹಾಗೂ ಅದರ ಸಾಂಸ್ಕೃತಿಕ ಪರಿಣಾಮಗಳು, ಅದನ್ನು ಎದುರಿಸುವ ಬಗ್ಗೆ ಇಡೀ ಸಮ್ಮೇಳನದ ಪ್ರತಿಯೊಂದು ಗೋಷ್ಠಿಯ ಪ್ರತಿಯೊಂದು ಪ್ರಬಂಧ, ಭಾಷಣಗಳಲ್ಲಿ ಅಂತರ್ಗತವಾಗಿದ್ದವು.

> "ತುಮಕೂರಿನಲ್ಲಿ ನಡೆದ ಬಂಡಾಯ ಸಾಹಿತ್ಯ ಸಮ್ಮೇಳನದ ನಾಲ್ಕು ವರ್ಷಗಳ ತರುವಾಯ ಗದಗ ಜಿಲ್ಲೆಯ ಮುಂಡರಗಿಯಲ್ಲಿ ನಡೆದ ೧೨ ನೇ ಸಮ್ಮೇಳನದಲ್ಲಿ ಮತ್ತೆ ಮತ್ತೆ ಕೇಳಿಬಂದ ಮಾತುಗಳು: ಆತ್ಮಾವಲೋಕನ, ಅಂತರ್ ಮುಖತ್ವ, ವಿಮರ್ಶೆ, ಮುಂದಿನ ದಾರಿಯ ಹುಡುಕಾಟ, ಮುಂದಿನ ದಾರಿಯ ಅನ್ವೇಷಣೆಯಲ್ಲಿ ದಾವಣಗೆರೆಯಲ್ಲಿ ಕಾರ್ಯಾಗಾರವೊಂದನ್ನು ನಡೆಸುವ, ಅದರಲ್ಲಿ ಕ್ರಿಯಾ ಯೋಜನೆಯೊಂದನ್ನು ರೂಪಿಸುವ ನಿರ್ಧಾರ, ಕರ್ನಾಟಕದ ಎಲ್ಲ ಪ್ರಗತಿಪರ ಜನಚಳುವಳಿಗಳನ್ನು ಒಗ್ಗೂಡಿಸುವ, ಬೆಳೆಯುವ ಹುಮ್ಮಸ್ಸು.

ನಮ್ಮ ಮುಂದಿರುವ ಸವಾಲು ದೊಡ್ಡದು. ಈ ಸವಾಲನ್ನು ಎದುರಿಸುವಲ್ಲಿ ನಮ್ಮ ಕರ್ತವ್ಯವನ್ನು ನಾವು ಸರಿಯಾಗಿ ನಿರ್ವಹಿಸಿಲ್ಲ. ಮುಂದಾದರೂ ಈ ಸವಾಲನ್ನು ಎದುರಿಸಲು ಕ್ರಿಯಾಶೀಲರಾಗಬೇಕು. ನಮ್ಮ ಸಾಂಸ್ಕೃತಿಕ ಚಳುವಳಿ ಹಿಂದಿನ ತನ್ನ ಹರಹನ್ನು, ಉಬ್ಬರವನ್ನು ಪಡೆದಕೊಳ್ಳಲನುವಾಗುವಂತೆ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂಬ ಕಾಳಜಿಗಳು ವ್ಯಕ್ತವಾದವು. ಒಟ್ಟಾರೆಯಾಗಿ ಕರ್ನಾಟಕದ ಒಟ್ಟು ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಪರಿಸ್ಥಿತಿಯಲ್ಲಿ ಎತ್ತರಕ್ಕೆ ಬೆಳೆದ ಅನೇಕ ಚಳುವಳಿಗಳು ತಮ್ಮ ಸ್ಫೂರ್ತಿಯ ಮೂಲ ಸೆಲೆಯನ್ನು ಕಳೆದುಕೊಂಡಿವೆ. ಅದರ ಭಾಗವಾಗಿ ಬಂಡಾಯ ಸಾಹಿತ್ಯ ಚಳುವಳಿಯೂ ಈ ಬಿಕ್ಕಟ್ಟನ್ನು ಎದುರಿಸುತ್ತಿದೆ ಎಂಬ ಅರಿವೂ ಆ ಮೂಲಕ ಉಳಿದ ಚಳುವಳಿಗಳನ್ನು ಒಗ್ಗೂಡಿಸಿಕೊಂಡು ಬೆಳೆಯುವ ನಿರ್ಧಾರವೂ ವ್ಯಕ್ತವಾದವು.

ಸಮ್ಮೇಳನವನ್ನು ಜನಪರ ಚಲನಚಿತ್ರ ನಿರ್ದೇಶಕ ಎಂ.ಎಸ್. ಸತ್ಯು ಉದ್ಘಾಟನೆ ಮಾಡಿದರೆ, ಎಡಚಳುವಳಿಯ ಪ್ರಮುಖ ಧಾರೆಗಳಾದ ಸಮಾಜವಾದಿ ಚಳುವಳಿಯ ಕಮ್ಯೂನಿಸ್ಟ್, ಮಾರ್ಕ್ಸ್ ವಾದಿ ಹಾಗೂ ದಲಿತ ಚಳುವಳಿಗಳ ಸಾಹಿತಿಗಳು, ವೈಚಾರಿಕರು, ಸಾಂಸ್ಕೃತಿಕ ಕಾರ್ಯಕರ್ತರು ಈ ಯಾವ ಧಾರೆಯೊಂದಿಗೂ ಗುರುತಿಸಿ ಕೊಳ್ಳದ ಬಂಡಾಯದ ಒಟ್ಟು ಪ್ರಗತಿಪರ ವಿಚಾರದೊಂದಿಗೆ ಗುರುತಿಸಿಕೊಂಡ ಹಲವು ಸಾಹಿತಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು. ರೈತ ಚಳುವಳಿಯ ಪ್ರೊ. ನಂಜುಂಡಸ್ವಾಮಿಯವರು, ಚಂಪಾರವರು, ಡಾ.ಜಿ.ರಾಮಕೃಷ್ಣ, ಕುಂ.ವೀರಭದ್ರಪ್ಪ, ಡಾ. ರಹಮತ್ ತರೀಕರೆ, ಜಿ.ಎನ್.ನಾಗರಾಜ್, ಡಾ.ಸಿದ್ದನಗೌಡ ಪಾಟೀಲ, ಸತೀಶ ಕುಲಕರ್ಣಿ, ದುರ್ಗಾದಾಸ್ ಡಾ.ಮಲ್ಲಿಕಾ ಘಂಟಿ, ಡಾ.ವಿನಯಾ, ಅಲ್ಲಮಪ್ರಭು ಬೆಟ್ಟದೂರು, ರಂಜಾನ್ ದರ್ಗಾ, ಆರ್.ವಿ. ಭಂಡಾರಿ, ಡಾ. ಸಂಜೀವಕುಲಕರ್ಣಿ ಮೊದಲಾದ ಹಲವು ಪ್ರಮುಖರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಬಗ್ಗೆ ರಾಷ್ಟ್ರೀಯತೆ, ದೇಸೀಯತೆ, ಯುದ್ಧ ಮತ್ತು ಶಾಂತಿಯ ಬಗ್ಗೆ ಒಂದು ಗೋಷ್ಠಿ, ಕರ್ನಾಟಕ ಕಂಡ ಚಳುವಳಿಗಳು; ಸ್ತ್ರೀವಾದದ ಪ್ರಸ್ತುತತೆ, ಸಮಕಾಲಿನ ಸಂದರ್ಭದಲ್ಲಿ ಚಳುವಳಿಯ ಹೊಸಪರಿಕಲ್ಪನೆಗಳ ಬಗ್ಗೆ, ಎರಡನೆಯ ಗೋಷ್ಠಿ, ಸೃಜನಶೀಲತೆ, ಬದ್ಧತೆ, ಸಮಾಕಾಲಿನ ಸಂದರ್ಭದಲ್ಲಿ ಸಾಹಿತ್ಯದ ಸಾಧ್ಯತೆಗಳು ಬಗ್ಗೆ ಮತ್ತೊಂದು ಗೋಷ್ಠಿ, ಉತ್ತರ ಕರ್ನಾಟಕದ ಸಮಸ್ಯೆಗಳು, ಮೀಸಲಾತಿಯ ಪ್ರಸ್ತುತ ಪರಿಸರದ ಬಗ್ಗೆ ನಾಲ್ಕನೆಯ ಗೋಷ್ಠಿ ಏರ್ಪಾಟಾಗಿದ್ದವು.

ಪುಸ್ತಕಗಳ ಬಿಡುಗಡೆ, ಕವಿ ಗೋಷ್ಠಿಗಳು ನಡೆದವು. ಸಮಾರೋಪ ಸಮಾರಂಭದಲ್ಲಿ ಸಾಹಿತಿ ಕುಂ. ವೀರಭದ್ರಪ್ಪ, ಡಾ.ಚಂಪಾರವರು ಇಡೀ ಸಮ್ಮೇಳನದ ಚರ್ಚೆಗಳ ಆಶಯವನ್ನು ವ್ಯಕ್ತಗೊಳಿಸಿದರು. ಈ ಸಮ್ಮೇಳನದ ಮಂಡಿಸಲ್ಪಟ್ಟ ಕೆಲವು ಪ್ರಮುಖ ಅಭಿಪ್ರಾಯಗಳನ್ನು ಮುಂದೆ ನೀಡಲಾಗಿದೆ.

ಬಂಡಾಯ ಸಾಹಿತ್ಯ ಚಳುವಳಿ ಸಾವಿರಾರು ವ... ಸಂಘಟಿತ ಸ್ವರೂಪ ಪಡೆದ ಈ ಚಳುವಳಿಗೆ ... ಈ ತಿಂಗಳ 6-7 ರಂದು ನಡೆಯಿತು. ಈ ಸ... ಬಂಡಾಯ ಸಾಹಿತ್ಯ ಚಳುವಳಿ ಕ್ರಮಿಸಿದ, ಕ್ರ...

"ಬಂಡಾಯಕ್ಕೆ 20 ವರ್ಷಗಳು ತುಂಬುತ್ತಿವೆ. ನದಿಗಳು ... ಕಾಲಕ್ಕೂ ತ್ವರಿತವಾಗಿ ಹರಿಯುವುದಿಲ್ಲ. ಅಂತೆಯೇ ಬಂ... ಚಳುವಳಿಯಾಗಲಿ ಅಥವಾ ಯಾವುದೇ ಚಳುವಳಿಯಾಗಲೀ ನಿರಂತ... ಪ್ರಖರವಾಗಿರುವುದಿಲ್ಲ. ನಮಗೆ ಪರಂಪರೆಯ ಪೂಜೆ ಬೇಡ, ಪ್ರಜ್ಞೆ... ಎಂಬ ಬರಗೂರರ ಮಾತುಗಳನ್ನು ಗಮನಿಸಬೇಕು.

ಕನ್ನಡದ ದಲಿತ-ಬಂಡಾಯ ಕಾವ್ಯ ಅನ್ಯಬಾಷೆಗ... ಅನುವಾದವಾಗುತ್ತಿಲ್ಲ? ಜಾತಿಸೂಚಕ ಲಾಂಛನಗಳನ್ನು ತೆಗೆದ ವ... ಜಾತಿ ಬಿಟ್ಟಂತಾಗಲಿಲ್ಲ. ಮನುಷ್ಯನನ್ನು ಹುಡುಕುವುದೇ ಬಂಡಾ... ಕೆಲಸ. ಬಂಡಾಯ ಕಾವ್ಯ ಅಬ್ಬರದ ಮಾತ್ರಲ್ಲ; ಮನಸ್ಸಿನ ವ... ಬಂಡಾಯದವರು ಕುರ್ಚಿಯಲ್ಲಿ ಕುಳಿತಾಗ ಕುರ್ಚಿಗಿಂತ ಸಣ್ಣವರಾಗ...

ಮುಖ್ಯಮಂತ್ರಿಯವರು ಸಾಯಿಬಾಬನನ್ನು ನಮ್ಮ ತಂದೆ ಎಂದ... ಶ್ರೀ ಎಸ್.ಎಂ. ಕೃಷ್ಣ ವ್ಯಕ್ತಿಯಾಗಿ ಹಾಗೆ ಭಾವಿಸಬಹುದು. ಮುಖ್ಯ... ಯಾಗಿ ನಮ್ಮ ಪರವಾಗಿ ಹೇಳುವ ಹಕ್ಕು ಅವರಿಗಿಲ್ಲ. ನಾವು ನಮ... ತಂದೆ ತಾಯಿಗಳ ಮಕ್ಕಳೇ ಹೊರತು ಸಾಯಿಬಾಬಾನ ಮಕ್ಕಳಲ್ಲ"

ಸತ್ಯಾನಂದ ಪಾ...
ಬಂಡಾಯ ಸಾಹಿತ್ಯ ಸಂಘಟನೆಯ ರಾಜ್ಯ ಸಂ...

★★★

"ಬಂಡಾಯ ಸಾಹಿತ್ಯವಾಗಿ, ಸಂವೇದನೆಯಾಗಿ ಜೀವಂತವಾ... ಸಂಘಟನೆ ನಿಷ್ಕ್ರಿಯಗೊಂಡಿರಬಹುದು. ವಿವಿಧವಾದಗಳ ಜನ ಬಂಡಾ... ಸಂಘಟನೆಯಲ್ಲಿ ಐಕ್ಯಗೊಂಡಿದ್ದಾರೆ...... ಬಹುರಾಷ್ಟ್ರೀಯ ಕಂಪ... ಹಾಗೂ ಸನಾತನತೆಯ ವಿರುದ್ಧ ಹೋರಾಡಬೇಕು"

ಶ್ರೀ. ಬರಗೂರು ರಾಮಚಂ...
ಬಂಡಾಯ ಸಾಹಿತ್ಯ ಚಳುವಳಿಯ ಪ್ರವರ್ತ...

★★★

. ಟಿವಿ, ರೇಡಿಯೋ ಮಾಧ್ಯಮಕ್ಕೆ ಸ್ವಾಯತ್ತತೆಯ ಅಗತ್ಯವಿದೆ. ಒ... ವಿಚಾರಧಾರೆಯ ಸಿನಿಮಾಗಳ ಅಗತ್ಯವಿದೆ. ಆದರೆ ಪ್ರೋತ್ಸಾಹ ಸಿಗು... ಇದೇ ಸ್ಥಿತಿ ಬಂಡಾಯ ಸಾಹಿತ್ಯಕ್ಕಿದೆ.

ಸಾಹಿತ್ಯ ಓದುವವರೇ ಕಡಿಮೆ. ಬಂಡಾಯ ಸಾಹಿತ್ಯ ಓದುವವ...ನ್ನು ಕಡಿಮೆ. ಓದುವುದು ಎಲ್ಲೆಡೆ ಕಡಿಮೆಯಾಗುತ್ತಿದೆ. ಬಂಡಾ... ಸಾಹಿತ್ಯ ಮುಂದುವರಿಸಬೇಕೆಂದರೆ ಬಂಡಾಯಕ್ಕೆ ಒಂದು ಟಿ.ವಿ ಚಾ... ಬೇಕು. ಟಿ.ವಿ ಮೂಲಕ ಅಭಿಪ್ರಾಯಗಳು ಜನರಿಗೆ ತೀವ್ರ ಮುಟ್ಟುತ್ತ...

ಶ್ರೀ. ಎಂ.ಎಸ್...
ಖ್ಯಾತ ಚಲನ ಚಿತ್ರ ನಿರ್ದೇಶ...

★★★

"20 ವರ್ಷಗಳಲ್ಲಿ 12 ಸಮ್ಮೇಳನಗಳಾಗಿವೆ. ಬಂಡಾಯದ... ನಿಷ್ಕ್ರಿಯೆಗೊಂಡಿದ್ದಾರೆಂದು ಭಾವಿಸಬೇಕಾಗಿಲ್ಲ. ಸಂಸ್ಕೃತವನ್ನು ಹಳ್ಳಿ... ಪಸರಿಸಲು ಕೇಂದ್ರ ಸರಕಾರ 20 ಕೋಟಿ ಖರ್ಚು ಮಾಡುವ ಯೋ... ಘೋಷಿಸಿದೆ. ಸಂಸ್ಕೃತವನ್ನು ಮುಂದಕ್ಕೆ ತರಲು ಹೊರಟ ಕ... ನಮ್ಮೆದುರಿಗಿದೆ. ಸಂಸ್ಕೃತ ಇದ್ದರೆ ಸಂಸ್ಕೃತಿ ಎಂಬುದು ಭ್ರಮೆ.

ಶುದ್ಧ ಚಾರಿತ್ರ್ಯದ ನೆಲೆಯಲ್ಲಿ ನಾವು ಆತ್ಮ ವಿವ... ಮಾಡಿಕೊಳ್ಳಬೇಕಾಗಿದೆ. ಕ್ರಿಯೆಯಲ್ಲಿ ತೊಡಗಿದ ವ್ಯಕ್ತಿಯ ಸಾ... ಸೃಷ್ಟಿಯನ್ನು ಪ್ರಶ್ನಿಸಬೇಕಾಗುತ್ತದೆ. ಅಸ್ಪೃಶ್ಯತೆಯ ಬಗ್ಗೆ ಹೇಳದ ಬೆಂಜ... ಮೊಲಾಯಿಸ್ ಬಗ್ಗೆ ಪದ್ಯ ಬರೆದರೆ ಪ್ರಯೋಜನವಿಲ್ಲ. ಒಳ್ಳೆಯ ಜ... ನಡೆಸಿದ ಬಂಡಾಯಗಾರನಿಗೆ ಜನರ ಪ್ರಶಂಸೆಗಿಂತ ಮಿಗಿ... ಪ್ರಶಸ್ತಿಯಿಲ್ಲ."

ಡಾ. ಜಿ.ರಾ...
ಮಾರ್ಕ್ಸ್‌ವಾದಿ ವಿಚಾರ...

★★★

ವ್ಯವಸ್ಥೆ ಕೆಟ್ಟಿದೆ, ಅದರ ವಿರುದ್ಧ ಹೋರಾಡಬೇಕೆ... ಮನೋಧರ್ಮ, ವಿವಿಧ ಚಿಂತನೆಗಳ ಮಿತ್ರರು ಬಂಡಾಯದಲ್ಲಿ... ಜಾಗತೀಕರಣ, ಉದಾರೀಕರಣ, ಖಾಸಗೀಕರಣವೆಂಬ ನಮ್ಮ ಆಸಾ... ಶತ್ರುಗಳ ವಿರುದ್ಧ ಹೋರಾಟವಿಲ್ಲದೆ ಸಮಸ್ಯೆಗಳಿಗೆ ಪರಿಹಾರ ಸಿ...

ನಿರ್ಣಯಗಳು

ಕಂಪ್ಯೂಟರ್‌ನಲ್ಲಿ ಕನ್ನಡ ಬಳಕೆ, ಕನ್ನಡ ಮಾಧ್ಯಮದಲ್ಲಿ ಕಲಿತವರಿಗೆ ಸರಕಾರಿ ಹಾಗೂ ಖಾಸಗಿ ನೌಕರಿಯಲ್ಲಿ ಆದ್ಯತೆ, ಮೀಸಲಾತಿಯನ್ನು ಮುಂದುವರಿಸುವುದು, ಸ್ತ್ರೀಮೀಸಲಾತಿಯನ್ನು ಸ್ಥಿರೀಕರಿಸುವುದು, ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮ ಮಾಡುಲವುದು. ಸಾಯಿಬಾಬಾನನ್ನು ಕರ್ನಾಟಕದ ರಕ್ಷಿಸಲು ಕೇಳಿಕೊಂಡ ಮುಖ್ಯಮಂತ್ರಿಯ ನಿಲುವಿನ ಖಂಡನೆ, ಪಠ್ಯ ಪುಸ್ತಕಗಳಲ್ಲಿ ಮಾರ್ಕ್ಸ್ ವಾದಿ ಸಿದ್ಧಾಂತ ಕಿಗೆದು ಹಾಕಿರುವ ಬಗ್ಗೆ ಖಂಡನೆ, ದೇಶೀ

ಕೃಷಿ ಕ್ಷೇತ್ರದ ಮೇಲೆ ಏಕರೂಪದ ಹೇರುತ್ತಿರುವ ಬಹುರಾಷ್ಟ್ರೀಯ ಕಂಪನಿಗಳ ಖಂಡನೆ. ಪ್ರಾದೇಸಿಕ ಅಸಮತೋಲನದ ಖಂಡನೆ, ಮುಂಡರಗಿ, ಗದಗ, ಹರಿಹರ ರೈಲ್ವೇ ಮಾರ್ಗ ನಿರ್ಮಾಣಕ್ಕೆ ಒತ್ತಾಯ, ಮುಂಡರಗಿಯಲ್ಲಿ ಸಾಹಿತ್ಯ ಭವನ ನಿರ್ಮಾಣ, ಕೆರೆಗಳ ಹೊಂಡು ತೆಗಸು ಬಗ್ಗೆ ಸರ್ವಾನುಮತದಿಂದ ನಿರ್ಣಯಗಳನ್ನು ಸ್ವೀಕರಿಸಲಾಯ್ತು.

ವರದಿ: ಡಾ|. ಆರ್.ವಿ.ಭಂಡಾರಿ, ಡಾ|. ಅಲ್ಲಮ ಪ್ರಭು ಬೆಟ್ಟದೂರು ಅವರ ಸಹಾಯದಿಂದ ಜಿ.ಎನ್. ನಾಗರಾಜ್

ಕ್ರಿಯಾ ಯೋಜನೆ ರೂಪಿಸುವ ನಿರ್ಧಾರ

…ಟಕದ ಸಾಂಸ್ಕೃತಿಕ ಬದುಕು ಕಂಡ ಬೆರಳೆಣಿಕೆಯ ಜನಮುಖೀ ಸಾಹಿತ್ಯ ಪರಂಪರೆಗಳಲೊಂದು. 1979 ರಲ್ಲಿ …ಸು ತುಂಬಿವೆ. ಇದನ್ನು ಸ್ಮರಿಸಲೆಂದೇ 12 ನೇ ಬಂಡಾಯ ಸಾಹಿತ್ಯ ಸಮ್ಮೇಳನ ಗದಗ ಜಿಲ್ಲೆಯ ಮುಂಡರಗಿಯಲ್ಲಿ …ರ್ಚೆಗೊಳಗಾದ ವಿಷಯಗಳನ್ನು "ಐಕ್ಯರಂಗ" ದ ಓದುಗರಿಗಾಗಿ ನೀಡುತ್ತಾ, ಮುಖ್ಯ ತಿರುವಿನಲ್ಲಿ ನಿಂತಿರುವ …ದಾರಿಯ ಕಡೆಗೆ ಒಂದು ಕಣ್ಣೋಟವನ್ನು ಇಲ್ಲಿ ಹರಿಸಲಾಗಿದೆ.

ಮುಕ್ತವಾಗಿ ಚರ್ಚಿಸುವುದು ಬಂಡಾಯದ ವಿಶೇಷತೆ ಸೈದ್ಧಾಂತಿಕ ಗಟ್ಟಿತನವಿರದವರು ನಮ್ಮ ಸಂಘಟನೆಯಲ್ಲಿ ಉಳಿಯಲಾರರು. ·

ಪ್ರೊ. ಚಂದ್ರಶೇಖರ ಪಾಟೀಲರು
ಬಂಡಾಯ ಸಾಹಿತ್ಯದ ಸಂಚಾಲಕರು

★★★

ಆಯಾ ಚಳುವಳಿಗಳವರು ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಕೆಲವು ಚಳುವಳಿಗಳು ನೋವಿನ ಅಭಿವ್ಯಕ್ತಿಯಾಗಿ ನಂತರ ಸಿದ್ಧಾಂತ ರೂಪಿಸಿಕೊಂಡವು. ಸಂಸದೀಯ ಬದಲಾವಣೆಯ ಮೂಲಕ ಸಾಮಾಜಿಕ ಬದಲಾವಣೆ ಸಾಧ್ಯವಿಲ್ಲ. ಸಂಸದೀಯ ಚಟುವಟಿಕೆ ಮೂಲಕ ರೈತ ಚಳುವಳಿ ತೀವ್ರತೆ ತಳೆದುಕೊಳ್ಳುತ್ತಿದೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಮೂಲಕವೂ ವರ್ಣ ವ್ಯವಸ್ಥೆ ಬರುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳೊಡನೆ ದೇಸೀ ಕಂಪನಿಗಳು ಸ್ಪರ್ಧಿಸಲು ಸಾಧ್ಯವಾಗುತ್ತಿಲ್ಲ. ಆಮದಿಗೆ ಮಿತಿಯಿಲ್ಲದಂಥ ವ್ಯವಸ್ಥೆ ಬರುತ್ತಿದೆ.

ಶೇಕಡಾ 4 ಆಮದಿಗೇ ಏರುಪೇರಾಗಿದೆ. ಸೈದ್ಧಾಂತಿಕ ಚರ್ಚೆಯಲ್ಲಿ ಕಾಲಹರಣ ಮಾಡದೆ ಬಂಡಾಯಗಾರರೆಲ್ಲ ಒಂದಾಗಬೇಕು. ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಮತ್ತು ಕೋಮುವಾದವೆಂಬ ವೈರಿಗಳು ಸ್ಪಷ್ಟವಾಗಿರೋದರಿಂದ ಎಲ್ಲಾ ಪ್ರಗತಿಪರ ಸಂಘಟನೆಗಳು ಜೊತೆಗೂಡಿ ಜಂಟಿ ಹೋರಾಟ ನಡೆಸಬೇಕು"

ಪ್ರೊ. ನಂಜುಂಡಸ್ವಾಮಿ
ರೈತ ಮುಖಂಡ

★★★

" ನಮ್ಮ ಚಳುವಳಿಗಳು ಮಂಕುಹಿಡಿದು ಕೂತಿವೆ. ಅಪರಾಧವೇ ಅಧಿಕಾರ ಹಿಡಿದು ಕೂತಂತೆ ಮಸೀದಿ ಕೆಡವಿದವರು ಕೇಂದ್ರದಲ್ಲಿ ಸರಕಾರ ರಚಿಸಿದ್ದಾರೆ! ಮಧ್ಯಮ ವರ್ಗದಲ್ಲಿ ಚಂಚಲತೆಯಿದೆ. ವ್ಯವಸ್ಥೆ ಜೋರಾಗಿದ್ದಾರೆ ಅದರ ಕಡೆ, ಜನಪರ ಚಳುವಳಿಗಳು ಜೋರಾಗಿದ್ದರೆ ಆಕಡೆ ಈ ವರ್ಗ ವಾಲುತ್ತದೆ. ವ್ಯವಸ್ಥೆ ಹಾಗೂ ಜನರ ಜೊತೆ ನಾವು ಹೇಗಿರಬೇಕೆಂಬುದನ್ನು ನಿರ್ಧರಿಸಿಕೊಳ್ಳಬೇಕು. ನಮ್ಮ ಬರಹವೇ ನಮ್ಮ ಮೊದಲ ಶತ್ರು. ನಮ್ಮ ಬರಹವನ್ನು ಪುನರ್ ವಿಮರ್ಶೆಗೆ ಒಡ್ಡಿಕೊಳ್ಳಬೇಕು. ಕೋಮುವಾದಿಗಳು ಜನ ಸಂಸ್ಕೃತಿಯ ಭಾಷೆ ಬಳಸುತ್ತಾರೆ. ಸಾರಸಾರ ವಿಚಾರಮಾಡದೆ ಜನ ಸಂಸಕೃತಿಯನ್ನು ನಾವು ಮೂಢನಂಭಿಕೆಯೆಂದು ಕರೆದು ತಪ್ಪು ಮಾಡುತ್ತಿದ್ದೇವೆ."

ಡಾ| ರಹಮತ್ ತರೀಕೆರೆ
ವಿಮರ್ಶಕರು ಹಾಗೂ ವಿಚಾರವಾದಿ,
ಕನ್ನಡ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು

★★★

ನಿರಂತರ ಸ್ವಾತಂತ್ರ್ಯದ ಹುಡುಕಾಟದ ಅಂಗವಾಗಿ ಹುಟ್ಟಿದ್ದು ಬಂಡಾಯ ಚಳುವಳಿ. ಬಹುರಾಷ್ಟ್ರೀಯ ಕಂಪನಿಗಳು ಅಭಿವೃದ್ಧಿ ಶೀಲ ದೇಶಗಳನ್ನು ತೂತ್ತಳ ತುಳಿಯುತ್ತಿವೆ.

ಜಾಗತೀಕರಣದ ಅಂಗವಾಗಿ ಹಿಂದುತ್ವವನ್ನು ಹೇರಲಾಗುತ್ತಿದೆ. ಜಾಗತಿಕವಾಗಿ ವಸ್ತುಗಳ ಬೆಲೆಯೇರಿಕೆಯ ಹಿನ್ನೆಲೆಯಲ್ಲಿ ರೈತ ಉತ್ಪಾದನಾ ವಸ್ತುಗಳ ಬೆಲೆ ಏರುಪೇರಾಗುತ್ತಿದೆ. ಹೀಗಾಗಿ ರೈತ ಆತ್ಮಹತ್ಯೆ ಮಾಡಿಕೊಳ್ಳತೊಡಗಿದ್ದಾನೆ.

ಬಹುರಾಷ್ಟ್ರೀಯ ಕಂಪನಿಗಳು ಬ್ರಿಜ್ ಮುಂತಾದ ಕಟ್ಟಡಗಳ ಕಾರ್ಯ ಮಾಡುವಾಗ ಮಾನವ ಶಕ್ತಿ ಬದಲು ಯಂತ್ರ ಶಕ್ತಿ ಬಳಸುತ್ತಿವೆ. ಆರ್ಥಿಕ ಅಸಮಾನತೆ ಉಂಟಾಗುತ್ತಿದೆ. ಬೆಲೆಯೇರಿಕೆ ಉಂಟಾಗುತ್ತಿದೆ. ಶಿಕ್ಷಣ ದುಬಾರಿಯಾಗುತ್ತಿದೆ. ದುಡಿಮೆಯ ಅವಕಾಶಗಳು ಕಡಿಮೆಯಾಗುತ್ತಿವೆ. ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಹೋರಾಟ ನಡೆಯದಂತೆ ಮಾಡಲು ಜನರ ಮನಸ್ಸನ್ನು ಕೋಮುವಾದದ ಕಡೆ ತಿರುಗಿಸಲಾಗುತ್ತಿದೆ.

ಸಿನಿಮಾದಲ್ಲಿ ಕಾಮ, ಹಿಂಸೆ, ಕ್ರೌರ್ಯ ತಂದು ತರುಣರನ್ನು ಹಾದಿ ಬಿಡಿಸಲಾಗುತ್ತಿದೆ. ಆದರೆ ಜಾಗತೀಕರಣ ನೀತಿಯಿಂದಾಗಿ ಜನತೆಯ ಬದುಕಿನ ಮೇಲೆ ಆಗುತ್ತಿರುವ ಆಘಾತಗಳು ದೊಡ್ಡ ಚಳುವಳಿಗಳ ಅಲೆಯನ್ನು ಹುಟ್ಟಿಸಲಿವೆ. ಅದಕ್ಕೆ ಬಂಡಾಯ ಸಾಹಿತ್ಯ ಚಳುವಳಿ ಅಣಿಯಾಗಬೇಕಿದೆ.

ಜಿ.ಎನ್.ನಾಗರಾಜ್
ಮಾರ್ಕ್ಸ್‌ವಾದಿ
ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಬಗ್ಗೆ

★★★

ಕೋಮುವಾದ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧದ ಹೋರಾಟಕ್ಕೆ ಕ್ರಿಯಾಯೋಜನೆ ತಯಾರಾಗಬೇಕು. ಒಂದು ಸರಳವಾದ ಕರಪತ್ರದ ಮೂಲಕ ಮೊದಲು ಜನರಿಗೆ ಕೋಮುವಾದ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಅವಾಂತರ ತಿಳಿಸಬೇಕು.

ಸಂಸ್ಕೃತ ಕಲಿಸಲು ಸ್ವಯಂ ಸೇವಕರಿಗೆ 20 ಕೋಟಿ ಹಂಚಲು ಕೇಂದ್ರ ಸರಕಾರ ತಯಾರಾಗಿದೆ. ಕನ್ನಡ ಮತ್ತು ಆಯಾ ರಾಜ್ಯಗಳಲ್ಲಿಯ ಭಾಷೆಯ ಪ್ರಚಾರಕ್ಕಾಗಿ, ಅಭಿವೃದ್ಧಿಗಾಗಿ ಹಣ ನೀಡಲು ಕೇಂದ್ರ ಸರಕಾರವನ್ನು ಒತ್ತಾಯಿಸಬೇಕು.

ಯುದ್ಧದಿಂದ ಬಡದೇಶಗಳು ಏನಾಗುತ್ತವೆ ಎಂಬುದನ್ನು ಪಾಕಿಸ್ತಾನ ಹಾಗೂ ಭಾರತ ತೋರ್‍ಸಿಕೊಟ್ಟಿದೆ.

ಶ್ರೀ ಅಲ್ಲಮ್ಮ ಪ್ರಭು ಬೆಟ್ಟದೂರು.

★★★

. " ಪುರುಷರು ಪ್ರಧಾನತೆಯನ್ನು ನಿರಾಕರಿಸಿ ಸ್ತ್ರೀ ಪುರುಷರಿಬ್ಬರೂ ಪ್ರಧಾನವಾಗಿರುವ ಕುಟುಂಬ ವ್ಯವಸ್ಥೆಯು ಅಗತ್ಯವಿದೆ. ಬಾರತೀಯ ಸ್ತ್ರೀವಾದ ಸ್ಪರ್ಧೆಯನ್ನು ಪಡೆದುಕೊಳ್ಳುತ್ತಿದೆ. ಸ್ತ್ರೀ ಪ್ರಥಮ ಗುಲಾಮಳು, ಆರ್ಥಿಕ ಸ್ವಾವಲಂಬನೆ ಕಳೆದು ಕೊಂಡಿದ್ದೇ ಸ್ತ್ರೀ ಸ್ವಾತಂತ್ರ್ಯ ಕಳೆದುಕೊಳ್ಳಲು ಕಾರಣವಾಗಿದೆ.

ಹಿಂದೂ, ಮುಸ್ಲಿಂ ಘರ್ಷಣೆಯ ಸಂದರ್ಭದಲ್ಲಿ ಸ್ತ್ರೀ ಶೋಷಣೆಯನ್ನು ಊಹಿಸಬಹುದು. ಸ್ತ್ರೀವಾದ ಪುರುಷಪ್ರಧಾನ ವ್ಯವಸ್ಥೆ ವಿರುದ್ಧವಿದೆಯೇ ಹೊರತು ಪುರುಷರ ವಿರುದ್ಧ ಅಲ್ಲ. ಹೆಣ್ಣನ್ನು ಸಿದ್ಧ ಮಾದರಿಯಿಂದ ನೋಡಲಾಗಿದೆ. ಎಲ್ಲ ವರ್ಣದ ಸ್ತ್ರೀಯರನ್ನು ಶೂದ್ರರೆಂದು ಭಾವಿಸಲಾಗಿದೆ. ಜಾನಪದದಲ್ಲಿ " ಹೆಣ್ಣು ಆಗುವದಕ್ಕಿಂತ ಮಣ್ಣು ಆಗುವುದು ಲೇಸು" ಎನ್ನಲಾಗಿದೆ. ಮನು ಹೇಳಿದ್ದನ್ನೇ ಸಂಚಿ ಹೊನ್ನಮ್ಮ ಸರಳಗೊಳಿಸಿ ಹೇಳಿದಳು.

ನಮ್ಮ ಸರಕಾರಗಳು ಸ್ತ್ರೀವಾದದ ವಿರೋಧಿಗಳಾಗಿವೆ. ಮಹಿಳೆಯರಿಗೆ ಪ್ರಜ್ಞೆ ಬರುವುದು ಸರಕಾರಗಳಿಗೆ ಬೇಕಾಗಿಲ್ಲ, ಕುಟುಂಬದ ಚೌಕಟ್ಟಿನಲ್ಲೂ ಸ್ತ್ರೀಗೆ ರಕ್ಷಣೆಯಿಲ್ಲ. ಅತಿಯಾಂತ್ರೀಕರಣದಿಂದಾಗಿ ಸ್ತ್ರೀ ಉದ್ಯೋಗದಿಂದ ವಂಚಿತಳಾಗುತ್ತಿದ್ದಾಳೆ."

ಡಾ. ವಿನಯಾ
ಕಾಲೇಜು ಪ್ರಾಧ್ಯಾಪಕರು, ಸವಣೂರು
ಭಾರತೀಯ ಸಮಾಜ ಹಾಗೂ ಸ್ತ್ರೀವಾದ ಕುರಿತು.

★★★

" ಚಳುವಳಿಗಳ ಸ್ಥಗಿತತೆಗೆ ಸಾಮಾಜಿಕ ಕಾರಣಗಳಿವೆ. ಚಳುವಳಿಗಳ ಬಗ್ಗೆ ಜನರ ಪ್ರತಿಕ್ರಿಯೆ, ಸರಕಾರಗಳ ಪ್ರತಿಕ್ರಿಯೆ ತೀವ್ರವಾಗಿಲ್ಲ. ಮನುಷ್ಯನ ಸಂವೇದನೆಗೆ ಧಕ್ಕೆಯೊದಗಿದೆ. ಆತ್ಮಾವಲೋಕನ ಹಾಗೂ ಹುಡುಕಾಟದ ಸಂದರ್ಭ ಇದು. ಭ್ರಷ್ಟಚಾರಕ್ಕೆ ಮೌಲ್ಯ ಪ್ರಾಪ್ತವಾಗಿದೆ. ಜಾತಿಯ ಜೊತೆಗೆ ಗುರುತಿಸಿಕೊಳ್ಳುವವನು ಅನಾಥ ಪ್ರಜ್ಞೆಯಿಂದ ಬಳಲುತಿದ್ದಾನೆ. ಕೋಮುವಾದಿಗಳು ಕ್ರಿಯೆ ನಡೆಸುತ್ತಿದ್ದಾರೆ. ನಾವು ಪ್ರತಿಕ್ರಿಯೆ ಕೊಡುವಷ್ಟಕ್ಕೆ ಸೀಮಿತರಾಗಿದ್ದೇವೆ.

ಮುಂದಿನ ದಿನಗಳಲ್ಲಿ ನಿರುದ್ಯೋಗಿ ಯುವಕರು, ಮಹಿಳೆಯರು ಚಳುವಳಿಗಳಲ್ಲಿ ತೊಡಗಲಿದ್ದಾರೆ. ನಮ್ಮ ವೈರಿಗಳು ಈಗ ಸ್ಪಷ್ಟವಾಗಿದ್ದಾರೆ. ಆದಕ್ಕಾಗಿ ಐಕ್ಯ ಹೋರಾಟಗಳ ಅಗತ್ಯವಿದೆ. ನಾವು ಪರ್ಯಾಯ ವ್ಯವಸ್ಥೆಯ ಕನಸನ್ನಾದರೂ ಕಾಣಬೇಕು. ಈಗಿನ ಸ್ಥಿತ್ಯಂತರ ಜನ ಸಾಮಾನ್ಯರಿಗೆ ಗೊತ್ತಾಗುತ್ತಿಲ್ಲ. ಸಾಹಿತ್ಯ ವಿಚಾರ ಕೊಡಬಹುದು. ಕ್ರಾಂತಿಗೆ ಮಾಧ್ಯಮವಾಗಬಹುದು,,

ಡಾ|. ಸಿದ್ದನಗೌಡ ಪಾಟೀಲ
ಸಮಕಾಲಿನ ಸಂದರ್ಭ ಹಾಗೂ ಚಳುವಳಿಯ ಹೊಸ ಪರಿಕಲ್ಪನೆ ಬಗ್ಗೆ

★★★

"ಶಿಕ್ಷಣ ಮತ್ತು ಮೀಸಲಾತಿಗಳು ಸಾಮಾಜಿಕ ಬದಲಾವಣೆಗೆ ಪ್ರೇರಣೆ ನೀಡಿವೆ, ಹಳೆಯ ಕಾಲದಲ್ಲಿ ಮೀಸಲು ವ್ಯವಸ್ಥೆ ಇತ್ತು. ಪುರೋಹಿತತನ, ವೇದಾಧ್ಯಯನ ಎಂಬ ವೈಟ್ ಕಾಲರ್ ಜಾಬ್ ಬ್ರಾಹ್ಮಣರಿಗೆ ಮೀಸಲಾಗಿತ್ತು. ಕ್ಷತ್ರಿಯರಿಗೆ ವೀರವೃತ್ತಿ, ವೈಶ್ಯರಿಗೆ ವ್ಯಾಪಾರ, ಶೂದ್ರರಿಗೆ ಶ್ರಮದಾಯಕ ಕೆಲಸವೆಂಬ ಮೀಸಲಾತಿಯಿತ್ತು. ಅರ್ಹತೆಯಿದ್ದ ಏಕಲವ್ಯನಂತವರಿಗೆ ವಿದ್ಯೆಸಿಗಲಿಲ್ಲ.

ಮೀಸಲಾತಿಗಾಗಿ ಪ್ರಥಮವಾಗಿ ಬ್ರಿಟಿಷರೆದುರಿಗೆ ಬೇಡಿಕೆಯಿಟ್ಟವರು ಮುಸ್ಲಿಮರು. ನಂತರ ದಲಿತರಪರವಾಗಿ ಅಂಬೇಡ್ಕರ್ ಬ್ರಿಟಿಶರೆದುರು ಅಹವಾಲು ಇಡುತ್ತಾರೆ. ಮೀಸಲಾತಿಯಿಂದ ಸಕಾರಾತ್ಮಕ ಬದಲಾಣೆ ಆಗಿದೆ. ಮೀಸಲು ತತ್ವಕ್ಕೆ ಸಮಾನತೆಯ, ಮಾನವೀಯತೆಯ ಆಶಯಗಳಿವೆ.

ಡಾ. ದುರ್ಗಾದಾಸ್
ಪ್ರಸ್ತುತ ಸಾಮಾಜಿಕ ಪರಿಸರದಲ್ಲಿ ಮೀಸಲಾತಿ ಎಂಬ ಬಗ್ಗೆ

★★★

. ಹಲವಾರು ದೇಶಿಯತೆ ಸೇರಿ ರಾಷ್ಟ್ರೀಯತ ಆಗಿದೆ. ಬೃಹತ್ ಯಾಂತ್ರೀಕರಣ, ಕೇಂದ್ರೀಕರಣದಿಂದಾಗಿ ಉದ್ಯೋಗ ನಾಶ ಮತ್ತು ಪರಿಸರ ನಾಶವಾಗಲಿದೆ. ಸಂಪನ್ಮೂಲದ ಸಂಗ್ರಹ ಹಾಗೂ ಹಂಚಿಕೆ, ಸರಳ ತಂತ್ರ ಮುಖ್ಯ. 8000 ಬಹುರಾಷ್ಟ್ರೀಯ ಕಂಪನಿಗಳು ಬಂದಿವೆ. ದೇಸಿಯನ್ನು ಅಘೋಷಿತ ತತ್ವವಾಗಿ ಅಳವಡಿಸಿಕೊಂಡಾಗ ಬಹುರಾಷ್ಟ್ರೀಯತೆಗೆ ಪರ್ಯಾಯ ಸಿಗಬಹುದು. ಕ್ರಿಶ್ಚಿಯನ್, ಮುಸ್ಲಿಂ ಧರ್ಮಗಳು ಭಾರತಕ್ಕೆ ಬಂದು ಸಾವಿರಾರು ವರ್ಷಗಳಾದರೂ ಅವುಗಳನ್ನು ವಿದೇಶಿ ಧರ್ಮಗಳೆಂದು ಪರಿಭಾವಿಸಲಾಗುತ್ತಿದೆ. ಪಾಶ್ಚಿಮಾತ್ಯ ಭೋಗ ಸಂಸ್ಕೃತಿಯ ಹಿಂದೆ ನಮ್ಮ ಜನ ಓಡುತ್ತಿದ್ದಾರೆ. ಸರ್ವ ಸಮ್ಮತ ಕನಿಷ್ಟ ಕ್ರಿಯಾ ಯೋಜನೆಯನ್ನು ಬಂಡಾಯ ಕೊಟ್ಟು ಬಹುರಾಷ್ಟ್ರೀಯ ಕಂಪನಿಗಳ ಕೃತ್ಯಕ್ಕೆ ತಡೆ ಒಡ್ಡಬೇಕು."

ಖ್ಯಾತ ವೈದ್ಯ ಡಾ|. ಸಂಜೀವ ಕುಲಕರ್ಣಿ
'ದೇಸೀಯತೆ' ಹಾಗೂ 'ರಾಷ್ಟ್ರೀಯತೆ'ಯ ಬಗ್ಗೆ

★★★

"ಸಾಹಿತ್ಯ ಮತ್ತು ಶಿಕ್ಷಣದ ಮೂಲಕ ಅಸ್ಪೃಶ್ಯತೆಯ ಬಗ್ಗೆ ಅಬಿವ್ಯಕ್ತಿಸಬೇಕಾಗಿದೆ. ಇದು ಕೋಮು ವಿಜೃಂಭಣೆಯ ಕಾಲ. ಸಂಸ್ಕೃತಕ್ಕೆ ಮಾನ್ಯತೆ ನೀಡುವುದರ ಮೂಲಕ ಸಂಪ್ರದಾಯದ ಸಂಸ್ಕೃತಿಯನ್ನು ಹೇರುವ ಪ್ರಯತ್ನ ನಡೆದಿದೆ. ಉದ್ಯೋಗವಿಲ್ಲದ್ದರಿಂದ ಯುವಕರು ಮಿಲಿಟರಿ ಸೇರಲು ಮುನ್ನುಗ್ಗುತ್ತಿದ್ದಾರೆಯೇ ಹೊರತು ಕೇವಲ ದೇಶಪ್ರೇಮದ ಹಿನ್ನೆಲೆಯಿಂದಲ್ಲ. ಕಲಾತ್ಮಕ ನಿರೂಪಣೆಯಕಡೆ ಮಹತ್ವ ನೀಡಬೇಕು. ಕವಿತೆ ಸುಂದರವಾದರೆ ಸಾಲದು, ಅದಕ್ಕೆ ಬದ್ಧತೆ ಬೇಕು.

ಆರ್.ವಿ.ಭಂಡಾರಿ ಖ್ಯಾತ ಬಂಡಾಯ ಸಾಹಿತಿ

★★★

ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದವರು ಪ್ರತ್ಯೇಕ ರಾಜ್ಯ ಯಾಕೆ ಕೇಳುತ್ತಿದ್ದಾರೆಂದು ಚಿಂತಿಸಬೇಕು. ಕಾವೇರಿ ಹೋರಾಟಕ್ಕೆ ಉತ್ತರ ಕರ್ನಾಟಕದವರು ಸ್ಪಂದಿಸಿದರೆ ಕೃಷ್ಣೆಗಾಗಿ ದಕ್ಷಿಣ ಕರ್ನಾಟಕದವರು ಸ್ಪಂದಿಸುತ್ತಿಲ್ಲ. ಉತ್ತರ ಕರ್ನಾಟಕದ ಯಾವ ರಸ್ತೆಗಳೂ ಚೆನ್ನಾಗಿಲ್ಲ. ಉತ್ತರ ಕರ್ನಾಟಕದ ಕೃಷಿ ಬೆಳೆಗಳಿಗೆ ಬೋರ್ಡ್‌ಗಳಿಲ್ಲ. ಹತ್ತಿ ಬೆಳೆಯುವ ಕ್ಷೇತ್ರ ಉತ್ತರ ಕರ್ನಾಟಕದಲ್ಲಿ ವ್ಯಾಪಕವಾಗಿದ್ದರೂ ಟೆಕ್ಸ್ ಟೈಲ್ ಮಿಲ್‌ಗಳನ್ನು ಸ್ಥಾಪಿಸಲಿಲ್ಲ.

ಕನ್ನಡ ಚಲನಚಿತ್ರೋದ್ಯಮಕ್ಕೆ ಕೋಟಿಗಟ್ಟಲೆ ಹಣ ಉತ್ತರ ಕರ್ನಾಟಕ ಕೊಟ್ಟರೂ ಉತ್ತರ ಕರ್ನಾಟಕದ ಕಲಾವಿದರಿಗೆ ಚಲನ ಚಿತ್ರಗಳಲ್ಲಿ ನಟಿಸಲು ಅವಕಾಶಸಿಗುತ್ತಿಲ್ಲ. ಉತ್ತರ ಕರ್ನಾಟಕದ ಭಾಷೆಯನ್ನು ಅಪಹಾಸ್ಯಕ್ಕೆ ಬಳಸಲಾಗುತ್ತಿದೆ. ಉತ್ತರ ಕರ್ನಾಟಕದ ಸಂಸ್ಕೃತಿ ಟಿ.ವಿಯಲ್ಲಿ ಕಾಣುತ್ತಿಲ್ಲ. ಗುಲ್ಬರ್ಗದಲ್ಲಿ ಪ್ರಪ್ರಥಮವಾಗಿ ಟಿ.ವಿ. ಪ್ರವೇಶವಾದರೂ ಗುಲ್ಬರ್ಗ ಟಿ.ವಿ. ಕೇಂದ್ರ ಅಭಿವೃದ್ಧಿ ಪಡಿಸಿಲ್ಲ. ಇಡೀ ಪಠ್ಯಪುಸ್ತಕ ಸಮಿತಿಗಳಲ್ಲಿ ಉತ್ತರ ಕರ್ನಾಟಕಕ್ಕೆ ಪ್ರಾತಿನಿಧ್ಯವಿಲ್ಲ.

ಜನ ಮತ್ತು ಜನಪ್ರತಿನಿಧಿಗಳಿಬ್ಬರೂ ಉತ್ತರ ಕರ್ನಾಟಕದ ಸಮಸ್ಯೆಗಳಿಗಾಗಿ ಹೋರಾಡಬೇಕು.

ಸಿದ್ದನಗೌಡ ಪಾಟೀಲ್
ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ

★★★

"ಚಳುವಳಿಗಳು ನಮ್ಮನ್ನು ಲೇಖಕರನ್ನಾಗಿ ರೂಪಿಸಿವೆ. ನಮ್ಮ ಮಧ್ಯೆ ಅನೇಕ ದುರ್ಘಟನೆಗಳು ಜರುಗತ್ತಿವೆ. ನಮ್ಮ ಪ್ರತಿಭಟನೆ ಜನರಿಗೆ ಮುಟ್ಟುತಿಲ್ಲ, ಜನತಾದಳ ಸರ್ಕಾರ ಕೋಮುವಾದಿಗಳೊಂದಿಗೆ ಸೇರಿಕೊಂಡಾಗ ಚಂಪಾ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ರಾಜೀನಾಮೆ ಕೊಡಬೇಕಾಗಿತ್ತು.

ಕುಂ.ವೀರಭದ್ರಪ್ಪ

ಉತ್ತರ ಕನ್ನಡ ಜಿಲ್ಲೆಯ ಹಿಂದುಳಿದ ತಾಲ್ಲೂಕು ಜೋಯ್ಡಾದ ಕೆಲವು ಪ್ರದೇಶಗಳ ರೈತಕೂಲಿಕಾರರ ಗೋಳಿನ ಕಥೆ ಇದು. ಸಂಘ ರಚಿಸಿ ಹೋರಾಟಕ್ಕಿಳಿದ ವಿವರ ಇದು

ನಮಗೆ ಮನುಷ್ಯರಂತೆ ಬದುಕಲು ಅವಕಾಶ ಮಾಡಿಕೊಡಿ

ವಿಠ್ಠಲ ಭಂಡಾರಿ

ಇವರು ಕೇಳಿದಾಗಲೆಲ್ಲ ಓಟು ಕೊಟ್ಟಿದ್ದೇವೆ. ಹತ್ತಾರು ವರ್ಷಗಳಿಂದ ನಮ್ಮ ಬೇಡಿಕೆಗಳನ್ನು ಮುಂದಿಟ್ಟಿದ್ದೇವೆ. ಚುನಾವಣೆ ಕಳೆದ ಮೇಲೆ ಯಾರೊಬ್ಬರೂ ಈ ಕಡೆ ತಿರುಗಿ ನೋಡಿಲ್ಲ. ನಾವು ಇತರರಂತೆ ಬದುಕಬೇಕೆಂದು ಆಶಿಸುವುದು ತಪ್ಪೇ? ನಮ್ಮ ಮಕ್ಕಳೂ ಶಾಲೆಗೆ ಹೋಗಬೇಕು, ಸರ್ಕಾರಿ ನೌಕರಿ ಮಾಡಬೇಕೆಂದು ಕನಸು ಕಾಣುವುದೂ ತಪ್ಪೇ? "ನೀವು ಕಾಡಿನಲ್ಲಿದ್ದವರು. ಪ್ರಾಣಿಯಂತೆ ಇದ್ದೀರಿ. ಇನ್ನು ಮುಂದೆ ಕೂಡ ಹೀಗೆ ಇರಿ. ಹಕ್ಕಿನ ಬಗ್ಗೆ, ಸೌಲತ್ತಿನ ಬಗ್ಗೆ ಸೊಲ್ಲೆತ್ತಬೇಡಿ. ಇದನ್ನು ಪಡೆಯುವ ಅರ್ಹತೆ ನಿಮಗಿಲ್ಲ' ಎಂದಾದರೂ ಹೇಳಿಬಿಡಿ ನಾವು ಆಸೆಯನ್ನು ಬಿಟ್ಟು ಹೇಗಾದರೂ ಬದುಕಿ ಕೊಳ್ಳುತ್ತೇವೆ. ಇಷ್ಟು ದಿನ ಬದುಕಿದಂತೆ. ಇದು ಉತ್ತರ ಕನ್ನಡದ ಜೊಯ್ಡಾ ತಾಲೂಕಿನ ನಾಗೋಡು ಬಾಜಾರ್ಕೋಣ ಪಂಚಾಯತ್ ಪ್ರದೇಶದ ಹಳ್ಳಿಗರ ಅಸಹಾಯಕ ಧ್ವನಿ.

ಇದು ಇವರ ನೋವಿನ ಧ್ವನಿ, ಬೇಡಿಕೆಯ ಧ್ವನಿ ಮತ್ತು ಪ್ರತಿಭಟನೆಯ ಧ್ವನಿ ಕೂಡ. ಈ ಎಲ್ಲಾ ಧ್ವನಿಗಳಿಗೆ ಅವರದೇ ಆದ ಬಲವಾದ ಕಾರಣಗಳಿವೆ. ಈವರೆಗೆ ಅಲ್ಲಿಂದ ಆಯ್ಕೆಯಾದ ಜನ ಪ್ರತಿನಿಧಿಗಳ ನಿರ್ಲಕ್ಷ್ಯ ಮತ್ತು ಯೋಜನಾ ಬದ್ಧವಲ್ಲದ ಆಡಳಿತದ ಫಲ ಇದು.

ಉತ್ತರ ಕನ್ನಡದ ಜೋಯ್ಡಾ ತಾಲೂಕಿನ ಕಿರವತ್ತಿ ಕ್ರಾಸಿನಿಂದ ಒಳ ಹೊಕ್ಕಿದರೆ ಗೋವಾದ ಗಡಿಯವರೆಗೂ ಇಂತಹ ಗೋಳಿನ ಕಥೆ ಹೇಳುವ ಹತ್ತಾರು ಹಳ್ಳಿಗಳು ಸಿಗುತ್ತವೆ. ಕಿರವತ್ತಿನಿಂದ ಸುಮಾರು 60-65 ಕಿ.ಮಿ. ವರೆಗೆ ವ್ಯಾಪಿಸಿಕೊಂಡಿರುವ ಈ ಹಳ್ಳಿಗಳು ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿವೆ. ಮುಡೆ, ಕಾರ್ಚೋಳಿ, ಕಾನಾಂವ್, ಶಿರೋಳಿ, ಬ್ಯಾಮಣೆ, ಶೀಶೆ, ದೂದ್‌ಮಾಳೆ, ಡಿಗ್ಗಿ, ಅಸುಳ್ಳಿ, ಬಂಜರ್ ಕೋಣ, ಕಡಕಿ, ಅಮೋಡ, ಫೋಪಳವಾಡಿ, ಕ್ಯಾಸಲ್‌ರಾಕ್......... ಹೀಗೆ ಹಳ್ಳಿಗಳ ಹೆಸರು ಹೇಳುತ್ತಾ ಹೋಗಬಹುದು. ಸುಮಾರು 7000ದಷ್ಟು ಜನಸಂಖ್ಯೆ ಇರುವ ಈ ಊರುಗಳು ಸುತ್ತಲೂ ಕಾಡಿನಿಂದ ಆವೃತವಾಗಿವೆ. 10-12 ಕಿ.ಮಿ. ದೂರದವರೆಗೆ ಕಚ್ಚಾ ರಸ್ತೆ ಮಾತ್ರ ಇದೆ. ತೀರಾ ಕಷ್ಟಪಟ್ಟರೆ ಅಲ್ಲಿಂದ 4-5 ಕಿ.ಮಿ. ದೂರದವರೆಗೆ ಜೀಪು ಓಡಿಸಬಹುದಾದ (ಬೇಸಿಗೆಯಲ್ಲಿ ಮಾತ್ರ) ಜಲಾವು ಕಟ್ಟಿಗೆ ಸಾಗಿಸುವ ಲಾರಿಯ ರಸ್ತೆ ಇದೆ. ಅಷ್ಟೆ.

ಸಾಮಾನ್ಯವಾಗಿ ಇಲ್ಲಿ ವಾಸಿಸುತ್ತಿರುವ ಬಹು ಸಂಖ್ಯಾತರು 'ಕೋಣಬಿ' ಜನಾಂಗಕ್ಕೆ ಸೇರಿದವರು. ಇವರೊಂದಿಗೆ ದೇಸಾಯಿ, ನಾಯಕ (ಕೊಂಕಣಿ) ಸಮುದಾಯಕ್ಕೆ ಸೇರಿದ ಕೆಲವು ಕುಟುಂಬಗಳಿವೆ. ನೂರಾರು ವರ್ಷಗಳಿಂದ ನಾವು ಇಲ್ಲೇ ವಾಸವಾಗಿದ್ದೇವೆಂದು ಹಿರಿಯರು ಹೇಳುತ್ತಾರೆ. ಇವರ ಮಾತೃಭಾಷೆ ಮರಾಠಿ. ಇತ್ತೀಚಿನ ಹುಡುಗರಿಗೆ ಕನ್ನಡ ಕೂಡ ಬರುತ್ತದೆ. ಕೊಂಕಣಿ ಮಾತನಾಡುವವರು ಇದ್ದಾರೆ.

ವರ್ಷದ ಏಳು ತಿಂಗಳು ಕೂಲಿಗಾಗಿ ಅಲೆತ. ಇದ್ದ ಸ್ಥಳದ ಸುತ್ತ ದಟ್ಟಕಾಡು. ಶಾಲೆ ಪ್ರಾರಂಭ ಆಗಿರುವುದು ಇತ್ತೀಚಿಗೆ - ಅಂದ ಮೇಲೆ ಶೈಕ್ಷಣಿಕ ಸ್ಥಿತಿಯ ವಿವರಣೆ ಬೇಕಿಲ್ಲ. ಪ್ರೇಮಾನಂದ ಇಲ್ಲಿಯ ಏಕೈಕ ಪದವೀಧರ. ಹೆಣ್ಣು ಮಕ್ಕಳು ಏಳನೇ ತರಗತಿಯವರೆಗೆ ಓದಿದವರು. ಅದೂ ಒಬ್ಬಿಬ್ಬರು ಅಷ್ಟೆ. ಕೆಲವು ಕಡೆ ಪ್ರಾಥಮಿಕ ಶಾಲೆ ಇದೆ, ಹುಡುಗರಿದ್ದಾರೆ ಶಿಕ್ಷಕರಿಲ್ಲ. ಶಿಕ್ಷಕರಿದ್ದಲ್ಲಿ ಕಟ್ಟಡ ಇಲ್ಲ. ವಾಗೇಲಿ, ಕಾನಗಾಂವ್‌ಗಳಲ್ಲಿ ಮಕ್ಕಳಿದ್ದಾರೆ. ಒಂದೆರಡು ಕೊಠಡಿ ಇದೆ. ಆದರೆ ಶಿಕ್ಷಕರೇ ಇಲ್ಲ. ಇನ್ನು ಕೆಲವು ಕಡೆ 'ಅಪರೂಪಕ್ಕೊಮ್ಮೆ ಶಿಕ್ಷಕರು ಬರುತ್ತಾರೆ. ಆದರೂ ಬರುತ್ತಾರಲ್ಲಾ ಎನ್ನುವುದೇ ಸಂತೋಷ' ಎಂದು ಹಳ್ಳಿಯವರು ನಿಟ್ಟುಸಿರು ಬಿಡುತ್ತಾರೆ. ಹೈಸ್ಕೂಲಿಗಾಗಿ ಸ್ಥಳ ಸಿಕ್ಕರೆ ವ್ಯಾಸಂಗ ಇಲ್ಲದಿದ್ದರೆ ಗದ್ದೆ ಕೆಲಸ, ಬಿಟ್ಟರೆ ನೆರೆ ರಾಜ್ಯದಲ್ಲಿ ರಸ್ತೆ ಕೆಲಸ. ಹೀಗಿದ್ದ ಮೇಲೆ ಇಲ್ಲಿಯ ಶೈಕ್ಷಣಿಕ ಪ್ರಗತಿ ಹೇಗಿರಬಹುದು? ನೀವೇ ಯೋಚಿಸಿ ಈ ಭಾಗದ ಬಹುತೇಕ ಜನರು ಅನಕ್ಷರಸ್ತರು.

ಸಾಕ್ಷರತಾ ಆಂದೋಲನದಲ್ಲಾದರೂ ಅಕ್ಷರ ಕಲಿಯಲಿಲ್ಲವೇಕೆ? ಎಂದು ಪ್ರಶ್ನಿಸಿದರೆ ಯಾವಾಗಲೋ 15 ದಿನ ಆಂದೋಲನದ ಶಾಲೆ ನಡೆದದ್ದನ್ನು ನೆನಪಿಸುತ್ತಾರೆ. ಮತ್ತೆ ಅವರು (ಸಾಕ್ಷರತೆಯವರು) ಮುತುವರ್ಜಿ ವಹಿಸಲಿಲ್ಲ. ಇವರಿಗೆ ಕಲಿಯುವ ಅವಕಾಶ ಒದಗಲಿಲ್ಲ.

ಅರಣ್ಯದಿಂದ ಆವೃತವಾಗಿರುವ ಈ ಪ್ರದೇಶದಲ್ಲಿ ಮಂಗನ ಕಾಯಿಲೆಯಿಂದ ಪ್ರಾರಂಭವಾಗಿ ಅನೇಕ ಕಾಯಿಲೆ- ಕಸಾಲೆಗಳು ಚಾಲ್ತಿಯಲ್ಲಿವೆ. ಜನರು ಅನೇಕ ಕಾಡು ಪ್ರಾಣಿಗಳ ಹಲ್ಲೆಗೆ ಕೂಡ ಒಳಗಾಗಬೇಕಾಗಿದೆ. ಆದರೆ ಇವರಿಗಾಗಿ ಈ ಪ್ರದೇಶಗಳಲ್ಲೆಲ್ಲೂ ಒಂದು ಸರ್ಕಾರಿ ಆಸ್ಪತ್ರೆ ಇಲ್ಲ. ಊರ ಜನರೆಲ್ಲ ಬಡವರಾಗಿರುವು ದರಿಂದ ಖಾಸಗಿಯವರು ಆಸ್ಪತ್ರೆ ಪ್ರಾರಂಭಿಸುವ ಮಾತೇ ಇಲ್ಲ. ಇಲ್ಲಿ ಮನುಷ್ಯರು ವಾಸವಾಗಿರುವುದರಿಂದ ಒಂದು ಆಸ್ಪತ್ರೆ ಬೇಕು ಎಂದಾಗಲೀ, ಪ್ರಾಣಿ ಸಾಕಾಣಿಕೆ ಕೂಡ ಇವರ ಬದುಕಿನ ಒಂದು ಭಾಗವಾಗಿರುವುದರಿಂದ ಒಂದು ಪಶು ಆಸ್ಪತ್ರೆ ಬೇಕು ಎಂದಾಗಲೀ ಈ ಜನಪ್ರತಿನಿಧಿಗಳಿಗೆ ಅರ್ಥವಾಗಲಿಲ್ಲ ಎಂಬ ಕೊರಗು ಅಲ್ಲಿಯ ಜನರದ್ದು. ಹಾಗಾಗಿ ರೋಗ ಉಲ್ಬಣಗೊಂಡಾಗ ರೋಗಿಯನ್ನು ಕಂಬಳಿಯಲ್ಲಿ ಕಟ್ಟಿಕೊಂಡು ಜೋಯ್ಡಾಕ್ಕೆ ಬರಬೇಕು. ಮಳೆಯಾದರೆ ಬರಲು ಸಾಧ್ಯವೇ ಇಲ್ಲ. ಅನೇಕ ಸಂದರ್ಭದಲ್ಲಿ ಅರ್ಧ ದಾರಿಗೆ ಬಂದು ಸಮಯ ಮೀರಿದ್ದರಿಂದ ವಾಪಾಸಾದದ್ದೂ ಇದೆ ಎಂದು ದುಃಖ ತೋಡಿಕೊಳ್ಳುತ್ತಾರೆ ನೊಂದ ತಂದೆ ತಾಯಿಗಳು. ರೋಗಿಯ ಆಯುಷ್ಯ ಗಟ್ಟಿ ಇದ್ದರೆ ಆತ ಬದುಕುತ್ತಾನೆ ಎನ್ನುವ ಹತಾಶ ಸ್ಥಿತಿಗೆ ಅವರೆಲ್ಲ ತಲುಪಿದ್ದಾರೆ.

ಸಾಮಾನ್ಯವಾಗಿ ಎಲ್ಲರೂ ತೀರಾ ಬಡವರು. ಮಳೆಗಾಲದಲ್ಲಿ ಗದ್ದೆ ಮಾಡಿ ಭತ್ತ ಬೆಳೆಯುತ್ತಾರೆ. ಮಳೆಗಾಲ ಮುಗಿಯಿತೆಂದರೆ ಕೂಲಿ ಅರಸುತ್ತಾ ಮನೆ ಬಿಡುತ್ತಾರೆ. ಬಾವಿಯಿಂದ ನೀರೆತ್ತುವ ಮಿಶನ್ ಇನ್ನೂ ಇವರಿಗೆ ಅಪರಿಚಿತ ವಸ್ತುವಾಗಿರುವುದರಿಂದ ಬೇಸಿಗೆಯಲ್ಲಿ ಬೆಳೆ ತೆಗೆಯುವ ವಿಧಾನ ಇವರಿಗೆ ತಿಳಿಯದು. ಮುಖ್ಯ ವಾಗಿ ಇವರು ರಸ್ತೆ ಕೆಲಸಗಳಿಗೆ ಮತ್ತು ಕೂಲಿಯನ್ನರಸಿ ಗೋವಾ ರಾಜ್ಯಗಳಿಗೆ ಹೆಚ್ಚಾಗಿ ಹೋಗುತ್ತಾರೆ.

ಇಂಥವರನ್ನು ದಲ್ಲಾಳಿಗಳು ಸುಲಿಯದೆ ಬಿಟ್ಟಿಲ್ಲ. ತೀರಾ ಬಡತನ ಇವರಲ್ಲಿ ಇರುವುದರಿಂದ ವ್ಯಾಪಾರಿ ದಲ್ಲಾಳಿಗಳ ಬಲೆಗೆ ಬೀಳುತ್ತಾರೆ. ಬೇಸಿಗೆಯಲ್ಲಿ ಸಾಲ ಕೊಟ್ಟು ಅಥವಾ ಮಳೆಗಾಲದಲ್ಲಿ ಹಣ ಕೊಟ್ಟು ಬೆಳೆ ಬಂದ ನಂತರ ಕಡಿಮೆ ಬೆಲೆಗೆ ಭತ್ತವನ್ನು ಅಳೆಸಿಕೊಳ್ಳುವ ಮೋಸ ಹತ್ತಾರು ವರ್ಷಗಳಿಂದ ಇದೆ. ಇವರಿಗೆ ಸಾಲ ಕೊಡುವ ಅಥವಾ ಬೆಲೆಯನ್ನು ಇಟ್ಟುಕೊಂಡು (ಬೆಲೆ ಬಂದಾಗ ರೈತ ಮಾರಬಹುದು) ಸಾಲ ಕೊಡುವ ಸೊಸೈಟಿಗಳಂತ ವ್ಯವಸ್ಥೆ ಇದ್ದರೆ ಇವರ ಕಷ್ಟವನ್ನು ಕಿಂಚಿತ್ ಆದರೂ ಕಡಿಮೆ ಮಾಡಬಹುದಾಗಿತ್ತು. ಬೆಳೆ ಭತ್ತ ತೀರಿದರೆ ಹಂದಿ ತಿಂದು ಬಿಟ್ಟ ಕೆಸುವಿನ ಗಡ್ಡೆ, ಹೆಂಗಸರು ನೇದ ಸುಂದರ ಚಾಪೆಗಳೇ ಇವರನ್ನು ನಾಲ್ಕಾರು ದಿನ ಹಸಿವೆಯಿಂದ ರಕ್ಷಿಸುವ ವಸ್ತುಗಳು.

ಈ ಪ್ರದೇಶಗಳಿಗೆ ರಸ್ತೆ ಇಲ್ಲ, ಬಸ್ ಇಲ್ಲ, ಆಸ್ಪತ್ರೆ ಇಲ್ಲ, ಸೊಸೈಟಿ ಇಲ್ಲ, ಸರಿಯಾದ ಶಾಲೆ ಇಲ್ಲ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲ - ಹೀಗೆ ಏನೇನಿಲ್ಲ ಎನ್ನುವುದನ್ನು ಪಟ್ಟಿ ಮಾಡುವುದಕ್ಕಿಂತ ಏನಿದೆ ಎಂದು ಪಟ್ಟಿ ಮಾಡಲು ಒಂದು ಹಸ್ತದ ಐದು ಬೆರಳುಗಳು ಸಾಕು.

ಈವರೆಗೆ ಈ ಕ್ಷೇತ್ರದಿಂದ ಎಂ.ಪಿ.ಗಳು ಆಗಿ ಹೋಗಿದ್ದಾರೆ. ಎಂ.ಎಲ್.ಎ.ಗಳು, ಜಿಲ್ಲಾ ಪಂಚಾಯತ್ ಸದಸ್ಯರು, ತಾಲೂಕು ಪಂಚಾಯತ್ ಸದಸ್ಯರು ಇಲ್ಲಿಂದ ಮತ ಪಡೆದಿದ್ದಾರೆ. ಆಯ್ಕೆ ಆಗಿದ್ದಾರೆ. ಆದರೆ ಈ ಹಳ್ಳಿ ಹಾಗೇ ಇದೆ. ಮುಖ್ಯವಾಗಿ ಈ ಕ್ಷೇತ್ರವನ್ನು ಪ್ರತಿನಿಧಿಸಿ ಪ್ರಭಾಕರ ರಾಣೆ ಮೂರು ಬಾರಿ ಆಯ್ಕೆ ಆಗಿದ್ದರು. ವಸಂತ ಅಸ್ನೋಟಿಕರ್ ಎರಡು ಸಲ ಆಯ್ಕೆ ಆಗಿದ್ದಾರೆ. ಆದರೆ ಇವರ ಅಭಿವೃದ್ಧಿ ನಕಾಶೆಯಲ್ಲಿ ಈ ಹಳ್ಳಿಗಳು ಇದ್ದಂತಿಲ್ಲ. ಒಂದು ಆಸ್ಪತ್ರೆ, ಒಂದು ರಸ್ತೆ, ಒಂದು ಕುಡಿಯುವ ನೀರಿನ ವ್ಯವಸ್ಥೆ, ರೇಷನ್ ವ್ಯವಸ್ಥೆ, ಶಾಲೆ ಒದಗಿಸಿಕೊಡಲಾಗದ ಇಂಥ ಎಂ.ಎಲ್.ಎ.ಗಳು ಎಂ.ಪಿ.ಗಳು ಇರುವುದು ಯಾಕೆ ಎನ್ನುವುದೇ ಅರ್ಥವಾಗುವುದಿಲ್ಲ. ತಾನೊಬ್ಬ ಜನಪರ ಜನಪ್ರತಿನಿಧಿ ಎಂದು ಭಾಷಣ ಬಿಗಿವ ಮೊದಲು ತನ್ನನ್ನೇ ತಾನು ಪ್ರಶ್ನಿಸಿಕೊಳ್ಳಬೇಕಾಗಿದೆ - ಮುಡಿ, ಬಾಜಾರ್‌ಕೋಣ್, ಡಿಗ್ಗಿ, ಕ್ಯಾಸಲ್‌ರಾಕ್‌ನಂತಹ ಪ್ರದೇಶಗಳಿಗೆ ನಾನು ಮಾಡಿದ ಕೆಲಸಗಳೇನು? ನನ್ನ ಅವಧಿಯಲ್ಲಿ ಈ ಪ್ರದೇಶ ಅಭಿವೃದ್ಧಿ ಸಾಧಿಸಿದ್ದೆಷ್ಟು? ಎಂದು. ದುರ್ದೈವವೆಂದರೆ ಮತ ಕೇಳಲೂ ತಮ್ಮ ಏಜೆಂಟರನ್ನೇ ಕಳುಹಿಸುವವರು ಈ ಪ್ರದೇಶವನ್ನು ಸಂಪೂರ್ಣ ಅಭಿವೃದ್ಧಿ ಪಥದ ಕಡೆ ಒಯ್ದಾರು ಎಂದು ನಂಬಲು ಸಾಧ್ಯವೇ?

ಈ ಎಲ್ಲಾ ತೊಂದರೆಗಳ ನಡುವೆ ಕೂಡ ಜೀವನಾಸಕ್ತಿಯನ್ನು ಇವರು ಕಳೆದುಕೊಂಡಿಲ್ಲ. ಸುಂದರವಾಗಿ ಚಾಪೆ ಹೆಣೆಯಬಲ್ಲರು. ಸುಂದರವಾಗಿ ಮತ್ತು ಭದ್ರವಾಗಿ ಅಕ್ಕಿ ಮುಡಿ(ಮಳೆಗಾಲಕ್ಕೆ ಅಕ್ಕಿ ಇಡುವ ಒಂದು ವ್ಯವಸ್ಥೆ. ಹುಲ್ಲು ಮತ್ತು ಬಾಳೆ ಬಳ್ಳಿಯಿಂದ ಕಟ್ಟುತ್ತಾರೆ) ಕಟ್ಟುತ್ತಾರೆ. ರಂಗೋಲಿ ಹಾಕುತ್ತಾರೆ. ಯಕ್ಷಗಾನ ಕುಣಿಯುತ್ತಾರೆ. ಮನುಷ್ಯನನ್ನು ಪ್ರೀತಿಸುತ್ತಾರೆ. ಮನುಷ್ಯತ್ವ, ಮಾನವೀಯತೆಯ ಮೂರ್ತಿಯಂತಿರುವ ಇವರನ್ನು ಈ ಸರಕಾರ ಜನಪ್ರತಿನಿಧಿಗಳು ಮನುಷ್ಯರೆಂದು ಕೂಡ ಪರಿಗಣಿಸಲಿಲ್ಲ ಎನ್ನುವುದು ವಿಷಾದಕರ. 21ನೇ ಶತಮಾನಕ್ಕೆ ನಾವು ಹೋಗುವ ಮೊದಲು ಅವರಿಗೆ 20ನೇ ಶತಮಾನವನ್ನಾದರೂ ತೋರಿಸಬೇಕು.

ಪ್ರಾಂತ ರೈತ ಸಂಘದ ಪ್ರವೇಶ

ಅಸಹಾಯಕತೆ, ನೋವು, ಅಜ್ಞಾನಗಳ ಮಧ್ಯೆ ಬದುಕುತ್ತಿದ್ದವರಿಗೆ ಕೊನೆಗೂ ಸಹಾಯಕ್ಕೆ ಬಂದವರು ಕರ್ನಾಟಕ ಪ್ರಾಂತ ರೈತ ಸಂಘದ ಸಂಗಾತಿಗಳು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಕಾಂ. ಮಂಜುನಾಥ ಪುಲ್ಕರ ಮತ್ತು ರಾಜಾರಾಮ ಗುಡೆ ಮತ್ತು ಸಿಐಟಿಯುವಿನ ಸಂಗಾತಿಗಳು ಹೋಗಿ ರೈತ ಸಂಘ ರಚಿಸಿ ಸಾಮಾಜಿಕ ಮತ್ತು ರಾಜಕೀಯ ಅರಿವನ್ನು ಮೂಡಿಸಲು ಪ್ರಯತ್ನಿಸುತ್ತಿದ್ದಾರೆ. ನಿಮ್ಮ ಈ ಸ್ಥಿತಿಗೆ ಕಾರಣವೇನು ಎಂದು ವಿವರಿಸುತ್ತಿದ್ದಾರೆ - ಸಂಘಟನೆ ಹೇಗೆ ನಿಮ್ಮ ಸ್ಥಿತಿಯನ್ನು ಉತ್ತಮ ಪಡಿಸಬಹುದು ಎಂದು ತಿಳಿಸುತ್ತಿದ್ದಾರೆ. ಇಲ್ಲಿ ರೈತ ಸಂಘವೊಂದು ರಚನೆಗೊಂಡು ಗೌರವಾಧ್ಯಕ್ಷರಾಗಿ ರಾಜಾರಾಮ ಗುಡೆ, ಅಧ್ಯಕ್ಷರಾಗಿ ಶಾಂತಾಕೃಷ್ಣ ವೇಳೀಪ, ಕಾರ್ಯದರ್ಶಿಯಾಗಿ ಪ್ರಕಾಶ ರೆಡಿಯೋ ವೇಳೀಪ, ಖಜಾಂಚಿಯಾಗಿ ರಾಮದಾಸ ಗಣೇಶ ವೇಳೀಪರನ್ನೊಳಗೊಂಡ ಸಮಿತಿ ಸಂಘಟಿತ ಹೋರಾಟ ನಡೆಸಲು ಮುಂದಾಗಿದೆ.

ಕಳೆದ ಕೆಲವು ತಿಂಗಳ ಹಿಂದೆ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಈ ಭಾಗದ ಜನ ಬೃಹತ್ ಪ್ರತಿಭಟನಾ ಮೆರವಣಿಗೆಯೊಂದನ್ನು ನಡೆಸಿದರು. ರಸ್ತೆ ಬೇಕು, ವಿದ್ಯುತ್ ಬೇಕು, ಶಿಕ್ಷಣ ಬೇಕು, ರೇಷನ್ ಸೌಲಭ್ಯ ಬೇಕು, ಆಸ್ಪತ್ರೆ ಬೇಕು... ಹೀಗೆ ಅನೇಕ ಬೇಡಿಕೆಗಳಿಗಾಗಿ ಒತ್ತಾಯಿಸಿ ನಡೆದ ಸಭೆಯಲ್ಲಿ ನೂರಾರು ಹೆಂಗಸರು ಗಳನ್ನೊಳಗೊಂಡು ರೈತ ಸಂಘದ ಸದಸ್ಯರು 20-25 ಕಿ.ಮಿ. ನಡೆದು ಬಂದು ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿದರು. ತಾವು ಎಚ್ಚೆತ್ತ ಮೊದಲ ಸೂಚನೆಯನ್ನು ಈ ಹೋರಾಟದ ಮೂಲಕ ಕೊಟ್ಟರು.

ರೈತ ಸಂಘ ಇಂದು ಸರ್ಕಾರದಿಂದ ಸಿಗುವ ಕೆಲವಾದರೂ ಸೌಕರ್ಯ ಸೌಲತ್ತುಗಳನ್ನು ಅವರಿಗೆ ಒದಗಿಸಿಕೊಡಲು ಪ್ರಯತ್ನಿಸುತ್ತಿದೆ. ಹಳ್ಳದಿಂದ ನೀರೆತ್ತಲು ಸೀಮೆಎಣ್ಣೆ ಮೆಶಿನ್, ಪ್ರತಿ ಮನೆಗೆ ರೇಶನ್ ಕಾರ್ಡು... ಮೊದಲಾದವುಗಳನ್ನು ಒದಗಿಸಿಕೊಡಲು ಪ್ರಯತ್ನಿಸುತ್ತಿದೆ.

ತಕ್ಷಣ ಜಿಲ್ಲಾಡಳಿತ, ರಾಜ್ಯ ಸರ್ಕಾರಗಳು ಎಂ.ಪಿ.ಗಳು ಇಂಥಹ ಹಿಂದುಳಿದ ಪ್ರದೇಶಗಳಿಗೆ ನೆರವನ್ನು ಒದಗಿಸುವ ಮೂಲಕ ಚುನಾವಣೆ, ಮತಗಳ ಲೆಕ್ಕಾಚಾರವನ್ನು ಬದಿಗಿಟ್ಟು, ಇಂಥಹ ವ್ಯವಹಾರಗಳಿಗಿಂತ ಮನುಷ್ಯತ್ವ ಮೇಲು ಎನ್ನುವುದನ್ನು ತೋರಿಸಬೇಕಾಗಿದೆ.

200 ಕೋಟಿ ರೂ.ಹಗರಣ

ಪುಟ 3 ರಿಂದ

ಪ್ರತಿಯೊಬ್ಬ ಭವಿಷ್ಯ ನಿಧಿ ಸದಸ್ಯನ ಖಾತೆಯಲ್ಲಿ ಎಷ್ಟು ವಂತಿಗೆ ಜಮಾ ಆಗಿದೆ, ಮಾಲಕರಿಂದ ಎಷ್ಟು ವಂತಿಗೆ ಬಂದಿದೆ, ಸಂಗ್ರಹವಾದ ಬಡ್ಡಿಯೆಷ್ಟು, ಬಾಕಿಯಿರುವ ಸಾಲವೆಷ್ಟು ಎಂಬ ವಿವರಗಳನ್ನು ಪ್ರತಿವರ್ಷ ಪಿ.ಎಫ್. ಕಚೇರಿ ಕೊಡಬೇಕು. ಆದರೆ ಇದು ಕೂಡಾ ಸರಿಯಾಗಿ ನಡೆಯುತ್ತಿಲ್ಲ. ಇದನ್ನು ದುರುಪಯೋಗ ಪಡಿಸಿಕೊಂಡು ಈ ಲೇಖನದ ಆರಂಭದಲ್ಲಿ ಹೇಳಿದ ಭ್ರಷ್ಟಾಚಾರದ ಹಗರಣ ನಡೆದಿದೆ ಎಂಬುದನ್ನು ಗಮನಿಸಬೇಕು.

ಭವಿಷ್ಯ ನಿಧಿ ವ್ಯವಸ್ಥೆ ಈಗ ಇನ್ನೊಂದು ಕುತ್ತನ್ನು ಎದುರಿಸುತ್ತಿದೆ. ಕಾರ್ಮಿಕರ ವಂತಿಗೆಯಿಂದ ಭವಿಷ್ಯನಿಧಿ ಖಾತೆಯಲ್ಲಿ ಸಂಗ್ರಹವಾಗಿರುವ ಕೋಟ್ಯಾಂತರ ರೂಪಾಯಿಗಳನ್ನು ಶೇರು ಪೇಟೆಗೆ ಕೊಡಿಸುವ ಹುನ್ನಾರವನ್ನು ಈಗಿನ ಆಳುವ ಕೂಟ ನಡೆಸಿದೆ. ಎನ್.ಡಿ.ಎ. ಚುನಾವಣೆಯ ವೇಳೆಗೆ ಈ ಬಗ್ಗೆ ಬಂಡವಾಳಶಾಹಿಗಳಿಗೆ ಆಶ್ವಾಸನೆ ನೀಡುವ ದುರಹಂಕಾರವನ್ನು ತೋರಿದೆ. ಶೇರು ಮಾರುಕಟ್ಟೆಯಲ್ಲಿ ತೊಡಗಿಸಿದರೆ ಕಾರ್ಮಿಕರ ಹಣಕ್ಕೆ ಹೆಚ್ಚಿನ ಪ್ರತಿಫಲ ಬರುತ್ತದೆ ಎಂಬುದು ಇವರ ತರ್ಕ. ಆದರೆ ಆಳುವ ಕೂಟಕ್ಕೆ ಸೇರಿದ ಬಿ.ಎಂ.ಎಸ್. ಕೂಡಾ ಸೇರಿದಂತೆ. ಎಲ್ಲಾ ಕಾರ್ಮಿಕ ಸಂಘಟನೆಗಳೂ ಈ ತರ್ಕವನ್ನು ಎಂದೋ ಸಂಪೂರ್ಣವಾಗಿ ತಿರಸ್ಕರಿಸಿವೆ. ಶೇರು ಮಾರುಕಟ್ಟೆಗಳಲ್ಲಿ ಕಾರ್ಮಿಕರ ಈ ಹಣಕ್ಕೆ ಭದ್ರತೆಯಿಲ್ಲ. ಆದ್ದರಿಂದಲೇ ಕಡಿಮೆ ಪ್ರತಿಫಲ ದೊರತರೂ ಸರಿಯೇ. ಶೇರು ಮಾರುಕಟ್ಟೆಗೆ ಮಾತ್ರ ನಮ್ಮ ಈ ಹಣ ಕೊಡಬೇಡಿ ಎಂದು ಅವು ಹೇಳುತ್ತಿವೆ. ಖಾಸಗೀ ವಲಯಕ್ಕೆ ಕಾರ್ಮಿಕರ ಈ ಉಳಿತಾಯ ಸಿಗಬಾರದು ಎಂಬ ಆಶಯವೂ ಇದೆ. ಏನೇ ಇರಲಿ, ಭವಿಷ್ಯ ನಿಧಿ ಕಾರ್ಮಿಕರ ಸೊತ್ತು. ಯಾವುದೇ ರಾಜಕೀಯ ಪಕ್ಷದ ಅಥವಾ ಸರಕಾರದ ಸೊತ್ತಲ್ಲ. ಅದನ್ನು ಹೇಗೆ ತೊಡಗಿಸಬೇಕೆಂದು ನಿರ್ಧರಿಸಬೇಕಾದವರು ಭವಿಷ್ಯ ನಿಧಿ ಟ್ರಸ್ಟಿನ ಸದಸ್ಯರೇ ಹೊರತು ಹಣಕಾಸು ಮಂತ್ರಿಗಳಲ್ಲ, ಆಳುವ ಸರಕಾರವಲ್ಲ ಎಂಬುದು ಕಾರ್ಮಿಕರ ತರ್ಕ.

ಇದೀಗ ಒಂದು ದೊಡ್ಡ ಸಾಮಾಜಿಕ ಭದ್ರತಾ ವ್ಯವಸ್ಥೆಯೆನಿಸಿರುವ ಭವಿಷ್ಯನಿಧಿಯ ವಂತಿಗೆದಾರರಾದ ಕಾರ್ಮಿಕರು ಎದುರಿಸುತ್ತಿರುವ ಪ್ರಶ್ನೆಗಳು. ಈ ಪಿ.ಎಫ್. ವ್ಯವಸ್ಥೆ ರೂಪುಗೊಂಡದ್ದೇ ಕಾರ್ಮಿಕ ಚಳುವಳಿಯ ನಿರಂತರ ಹೋರಾಟದ ಫಲವಾಗಿ. ಮಾಲಕರಾಗಲೀ, ಸರಕಾರವಾಗಲೀ ಉದಾರ ಹೃದಯದಿಂದ ನೀಡಿದ ಸೌಲಭ್ಯಗಳಲ್ಲ ಇವು. ಈಗ ಈ ಸೌಲಭ್ಯಗಳಿಂದ ಕಾರ್ಮಿಕರನ್ನು ವಂಚಿಸುವ ಪ್ರಯತ್ನಗಳ ವಿರುದ್ಧವೂ ಕಾರ್ಮಿಕ ಆಂದೋಲನ ದೊಡ್ಡ ಪ್ರಯತ್ನ ನಡೆಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ನವೆಂಬರ್ 15 ರಂದು ರಾಜ್ಯಾದ್ಯಂತ ಎಲ್ಲಾ ಭವಿಷ್ಯ ನಿಧಿ ಕಚೇರಿಗಳ ಎದುರು ಧರಣಿ ಸತ್ಯಾಗ್ರಹ ನಡೆಸಲು ಕಾರ್ಮಿಕರಿಗೆ ಕರೆ ನೀಡಿದೆ. ಭವಿಷ್ಯ ನಿಧಿ ಕಚೇರಿಗಳಲ್ಲಿ ನಡೆಯುತ್ತಿರುವ ಅವ್ಯವಹಾರಗಳನ್ನು ನಿಲ್ಲಿಸಲು ಗಂಭೀರ ಕ್ರಮಗಳನ್ನು ಕೈಗೊಳ್ಳಬೇಕು, ವಿಜಿಲೆನ್ಸ್ ದಳಗಳಿರಬೇಕು, ಕಚೇರಿಯ ಕೆಲಸವನ್ನು ದುರಸ್ತಿಗೊಳಿಸಿ ಕಾರ್ಮಿಕರಿಗಾಗುವ ಕಿರುಕುಳಗಳನ್ನು ನಿಲ್ಲಿಸಬೇಕು. ಕಾರ್ಮಿಕರ ಬಗ್ಗೆ ಪಿ.ಎಫ್. ಕಚೇರಿ ಸಿಬ್ಬಂದಿಯ ಅನಾದರ ಧೋರಣೆ ಹೋಗಬೇಕು. ಎಲ್ಲಾ ಪಿ.ಎಫ್. ವಂತಿಗೆದಾರರಿಗೂ ಅಕೌಂಟ್ ಸ್ಲಿಪ್ ಕೊಡಬೇಕು. ಕಾರ್ಮಿಕರ ಈ ಹಣವನ್ನು ಶೇರು ಮಾರುಕಟ್ಟೆಗೆ ಕೊಡಬಾರದು ಎಂದು ಆಗ್ರಹಿಸಿ ಈ ಹೋರಾಟ ನಡೆಸಲಾಗುತ್ತಿದೆ.

ಇದು ಕಾರ್ಮಿಕರಿಗಾಗಿ ಕಾರ್ಮಿಕರ ಹೋರಾಟಗಳಿಂದ ರೂಪಿತವಾದ ವ್ಯವಸ್ಥೆಯೆಂದರೆ ವಿಶ್ವಾಸಾರ್ಹತೆಯ ಪ್ರಶ್ನೆ. ರಾಜ್ಯದ ಕಾರ್ಮಿಕ ಮಂತ್ರಿಗಳು ಇದನ್ನು ಗಂಭೀರವಾಗಿ ಪರಿಗಣಿಸಬೇಕು.

ಆನೇಕಲ್: ವಿದ್ಯಾರ್ಥಿಗಳ ಮೇಲೆ ಮತಾಂಧರ ಅನಾಗರೀಕ ಧಾಳಿ

ಭಾರತಕ್ಕೆ ಪೋಪ್ ಅವರ ಭೇಟಿಯ ಸಂದರ್ಭವನ್ನು ಹೇಗೆ ಕ್ರಿಶ್ಚಿಯನ್ ಅಲ್ಪಸಂಖ್ಯಾತರ ವಿರುದ್ಧ ಜನರಲ್ಲಿ ಸಂಶಯ ಅಸಹನೆ ಮೂಡುವಂತೆ ಮಾಡಲು ರಾಷ್ಟ್ರೀಯ ಸ್ವಯಂ ಸೇವಕ ಸಂಘ (RSS) ವಿಶ್ವ ಹಿಂದೂ ಪರಿಷತ್(VHP) ಮುಂತಾದ ಮತಾಂಧ ಸಂಘಟನೆಗಳು ಹೆಣಗಿದವು ಎಂದು ದೇಶದ ಜನ ಕಂಡಿದ್ದಾರೆ. ಕ್ಷೇತ್ರದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ಪೋಪ್ ರವರನ್ನು ಸ್ವಾಗತಿಸುವ ಮಾತನಾಡಿದರೆ, ಇದೇ ಬಿಜೆಪಿಯ ಆತ್ಮ ಮಿದುಳು ಎಲ್ಲವೂ ಆಗಿರುವ RSS-VHP ಗಳು ಇದರ ವಿರುದ್ಧ ದೇಶಾದ್ಯಂತ ವಿಷ ಪ್ರಚಾರ ನಡೆಸಿದವು. ಇಂತಹ ಕೋಮುವಾದಿ ವಿಷ ಪ್ರಚಾರದ ಪ್ರತಿಫಲನವೇ ಆನೇಕಲ್ ನಲ್ಲಿ ನವೆಂಬರ್ 3 ರಂದು ರಾತ್ರಿ ಆನೇಕಲ್ ಇಂಡ್ಲವಾಡಿ ಪಂಚಾಯ್ತಿ ವ್ಯಾಪ್ತಿಯ ಮೈಸುರಮ್ಮನ ದೊಡ್ಡಿಯ ಶ್ರಮ ಶಿಬಿರದಲ್ಲಿ ಪಾಲ್ಗೊಂಡಿದ್ದ ಸೆಂಟ್ ಜೊಸೆಫ್ ಕಾಲೇಜಿನ ವಿದ್ಯಾರ್ಥಿನಿಯರು-ವಿದ್ಯಾರ್ಥಿಗಳ ಮೇಲೆ ನಡೆದ ಅಮಾನುಷ ದೌರ್ಜನ್ಯ.

ವರದಿ-ರಾಮಕೃಷ್ಣ

ಬೆಂಗಳೂರು ನಗರದ ಸೆಂಟ್ ಜೊಸೆಫ್ ಸಂಜೆ ಕಾಲೇಜಿನ 25 ವಿದ್ಯಾರ್ಥಿಗಳು, ನಗರ ಪ್ರದೇಶದ ನಾಗರೀಕ ಸೌಲಭ್ಯಗಳಿಂದ ವಂಚಿತರಾಗಿರುವ, ತಮ್ಮದೇ ಬವಣೆಯಲ್ಲಿ ಬದುಕುತ್ತಿರುವ ಹಳ್ಳಿಗರ ಬದುಕನ್ನು ನೋಡಬೇಕು. ಅವರ ಕಷ್ಟ ದುಃಖಗಳನ್ನು ತಾವೂ ಅನುಭವಿಸಬೇಕು. ಹಳ್ಳಿಗರ ಬದುಕನ್ನು ಅಧ್ಯಯನ ಮಾಡಬೇಕು, ಶ್ರಮದಾನದ ಮೂಲಕ ಸಾಧ್ಯವಾದ ಸಹಾಯ ಮಾಡಬೇಕು ಎಂಬ ಉದ್ದೇಶದಿಂದ ಆನೇಕಲ್ ನ ಜ್ಞಾನ ಜ್ಯೋತಿ ಕೇಂದ್ರದ ಒಂದು ವಾರದ Rural Exposure Camp ನಲ್ಲಿ ಪಾಲ್ಗೊಳ್ಳಲು ಹೊರಟರು. ಕಳೆದ ಇಪ್ಪತ್ತು ವರ್ಷಗಳಿಂದ ಈ ಕಾಲೇಜಿನ ವಿದ್ಯಾರ್ಥಿಗಳು ಆನೇಕಲ್ ತಾಲ್ಲೂಕಿನ ಮೈಸೂರಮ್ಮನ ದೊಡ್ಡಿ ಮತ್ತು ಅಕ್ಕ ಪಕ್ಕದ ಗ್ರಾಮಗಳಲ್ಲಿ ಹಲವು ಕಾರ್ಯಕ್ರಮ ಚಟುವಟಿಕೆಗಳನ್ನು ನಡೆಸಿದ್ದಾರೆ.

ಹಳ್ಳಿಗರ ಕಷ್ಟ- ನೋವುಗಳನ್ನು ಅನುಭವಿಸಲು ಬಂದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಅನುಭವಿಸಿದ್ದೇ ಬೇರೆ. ಮತಾಂಧ ಸಂಘ ಪರಿವಾರವು ದೇಶದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಹಿಂದೂ ರಾಷ್ಟ್ರದ ರುಚಿ ಹೇಗಿರಬಹುದು ಎಂಬುದನ್ನು ಅವರು ನೇರವಾಗಿ ಕಂಡರು.

ವಿದ್ಯಾರ್ಥಿನಿಯರ ಮೇಲೆ ಪೈಶಾಚಿಕ ಧಾಳಿ

ನವೆಂಬರ್ 2, 99 ರ ಮಧ್ಯಾಹ್ನ 7 ಜನ ವಿದ್ಯಾರ್ಥಿನಿಯರು ಸೇರಿ 25 ವಿದ್ಯಾರ್ಥಿಗಳು ತಮ್ಮ ಇಬ್ಬರು ಶಿಕ್ಷಕರೊಂದಿಗೆ ಮೈಸೂರಮ್ಮನ ದೊಡ್ಡಿಗೆ ಬಂದರು. ಶಿಬಿರದ ಬಗ್ಗೆ ಅಗತ್ಯ ಮಾರ್ಗದರ್ಶನದ ನಂತರ 3 ರಂದು ಮೈಸೂರಮ್ಮನ ದೊಡ್ಡಿಯಿಂದ ಸಿದ್ದಯ್ಯನ ದೊಡ್ಡಿ ಗ್ರಾಮಕ್ಕೆ ಹೋಗಲು ರಸ್ತೆಯನ್ನು ನಿರ್ಮಿಸುವ ಕೆಲಸ ಆರಂಭಿಸಿದರು. ಸಂಜೆ ಗ್ರಾಮಸ್ತರೊಂದಿಗೆ ಸಂವಾದ ನಡೆಸಿದ ನಂತರ ರಾತ್ರಿ 8-30 ಕ್ಕೆ ಎಲ್ಲರೂ ಊಟ ಮಾಡುತ್ತಿರುವ ಸಮಯ. ಆಗ ಪ್ರಸನ್ನ ಎಂಬುವವನ ನಾಯಕತ್ವದಲ್ಲಿ ಮೂವರು ಯುವಕರ ಗುಂಪು ಊರ ಹೊರ ವಲಯದ ಆ ಮನೆಗೆ ಬಂತು. ಹೇಳದೇ ಕೇಳದೇ ಆಕ್ರಮಣಕಾರಿಯಾಗಿ ವಾಗ್ಯುದ್ಧಕ್ಕೆ ತೊಡಗಿತು. ಮತಾಂಧರ ಧಾಳಿಯನ್ನು ಧೈರ್ಯವಾಗಿ ಎದುರಿಸಿದ ವಿದ್ಯಾರ್ಥಿಗಳು ತಮ್ಮ ಅನುಭವ ವಿವರಿಸಿದ್ದು ಹೀಗೆ "ಬಂದ ಆ ಗುಂಪು ನಮ್ಮ ಮೇಲೆ ಪ್ರಶ್ನೆಗಳ ಮಳೆಗರೆಯಿತು. ಅವರು ಕೇಳಿದರು ಭಾರತಕ್ಕೆ ಪೋಪ್ ಯಾಕೆ ಬಂದಿದ್ದಾನೆ?"

ನೀವು ಇಲ್ಲಿಗೇಕೆ ಬಂದಿದ್ದೀರಾ?"

ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಮಾಡಲು ನಿಮಗೆಷ್ಟು ಹಣ ಕೊಟ್ಟಿದ್ದಾರೆ?, ನಿಮ್ಮ ಹೆಸರುಗಳೇನು?.(ಪ್ರೀತಿ, ಸುಧಾಕರ್, ಸತೀಶ್ ಇಂತಹ ಹೆಸರುಗಳನ್ನು ಕೇಳಿ ನಿರಾಶೆ ಆಗಿರಬೇಕು) "ಮತಾಂತರ ಆದ ಮೇಲೂ ನಿಮ್ಮ ಹೆಸರುಗಳನ್ನೇಕೆ ಬದಲಿಸಿಕೊಂಡಿಲ್ಲ" ಹತ್ತಾರು ಅಸಂಬದ್ಧ ಪ್ರಶ್ನೆಗಳನ್ನು ಗದರಿಸುತ್ತಾ ಕೇಳಿದರು.

"ಇಲ್ಲಿಂದ ತತ್‌ಕ್ಷಣ ಹೊರಡಬೇಕು, ಒರಿಸ್ಸಾದಲ್ಲಿ ಏನು ನಡೆಯಿತು ಗೊತ್ತಲ್ಲ? ತಡ ಮಾಡಿದರೆ ಜೀವಂತ ಸುಟ್ಟು ಬಿಡುತ್ತೇವೆ" ಎಂದು ಅರಚಿದರು. "ನಮಗೆಲ್ಲಾ ಗೊಂದಲ! ಏನು ಮತಾಂತರ? ಇವರು ಏನು ಕೇಳುತ್ತಿದ್ದಾರೆ?" ಸಾವರಿಸಿಕೊಳ್ಳಲು ಯತ್ನಿಸಿದರು. ವಿದ್ಯಾರ್ಥಿಗಳ ಉತ್ತರ, ಪ್ರತಿಕ್ರಿಯೆ ಅವರಿಗೆ ಬೇಕಿರಲಿಲ್ಲ. ಬಂದ ಗುಂಪಿಗೆ ಬೇಕಿದ್ದಿದ್ದು, ಮನೆಯಲ್ಲಿ ಯಾರ್‍ಯಾರು ಇದ್ದಾರೆ, ಏನು ಪರಿಸ್ಥಿತಿ- ಎಂಬ ಮಾಹಿತಿ, ಅದು ಸಿಕ್ಕಿತು. ಮನೆಯ ಹೊರಗೆ ಕತ್ತಲಲ್ಲಿ ಕಾಯುತ್ತಾ ನಿಂತಿದ್ದ ಸುಮಾರು 30 ಜನರ ತಂಡಕ್ಕೆ ಒಳ ಬರಲು ಸಿಗ್ನಲ್ ಕೊಟ್ಟರು.

ಎಲ್ಲರೂ ಏಕಾಏಕಿ ಮನೆಗೆ ನುಗ್ಗಿದರು, ಕೈಗಳಲ್ಲಿ ಸೈಕಲ್ ಚೈನು ರಾಡುಗಳು, ಪೈಪ್‌ಗಳು, ಚಾಕು ಮಾರಕ ಆಯುಧಗಳು. ಊಟ ಮಾಡುತ್ತಿದ್ದವರ ತಟ್ಟೆಗಳನ್ನು ಕಿತ್ತೆಸೆದರು. ಅನ್ನವನ್ನು ತುಳಿದರು, ಅಡುಗೆ ಪಾತ್ರೆಗಳನ್ನು ಚೆಲ್ಲಾಡಿದರು. ಧಾಳಿಕೋರರ ಮೊದಲ ಗುರಿ ಶಿಬಿರದಲ್ಲಿದ್ದ 7 ಮಂದಿ ವಿದ್ಯಾರ್ಥಿನಿಯರು, ಒಬ್ಬೊಬ್ಬ ವಿದ್ಯಾರ್ಥಿನಿಯರನ್ನು 4-5 ಜನ ಸುತ್ತುವರಿದರು.

ನನ್ನ ಕುತ್ತಿಗೆ ಪಟ್ಟಿ ಹಿಡಿದು ಹೊರಕ್ಕೆ ಎಳೆದು ತಂದರು. ಕೆಲವರು ನನ್ನ ಹೊಟ್ಟೆಗೆ ಒದ್ದರು. ಹಿಂದಿನಿಂದ ಕೆಲವರು ಬೆನ್ನಿಗೆ ಒದ್ದರು. ತಪ್ಪಿಸಿಕೊಳ್ಳಲು ನಾನು ನನ್ನನ್ನು ಹಿಡಿದುಕೊಂಡಿದ್ದವರ ಕೈ ಕಚ್ಚಲು ಯತ್ನಿಸಿದೆ, 'ಏ ಇವಳು ನಮ್ಮನ್ನು ಕಚ್ಚುತ್ತಿದ್ದಾಳೆ ಇವಳನ್ನು ಸುಮ್ಮನೆ ಬಿಡಬಾರದು, ಆಕಡೆ ಎಳೆದುಕೊಳ್ರಿ, ರೇಪ್ ಮಾಡಿ ಬಿಡೋಣ' ಎಂದು ಅವರು ಕೂಗಿದರು.

ಕೆಲವರನ್ನು ಚೂಡಿದಾರ್‌ನ ವೇಲನ್ನು ಕುತ್ತಿಗೆಗೆ ಸುತ್ತಿ ಬಿಗಿದರು. ನೆಲಕ್ಕೆ ಬೀಳಿಸಿ ತುಳಿದರು. ಎರಡನೇ ಬಿಕಾಂ ವಿದ್ಯಾರ್ಥಿನಿ ಜೆನ್ನಿಫರಳನ್ನು ನೆಲಕ್ಕೆ ಕೆಡವಿ ಸುತ್ತಲೂ ಕೈ ಕಾಲು ಹಿಡಿದು ಎಳೆದಾಡಿದರು."

ತನ್ನನ್ನು ಹಿಡಿದ್ದಿದ್ದವರ ಕೈ ಕಚ್ಚಿ ಪ್ರೀತಿ ಹೇಗೋ ತಪ್ಪಿಸಿಕೊಂಡು ಹಳ್ಳಿಯ ಮನೆಯೊಂದರಲ್ಲಿ ಆಶ್ರಯ ಪಡೆದರೆ ಸ್ವಲ್ಪ ಹೊತ್ತಿನ ನಂತರ ಹುಡುಕುತ್ತಾ ಬಂದ ತಂಡ, ಪ್ರೀತಿ ಇದ್ದ ಪಕ್ಕದ ಮನೆಯನ್ನು ಶೋಧಿಸಿ ಮನೆಯಲ್ಲಿದ್ದ ವಸ್ತುಗಳನ್ನೆಲ್ಲಾ ಚೆಲ್ಲಾಪಿಲ್ಲಿ ಮಾಡಿ ಮನೆಯವರನ್ನು ಬೆದರಿಸಿದ್ದಾರೆ.

ವಿದ್ಯಾರ್ಥಿನಿಯರಷ್ಟೇ ಅಲ್ಲಾ ವಿದ್ಯಾರ್ಥಿ ಶಿಕ್ಷಕರನ್ನು ಅಮಾನುಷವಾಗಿ ಥಳಿಸಿದ್ದಾರೆ. ಸತೀಶ್ ಎಂಬ ವಿದ್ಯಾರ್ಥಿಗೆ 10 ಜನ ಸೇರಿ ಒದ್ದಿದ್ದಾರೆ. "ನನಗೆ ಕಿಡ್ನಿ ಆಪರೇಷನ್ ಆಗಿದೆ ದಯವಿಟ್ಟು ಹೊಡೆಯ ಬೇಡಿ" ಎಂದರೂ ಬಿಟ್ಟಿಲ್ಲ. ಸತೀಶ್ ಗೆ ತೀವ್ರವಾಗಿ ಪೆಟ್ಟಾಗಿದೆ, ಶಸ್ತ್ರ ಚಿಕಿತ್ಸೆ ಆದ ಕಡೆಯೇ ಪೆಟ್ಟು ಬಿದ್ದು, ಸತೀಶ್ ಆಸ್ಪತ್ರೆಗೆ ದಾಖಲಾಗಿದ್ದಾರೆ ಮೂತ್ರ ಬರುವಲ್ಲಿ ರಕ್ತ ಒಸರುತ್ತಿದೆ.

ಕಾಲೇಜಿನ ಶಿಕ್ಷಕರಾದ ಜಯರಾಜ್ ಅವರ ಮುಖಕ್ಕೆ ಗುದ್ದಿದ್ದಾರೆ. ಲಾಂಗ್ ನ ಮರಣಾಂತಿಕ ಹಲ್ಲೆಯಿಂದ ಅವರು ಹೇಗೋ ತಪ್ಪಿಸಿಕೊಂಡಿದ್ದಾರೆ. ನ್ಯೂಟನ್ ಎಂಬುವರನ್ನು ಹಿಡಿದು ರಾಡ್ ನಿಂದ ಹೊಡೆದಿದ್ದಾರೆ.

ಹಲ್ಲೆಯಷ್ಟೇ ಅಲ್ಲ- ದರೋಡೆಯನ್ನು ಮಾಡಿದ್ದಾರೆ.

ಒಂದು ತಂಡ ಹಳ್ಳಿಗರ ಮನೆಯಲ್ಲಿ ಆಶ್ರಯ ಪಡೆದವರನ್ನು ಬೆನ್ನಟ್ಟಿದರೆ ಉಳಿದವರು ವಿದ್ಯಾರ್ಥಿಗಳ ಎಲ್ಲಾ ಲಗ್ಗೇಜು- ಬ್ಯಾಗುಗಳನ್ನು ಕಿತ್ತೆಸೆದು ಚೆಲ್ಲಾಡಿದರು, ನಾಲ್ಕು ಕ್ಯಾಮರಾ, 2 ವಾಕ್ ಮನ್, ಸ್ಪೀಕರ್ಸ್2, ಒಂದು ಚಿನ್ನದ ಚೈನು, ಬೆಲೆ ಬಾಳುವ ಉಡುಪುಗಳು, ವಿದ್ಯಾರ್ಥಿಗಳ ಡೈರಿ, ಗುರುತಿನ ಚೀಟಿಗಳು, ವಿವಿಧ ವಿದ್ಯಾರ್ಥಿಗಳ ಬ್ಯಾಗ್, ಪರ್ಸ್‌ಗಳಲ್ಲಿದ್ದ 3.500 ರೂಗಳನ್ನು ಪುಂಡರ ಗುಂಪು ದೋಚಿದೆ.

ಮೈಸೂರಮ್ಮನ ದೊಡ್ಡಿ ಅಕ್ಕ ಪಕ್ಕದ ಗ್ರಾಮಗಳು ಸೆಂಟ್ ಜೊಸೆಫ್ ಕಾಲೇಜಿನ ವಿದ್ಯಾರ್ಥಿಗಳಿಗೆ- ಹಾಗೂ ಜ್ಞಾನ ಜ್ಯೋತಿ ಕೇಂದ್ರಕ್ಕೆ ಹೊಸದೇನಲ್ಲ. ಕಳೆದ 20 ವರ್ಷಗಳಿಂದ ಇಲ್ಲಿ ನಿರಂತರವಾಗಿ ಶ್ರಮಧಾನ, ಶಿಬಿರಗಳು, ಚಟುವಟಿಕೆಗಳು ನಡೆದಿವೆ. 35 ಮನೆಗಳು ಸುಮಾರು 250 ಜನರಿದ್ದ ಸಣ್ಣ ಗ್ರಾಮ ಮೈಸೂರಮ್ಮನ ದೊಡ್ಡಿ ಸಮೀಪದ ಸಿದ್ದಯ್ಯನ ದೊಡ್ಡಿಗೆ ಹತ್ತಿರದ ಮಾರ್ಗದಲ್ಲಿ ಹೋಗಲು ಅನುಕೂಲವಾಗುವಂತೆ ಸೇತುವೆ, ರಸ್ತೆ, ಚರಂಡಿ, ಶೌಚಾಲಯ ನಿರ್ಮಾಣ, ರಾತ್ರಿಶಾಲೆಗಳು, ಇತ್ಯಾದಿ ಹಲವು ನಿರ್ಮಾಣ ಹಾಗೂ ಚಟುವಟಿಕೆಗಳು ಈ ಹಿಂದೆ ನಡೆದಿವೆ. ವಿದ್ಯಾರ್ಥಿಗಳ ಮೇಲೆ ನಡೆದಿರುವ ಧಾಳಿಯನ್ನು ಗಮನಿಸಿದರೆ ಸ್ಪಷ್ಟವಾಗಿ ಇದೊಂದು ಪೂರ್ವಯೋಜಿತ ವ್ಯವಸ್ಥಿತ ಧಾಳಿ. ಈ ಘಟನೆಯ ಬಗೆಗೆ ಮೈಸೂರಮ್ಮನ ದೊಡ್ಡಿಯ ಗ್ರಾಮನ ಜನರಿಗೆ ಬೇಸರವಾಗಿದೆ. ಆದರೆ RRS-BJP ಸಂಘಪರಿವಾರದ ಗೂಂಡಾಗಿರಿಯನ್ನು ಎದುರು ಹಾಕಿಕೊಳ್ಳುವ ಧೈರ್ಯವೂ ಎಲ್ಲರಲ್ಲಿ ಇಲ್ಲ. ಆದರೆ 3 ರ ರಾತ್ರಿ ವಿದ್ಯಾರ್ಥಿಗಳ ಮೇಲೆ ಈ ರೀತಿ ಪೈಶಾಚಿಕ ಧಾಳಿ ನಡೆಯುವಾಗ ತಮ್ಮ ಮನೆಗಳಿಗೆ ಓಡಿ ಬಂದ ವಿದ್ಯಾರ್ಥಿಗಳಿಗೆ ತಮ್ಮ ಮನೆಗಳಲ್ಲಿ ಆಶ್ರಯ ಕೊಟ್ಟು ರಕ್ಷಿಸುವ ಕೆಲಸವನ್ನು ಗ್ರಾಮದ ಮಹಿಳೆಯರು ಧೈರ್ಯವಾಗಿ ಮಾಡಿದ್ದಾರೆ. ಮತಾಂಧ ಗೂಂಡಾಗಳು ಮನೆ ಮನೆಗೆ ಬಂದು ಗ್ರಾಮಸ್ಥರನ್ನು ಬೆದರಿಸಿದ್ದಾರೆ. "ತತ್‌ಕ್ಷಣ ಅವರನ್ನು ಹೊರಕ್ಕೆ ಕಳಿಸಿ, ಇಲ್ಲವಾದಲ್ಲಿ ಪರಿಸ್ಥಿತಿ ನೆಟ್ಟಗಾಗುವುದಿಲ್ಲ, ನೀವು ಇವರಿಗೆ ರಕ್ಷಣೆ ಕೊಟ್ಟು ನಮಗೆ ಅವಮಾನ ಮಾಡುತ್ತಿದ್ದೀರಿ ಎಂದು ಬೆದರಿಸಿದ್ದಾರೆ. ಊರಿನ ಜನ ಬೆಳಿಗ್ಗೆ ಈ ವಿಷಯ ಮಾತನಾಡೋಣ ಎಂದು 'ಸಮಾಧಾನ' ಪಡಿಸಿ ಕಳಿಸಿದ್ದಾರೆ. ಬಂದವರಲ್ಲಿ ಹೆಚ್ಚಿನವರು ಸಮೀಪದ ಇಂಡ್ಲವಾಡಿ, ಸಿಡಿ ಹೊಸಕೋಟೆ, ಬೊಮ್ಮಂಡಹಳ್ಳಿ, ಆನೇಕಲ್‌ನವರು.

ಧಾಳಿಯಿಂದ ತಪ್ಪಿಸಿಕೊಂಡ ಶಿವಪ್ರಕಾಶ್ ಜಿಗಣಿಗೆ ಬಂದು ಕಾಲೇಜಿನ ಪ್ರಾಂಶುಪಾಲರಿಗೆ ಸುದ್ದಿ ತಿಳಿಸಿದ ನಂತರ ಗ್ರಾಮದಿಂದ ವಿದ್ಯಾರ್ಥಿಗಳನ್ನು ಆನೇಕಲ್ ಪೋಲಿಸರು ಕರೆ ತಂದಿದ್ದಾರೆ. ಆನೇಕಲ್ ಪೋಲಿಸ್ ಠಾಣೆಯಲ್ಲಿ ದೂರು ಕೊಡಲು ಹೋದರೆ " ಇಲ್ಲಿ ನಿಮಗೇನು ಕೆಲಸ?" ನೀವು ಇಲ್ಲಿಗೇಕೆ ಬಂದಿರಿ"?. ಇತ್ಯಾದಿ ಹತ್ತಾರು ಸಂಶಯಗಳನ್ನು ಮುಂದಿಡುವ ಪೋಲಿಸ್ ಅಧಿಕಾರಿಗಳಿಂದ ತಮಗೆ ಸರಿಯಾದ ರಕ್ಷಣೆ-ನ್ಯಾಯ ಸಿಗಬಲ್ಲದೇ ಎಂಬ ಬಗ್ಗೆ ವಿದ್ಯಾರ್ಥಿಗಳು ಆತಂಕಗೊಂಡಿದ್ದರು. ಪೋಲಿಸ್ ಇಲಾಖೆಯ ಮೇಲಿನ ಅಧಿಕಾರಿಗಳ ನಿರ್ದೇಶನದ ನಂತರವೇ ದೂರು ದಾಖಲಿಸಿಕೊಳ್ಳಲು-ಮೀನಾಮೇಷ ಎಣಿಸುತ್ತಾ ಪೋಲಿಸರು ಚುರುಕಾಗಿದ್ದರು. ತಮ್ಮ ಕಹಿ ಅನುಭವವನ್ನು ವಿವರಿಸುತ್ತಾರೆ. ಇದುವರೆಗೆ ಪ್ರಸನ್ನ ಸೇರಿದಂತೆ 8 ಮಂದಿಯನ್ನು ಬಂಧಿಸಲಾಗಿದೆ.

ಆನೇಕಲ್ ಬಿಜೆಪಿ ಶಾಸಕ ಎ.ನಾರಾಯಣ ಸ್ವಾಮಿಯ ಕುಮ್ಮಕ್ಕಿನಿಂದಲೇ ಆತನ ಗೂಂಡಾ ಪಡೆ ಈ ಹಲ್ಲೆ ನಡೆಸಿದೆ ಎಂಬ ಬಗೆಗೆ ಯಾವ ಅನುಮಾನವೂ ಇಲ್ಲ. ಆನೇಕಲ್‌ನಲ್ಲಿ ವಿದ್ಯಾರ್ಥಿಗಳು ಶಾಸಕನನ್ನು ಕರೆಸಿಕೊಂಡು ಮಾತನಾಡಿದಾಗ ಸ್ವತಃ ಆತನೇ ಈ ವಿಷಯ ಒಪ್ಪಿಕೊಂಡಿದ್ದಾನೆ. "ಇದು ಇಷ್ಟೆಲ್ಲಾ ಆಗುತ್ತದೆ ಎಂದು ನನಗೆ ಗೊತ್ತಿರಲಿಲ್ಲ. ಈ ವಿಷಯವನ್ನು ದೊಡ್ಡದಾಗಿ ಬೆಳೆಸುವುದು ಬೇಡ. ನಮ್ಮ ಹುಡುಗರಿಗೆ ನಾನು ಹೇಳುತ್ತೇನೆ. ಘಟನೆಯನ್ನು communal ಮಾಡುವುದು ಬೇಡ ಎಂದೆಲ್ಲಾ ಹೇಳಿದ್ದಾನೆ. ಮೊದಲು ಸಂಪರ್ಕಿಸಿದಾಗ 'ನಿಮ್ಮ ಸಮಸ್ಯೆಗಳನ್ನು ಕಟ್ಟಿಕೊಂಡು ನಾನೇನು ಮಾಡಲಿ, ನನಗೇನು ಹೇಳಬೇಡಿ' ಎಂದಿದ್ದವನು ಇದೇ ಶಾಸಕ.

ಕ್ರಿಶ್ಚಿಯನ್ ಆಡಳಿತ ಸಂಸ್ಥೆ ನಡೆಸುವ ಕಾಲೇಜಿನ ವಿದ್ಯಾರ್ಥಿಗಳು ಹಳ್ಳಿಗಳಿಗೆ ಬಂದಿದ್ದಾರೆ ಎಂಬ ಕಾರಣಕ್ಕೆ ಯಾವುದೇ ಆಧಾರಗಳಿಲ್ಲದೆ ಮತಾಂತರದ ಆರೋಪ ಹೊರಿಸಿ ಧಾಳಿ ನಡೆಸಲಾಗಿದೆ. 25 ವಿದ್ಯಾರ್ಥಿಗಳಲ್ಲಿ ಹಿಂದೂಗಳು, ಸಿಖ್ಖರು, ಕ್ರಿಶ್ಚಿಯನ್ನರು, ಮುಸ್ಲಿಂರು ಎಲ್ಲರೂ ಇದ್ದಾರೆ. ಎಲ್ಲವನ್ನು ತಮ್ಮ ಕೋಮುವಾದಿ ರಾಜಕೀಯಕ್ಕೆ ಪೂರಕವಾಗಿಯೇ ಉಳಿಸಿಕೊಳ್ಳುವ ಮತಾಂಧರಿಗೆ ಈ ಧಾಳಿಯ ಹಿಂದೆ ಕೆಲವು ಸ್ಥಾಪಿತ ಹಿತಾಸಕ್ತಿಗಳೂ ಅಡಗಿವೆ. ಮೈಸೂರಮ್ಮನ ದೊಡ್ಡಿಯ ಗ್ರಾಮಸ್ಥರಿಗೆ ಅಲ್ಪಸ್ವಲ್ಪ ಜಮೀನು ಇದೆಯಾದರೂ ಇತರರ ಜಮೀನಿನಲ್ಲಿ ಮಾಡುವ ಕೂಲಿಯೇ ಜೀವನಾಧಾರವಾಗಿರುವ ದಲಿತ ಕುಟುಂಬಗಳು ಇವು.

ವಿದ್ಯಾರ್ಥಿಗಳ ಶ್ರಮದಾನದಿಂದ ಸಿಗುವ ಕೆಲವು ಸೌಕರ್ಯಗಳು, ಗ್ರಾಮಸ್ಥರಿಗೆ ಅಕ್ಷರ ಕಲಿಸುವ ಒಂದಷ್ಟು ಸಾಮಾಜಿಕ-ರಾಜಕೀಯ ತಿಳುವಳಿಕೆ ನೀಡುವ ಕಾರ್ಯಕ್ರಮಗಳು, 'ಜ್ಞಾನ ಜ್ಯೋತಿ ಕೇಂದ್ರ'ದ, ಗ್ರಾಮಸ್ಥರನ್ನು ಆರ್ಥಿಕವಾಗಿ ಸ್ವಾವಲಂಬಿಗಳಾಗಿಸುವ ಸಾಲ-ಸೌಲಭ್ಯ ಯೋಜನೆಗಳು ಇವು ಸ್ಥಳೀಯ ಭೂಮಾಲಿಕರ ಕಣ್ಣನ್ನು ಕೆಂಪಾಗಿಸಿವೆ.

ಕೃಷಿ ಕೂಲಿಕಾರರ-ದಲಿತರ ಕುಟುಂಬಗಳ ಮೇಲೆ ಹಳ್ಳಿಗರ ಮೇಲೆ ತಮಗಿರುವ ಹಿಡಿತ ಎಲ್ಲಿ ತಪ್ಪಿ ಹೋಗುತ್ತದೆಯೋ ಎಂಬ ಆತಂಕದ ಜೊತೆ ಮತಾಂಧತೆ ಸೇರಿ ಇಂತಹ ಅನಾಗರೀಕ ಧಾಳಿಗಳು ನಡೆಯುತ್ತಿವೆ.

ನಾಡಿನ ಹಲವು ಬುದ್ಧಿ ಜೀವಿಗಳು SFI-DYFI ಮುಂತಾದ ವಿದ್ಯಾರ್ಥಿ -ಯುವಜನರ ಸಂಘಟನೆಗಳು ಈ ಧಾಳಿಯನ್ನು ತೀವ್ರವಾಗಿ ಖಂಡಿಸಿವೆ. ಈ ದೌರ್ಜನ್ಯದ ವಿರುದ್ಧ ಪ್ರತಿಭಟನೆಗೆ ಸಿದ್ಧತೆಗಳು ನಡೆದಿವೆ. ಕೋಮುವಾದಿ ಧಾಳಿಗಳ ಬಗೆಗೆ ಕ್ರಮ ಕೈಗೊಳ್ಳುವ ಎಂದರೆ ಮತಾಂತರದ ಬಗೆಗೆ ರಾಷ್ಟ್ರೀಯ ಚರ್ಚೆಯಾಗಲಿ ಎನ್ನುವ ಪ್ರಧಾನಿ ಈಗ ದೇಶವನ್ನು ಆಳುತ್ತಿದ್ದಾರೆ. ರಾಜ್ಯದಲ್ಲಿ ಜನ ಕೋಮುವಾದಿಗಳನ್ನು ತಿರಸ್ಕರಿಸಿ ಸ್ಪಷ್ಟ ತೀರ್ಪುನೀಡಿದ್ದಾರೆ. ರಾಜ್ಯ ಸರ್ಕಾರವಾದರೂ ಮತಾಂಧರ ವಿರುದ್ಧ ಬಿಗಿ ಕ್ರಮ ಕೈಗೊಳ್ಳಬಹುದೆ ಎಂದು ಕಾದು ನೋಡಬೇಕಿದೆ.

ಒರಿಸ್ಸಾ ಚಂಡಮಾರುತ ಪರಿಹಾರ ನಿಧಿ

ಒರಿಸ್ಸಾ ಚಂಡಮಾರುತ ಪರಿಹಾರ ನಿಧಿಗಾಗಿ ಘಟಕಗಳು ಧನ ಸಂಗ್ರಹ ಮಾಡಬೇಕೆಂದು ಸಿಪಿಐ(ಎಂ) ಪಕ್ಷವು ನೀಡಿದ ಕರೆಯ ಮೇರೆಗೆ ಈಗಾಗಲೇ ಕೆಲವು ಸಮಿತಿಗಳು ಈ ಕೆಳಗಿನಂತೆ ರಾಜ್ಯ ಸಮಿತಿ ಕಛೇರಿಗೆ ತಲುಪಿದೆ

1. ಧಾರವಾಡ ಜಿಲ್ಲಾ ಸಮಿತಿ ಮುಂಗಡ	1000
2. ಬೆಂಗಳೂರು - ಕೆ.ಆರ್.ಪುರಂ ವಲಯ ಸಂಗ್ರಹ	11.403.75
3. ಕೋಲಾರ ಜಿಲ್ಲಾ ಸಮಿತಿ- ಬಾಗೇಪಲ್ಲಿ	3.363
4. ಬಳ್ಳಾರಿ ಜಿಲ್ಲಾಸಮಿತಿ	165
	15931.75

ಎಲ್ಲಾ ಘಟಕಗಳೂ ಕೂಡಲೇ ಕಾರ್ಯಪ್ರವೃತ್ತರಾಗಿ ಪರಿಹಾರ ನಿಧಿಯನ್ನು ಸಂಗ್ರಹಿಸಿ ಕಳುಹಿಸಬೇಕೆಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾ.ಎಸ್.ಸೂರ್ಯನಾರಾಯಣ ರಾವ್ ವಿನಂತಿಸಿದ್ದಾರೆ.

ವಿ.ಸೂ.: ಚೆಕ್/ಡಿ.ಡಿ. ಕಳುಹಿಸುವವರು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಬೆಂಗಳೂರು ಹೆಸರಿಗೆ ಕಳುಹಿಸುವುದು.

ಕಲ್ಯಾಣ್ ಸಿಂಗ್ ನಿರ್ಗಮನ: ಬಿಜೆಪಿಯ ಶಿಸ್ತು, ನೀತಿಗಳ ಬಗ್ಗೆ ಭ್ರಮನಿರಸನ

ಕೊನೆಗೂ ಉತ್ತರ ಪ್ರದೇಶದ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್‌ರನ್ನು ಬಿಜೆಪಿ ಮುಖಂಡತ್ವ ತೆಗೆದು ಹಾಕಿದೆ. ತೆಗೆದು ಹಾಕಿಲ್ಲ, ಅವರೇ ಹೋಗುತ್ತೇನೆಂದರು ಎಂದು ಬಿಜೆಪಿ ಮುಖಂಡರ ಸಮರ್ಥನೆ. ಕಲ್ಯಾಣ್ ಸಿಂಗ್‌ರ ಹಲವು ಉದ್ಗಾರಗಳ ಹಿನ್ನೆಲೆಯಲ್ಲಿ ಅಪಹಾಸ್ಯಕ್ಕೀಡಾಗಿದೆ. ಅವರ ಸ್ಥಾನ ತುಂಬಲು ಒಬ್ಬ ಅಪರಿಚಿತ ವ್ಯಕ್ತಿ ರಾಮ್ ಪ್ರಸಾದ್ ಗುಪ್ತಾ ಎಂಬುವವರನ್ನು ಆರಿಸಿದ್ದು, ಕಲ್ಯಾಣ್‌ಸಿಂಗ್ ರಾಜೀನಾಮೆ ಕೊಡಲು ಬಿಜೆಪಿ ಮುಖಂಡರನ್ನು ಸತಾಯಿಸಿದ್ದು, ಕೊನೆಗೆ ತಾನೇ ಬಿಜೆಪಿ ಕೇಂದ್ರ ಮುಖಂಡತ್ವ ಆರಿಸಿದ ಗುಪ್ತಾರ ಹೆಸರನ್ನು ಸೂಚಿಸಿದ್ದು, ಉತ್ತರ ಪ್ರದೇಶ ಬಿಜೆಪಿ ಶಾಸಕರ ಸಭೆಯಲ್ಲಿ ಅವರನ್ನು 'ಚುನಾಯಿಸಿದ್ದು' ಎಲ್ಲವೂ ಕಾಂಗ್ರೆಸ್‌ನ 'ಸಂಸ್ಕೃತಿ'ಯನ್ನು ನೆನಪಿಸುವಂತಿದೆ. ಆದರೂ ಬಿಜೆಪಿ ಮುಖಂಡತ್ವದ ಈ 'ಜಾಣ ನಿರ್ಧಾರ' ಬಿಜೆಪಿಯ ಉತ್ತರ ಪ್ರದೇಶ ಸಮಸ್ಯೆಯನ್ನು ಬಗೆಹರಿಸಿಲ್ಲ, ಬಗೆಹರಿಸುವುದೂ ಇಲ್ಲ. ಇತ್ತೀಚಿನ ವರ್ಷಗಳಲ್ಲಿ ಬಿಜೆಪಿಯ ಈ ಅತ್ಯಂತ ಬಲಿಷ್ಠ ಚುನಾವಣಾ ನೆಲೆಯಲ್ಲಿ ಕಂಡು ಬಂದಿರುವ ಮುಚ್ಚಲಾಗದ ಈ ಬಿರುಕು ಬಿಜೆಪಿಗೂ, ಕೇಂದ್ರದಲ್ಲಿನ ಅದರ ಸರಕಾರಕ್ಕೂ ಕೇಡಿನ ಸೂಚಕ ಎಂದರೆ ತಪ್ಪಾಗದು.

ಮಾಡಿದ್ದುಣ್ಣೋ ಮಾರಾಯ

ಬಿಜೆಪಿಯ ಉತ್ತರ ಪ್ರದೇಶದ ಘಟಕದ ಈ ಸಮಸ್ಯೆ ಹಲವಾರು ಕಾರಣಗಳಿಂದ ಮಹತ್ವಪೂರ್ಣವಾದದ್ದು. ಮೊದಲನೆಯದಾಗಿ, ಕಲ್ಯಾಣ್ ಸಿಂಗ್‌ಗೆ 'ಮಾಡಿದ್ದುಣ್ಣೋ ಮಾರಾಯ' ಎಂಬಂತಾಗಿದೆ. ಏಕೆಂದರೆ ಒಂದು ಅತ್ಯಂತ ಸಮಯಸಾಧಕ ಮೈತ್ರಿಕೂಟದ ಶಿಲ್ಪಿ ಇವರು. ಈತನ ಪಕ್ಷಾಂತರಿಗಳು ಹಾಗೂ ಕ್ರಿಮಿನಲ್‌ಗಳಿಂದ ತುಂಬಿದ 90 ಮಂತ್ರಿಗಳ ಸಂಪುಟ ಭಾರತೀಯ ರಾಜಕಾರಣದಲ್ಲೇ ಅತ್ಯಂತ ಹೀನ ಅಧ್ಯಾಯನ ಬರೆದ ಘಟನೆ. ಈ ಅಧಿಕಾರದಾಹಿಗಳ ದುರಾಡಳಿತ ರಾಜ್ಯದಲ್ಲಿ ಲೋಕಸಭಾ ಚುನಾವಣೆಗಳಲ್ಲಿನ ಸೋಲಿಗೆ ಒಂದು ಪ್ರಧಾನ ಕಾರಣ.

ಎರಡನೆಯದಾಗಿ, ಹಿಂದುತ್ವದ ಮೊಹರಿದ್ದರೂ ಬಿಜೆಪಿಯೊಂದು ಶಿಸ್ತುಬದ್ಧ, ನೀತಿಬದ್ಧ ಪಕ್ಷ ಎಂಬ ನಂಬಿಕೆ ಹಲವರಲ್ಲಿತ್ತು. ಅವರೆಲ್ಲರ ನಂಬಿಕೆ ಈಗ ನುಚ್ಚುನೂರಾಗಿದೆ. ಮೇಲ್ಜಾತಿ, ಹಿಂದುಳಿದ ಜಾತಿ ಮುಖಂಡರ ಕಿತ್ತಾಟ-ಜಗ್ಗಾಟ, ಚುನಾವಣೆಗಳ ನಂತರ ಕಲ್ಯಾಣ್ ಸಿಂಗರನ್ನು ತೆಗೆಯಲಾಗುವುದು ಎಂದು ಭಿನ್ನಮತೀಯರಿಗೆ ಪ್ರಧಾನಿಗಳ ಭರವಸೆ, ಅದಕ್ಕೆ ಕಲ್ಯಾಣ್ ಸಿಂಗ್ ಆಕ್ರೋಶ, ಅವರ ಬಲಗೈ ಬಂಟ ಸಾಕ್ಷಿ ಮಹಾರಾಜ್ ಬಹಿರಂಗವಾಗಿ ಸಮಾಜವಾದಿ ಪಕ್ಷದ ಪ್ರಚಾರ ನಡೆಸಿದ್ದು ಇವೆಲ್ಲಾ ಬಿಜೆಪಿಯ ನೀತಿಬದ್ಧತೆ, ಶಿಸ್ತುಪರತೆಯ ಛಾಯೆಯ ಮುಂದೆ ದೊಡ್ಡ ಪ್ರಶ್ನಾ ಚಿಹ್ನೆಯಿಟ್ಟಿದೆ.

ಅಧಿಕಾರ ದಾಹ

ಮೂರನೆಯದಾಗಿ, ಕಾಂಗ್ರೆಸ್‌ಗೆ ತಟ್ಟಿದ ಕಾಯಿಲೆಗಳೆಲ್ಲವೂ ಬಹಳ ಬೇಗನೇ ಬಿಜೆಪಿಗೂ ತಟ್ಟಿವೆ. ಕಾಂಗ್ರೆಸ್ ತನ್ನ ಉಚ್ಛ್ರಾಯ ದಿನಗಳಲ್ಲಿ ಒಂದು ಪ್ರಬಲ ಬಂಡವಾಳಶಾಹಿ ಪಕ್ಷದ ಬಲ ಪಡೆದಿತ್ತು. ಆ ಬಲವನ್ನು ಪಡೆಯಲು ಬಿಜೆಪಿಗೆ ಇನ್ನೂ ಸಾಧ್ಯವಾಗಿಲ್ಲವಾದರೂ ಮುಗಿಯದ ಗುಂಪುಗಾರಿಕೆ, ಅಧಿಕಾರದಾಹ, ಭ್ರಷ್ಟಾಚಾರ ಇತ್ಯಾದಿ ಕಾಂಗ್ರೆಸ್‌ನ ಪಿಡುಗುಗಳು ಮಾತ್ರ ಬಿಜೆಪಿಗೆ ಆಗಲೇ ತಟ್ಟಿವೆ. ಗುಜರಾತಿನ ವಾಘೇಲಾ ಪ್ರಕರಣ ಕೇವಲ ಒಂದು ಅಪವಾದ ಎಂಬ ಹಲವರ ನಿರೀಕ್ಷೆಯೂ ಸುಳ್ಳಾಗಿದೆ. ಅಧಿಕಾರದಾಹ ಬಿಜೆಪಿಯನ್ನು ಒಳಗೊಳಗೇ ಕೊರೆದಿದೆ, ಹಲವಾರು ವಾಘೇಲಾಗಳು ಅಲ್ಲಿ ಹುಟ್ಟಿಕೊಳ್ಳಲಿದ್ದಾರೆ ಎಂಬುದನ್ನು ಉತ್ತರ ಪ್ರದೇಶದ ಬೆಳವಣಿಗೆ ಎತ್ತಿ ತೋರಿದೆ.

ಕಲ್ಯಾಣ್ ಸಿಂಗರನ್ನು ಅವರ ಪಕ್ಷದ ಕೇಂದ್ರ ಮುಖಂಡತ್ವವೇ ಪದಚ್ಯುತಗೊಳಿಸಿದಾಗ ನವದೆಹಲಿಯಲ್ಲಿ ಇರಬೇಕಾಗಿದ್ದ ಕಲ್ಯಾಣ್ ಸಿಂಗ್ ವಾಸ್ತವವಾಗಿ ಅಯೋಧ್ಯೆಯಲ್ಲಿದ್ದರು. ರಾಮದೇವಸ್ಥಾನ ಇತ್ಯಾದಿ ಹಿಂದುತ್ವದ ಅಜೆಂಡಾ ಕೈಬಿಟ್ಟಿದ್ದರಿಂದಲೇ ಉತ್ತರ ಪ್ರದೇಶದಲ್ಲಿ ಬಿಜೆಪಿ ಸೋತಿತು ಎಂದು ಅಲ್ಲಿ ಅವರು ಸಾರಿದರು. ನಂತರ ವಾಜಪೇಯಿಯವರ ಲಾಹೋರ್ ಯಾತ್ರೆಯನ್ನು ಹೀಗಳೆದರು ಎಂದು ಸುದ್ದಿಯಾಗಿದೆ. ಮಂತ್ರಿಯಾಗಲು ಕೇಂದ್ರಕ್ಕೆ ಹೋಗುವುದಿಲ್ಲ, ರಾಜ್ಯಪಾಲರ ಹುದ್ದೆಗೂ ಹೋಗುವುದಿಲ್ಲ ಎಂದಿರುವ ಕಲ್ಯಾಣ್ ಸಿಂಗ್ ಬಿಜೆಪಿಯಲ್ಲಿ ಅವರ ಬೆಂಬಲಿಗರಲ್ಲಿ ನಡುಕ ಹುಟ್ಟಿಸಿರುವುದಂತೂ ನಿಜ.

ಕಲ್ಯಾಣ್ ಸಿಂಗ್ ಮುಂದೇನು ಮಾಡಬಹುದು? ಹಲವರು ಕೇಳುತ್ತಿರುವ ಪ್ರಶ್ನೆಯಿದು. ಕಟ್ಟಾ ಹಿಂದುತ್ವವಾದಿಗಳನ್ನು ಅಣಿನೆರೆಸಿ ವಾಜಪೇಯಿಯವರಿಗೆ ಸವಾಲು ಹಾಕಬಹುದು, ಇಲ್ಲವೇ ಹಿಂದುಳಿದ ವರ್ಗಗಳ ಕ್ರೋಢೀಕರಣದ ಪ್ರಯತ್ನ ನಡೆಸಬಹುದು. ಇದರಲ್ಲಿ ಯಾವ ದಾರಿ ಹಿಡಿದರೂ ಬಿಜೆಪಿಗೆ ಕಷ್ಟದ ದಿನಗಳು ಬರುತ್ತಿವೆ. ಆಂತರಿಕ ಕಿತ್ತಾಟಗಳಿಂದ ದುರ್ಬಲಗೊಂಡ ಬಿಜೆಪಿಯ ಜೊತೆ ಅಧಿಕಾರದಲ್ಲಿ ಭಾಗೀದಾರರಾಗಿರುವವರ ಒತ್ತಡ ಹೆಚ್ಚುತ್ತದೆ, ಇತ್ತ ಆರ್.ಎಸ್.ಎಸ್. ಪಾಳೆಯದಲ್ಲೂ ಹಿಂದುತ್ವದ 'ವಿವಾದಾತ್ಮಕ ಪ್ರಶ್ನೆಗಳ'ನ್ನು ಎತ್ತದಂತೆ ಹಾಕಿರುವ 'ಸಂಯಮ'ವನ್ನು ಲೇವಡಿ ಮಾಡುವವರು ಸಮಿಶ್ರ ರಾಜಕೀಯ ಒತ್ತಡದಿಂದಾಗಿ ನಿರ್ಮಿಸಿದ್ದ ಒಮ್ಮತದ ಹುಸಿ ಭವನವನ್ನೇ ಒಡೆದುಹಾಕಬಹುದು.

ಎರಡು ವಾರಗಳ ಹಿಂದೆ ಕರ್ನಾಟಕದಲ್ಲಿ ಪ್ರತಿಪಕ್ಷದ ಮುಖಂಡನ ಸ್ಥಾನಕ್ಕಾಗಿಯೂ ನಡೆದ ಮಾರಾಮಾರಿ, ಈಗ ಉತ್ತರ ಪ್ರದೇಶದಲ್ಲಿ ಮುಖ್ಯಮಂತ್ರಿ ಬದಲಾವಣೆಯ ಜಟಾಪಟಿ ಬಿಜೆಪಿ ಬಗ್ಗೆ ಹಲವರಲ್ಲಿ ಸಂಪೂರ್ಣ ಭ್ರಮನಿರಸನವುಂಟು ಮಾಡಿದ್ದರೆ ಆಶ್ಚರ್ಯವಿಲ್ಲ.



ಇದು ನಿಮಗೆ ಗೊತ್ತೆ?

ಬಿಜೆಪಿ ರಾಜಕಾರಣಕ್ಕೂ ಕ್ರಿಮಿನಲ್‌ಗಳಿಗೂ ಇರುವ ಸಂಪರ್ಕ ನಿಮಗೆ ಗೊತ್ತೆ? ಇತ್ತೀಚಿನ ಉದಾಹರಣೆ ನೋಡಿ. ಗುಜರಾತಿನ ಬಿಜೆಪಿ ಶಾಸಕ ಶಾಂತೀಭಾಯಿ ಅಮೃತಿಯಾ ಕೊಲೆ ಆಪಾದನೆಯ ಮೇಲೆ ಬಂಧಿತನಾಗಿದ್ದಾನೆ. ಕೊಲೆ ಯಾರದು ಗೊತ್ತೆ? ಇನ್ನೊಬ್ಬ ಬಿಜೆಪಿ ಮುಖಂಡ ರೇವಸ್ತಿಯಾ ಎಂಬಾತನದ್ದು. ಈ ಪ್ರಕರಣ ಈಗ ಕುತೂಹಲಕಾರೀ ತಿರುವು ಪಡೆದಿದೆ. ಬಿಜೆಪಿಯಲ್ಲಿರುವ ಕಟ್ವಾ ಪಟೇಲ್ ಜಾತಿಯವರು ಕೊಲೆ ಆಪಾದಿತ ಶಾಸಕನನ್ನು ಬಿಡುಗಡೆ ಮಾಡುವಂತೆ ಮುಖ್ಯ ಮಂತ್ರಿಗಳ ಮೇಲೆ ಒತ್ತಡ ತರುತ್ತಿದ್ದಾರೆ. ಇನ್ನೊಬ್ಬ ಆಪಾದಿತ ಹಾಗೂ ಮತ್ತೊಬ್ಬ ಬಿಜೆಪಿ ಮುಖಂಡ ಗಂಗಾರಾಂ ಟಾಪುನನ್ನು ಮುಗಿಸಿಬಿಡಲು 'ಎನ್‌ಕೌಂಟರ್' ರಚಿಸಲಾಗುತ್ತಿದೆ ಎಂದು ಇನ್ನೊಬ್ಬ ಬಿಜೆಪಿ ಮಂತ್ರಿ ಆಪಾದಿಸಿದ್ದಾರಂತೆ. ನವೆಂಬರ್ 6 ರ 'ಹಿಂದುಸ್ತಾನ್ ಟೈಮ್ಸ್' ಈ ಸುದ್ದಿ ಪ್ರಕಟಿಸಿದೆ. ಇನ್ನೂ ಒಂದು ವಿಷಯ ಗಮನಿಸಿ! ಈ ಮಂತ್ರಿ ಪುರುಷೋತ್ತಮ ಸೋಲಂಕಿ, ಕೇಶುಬಾಯಿ ಸಂಪುಟದಲ್ಲಿ ಕಾರ್ಮಿಕ ಮತ್ತು ಉದ್ಯೋಗ ಇಲಾಖೆಯ ಉಪಮಂತ್ರಿ, 1992-93 ರಲ್ಲಿ ನಡೆದ ಮುಂಬೈ ಗಲಭೆಗಳಲ್ಲಿ ಭಾಗವಹಿಸಿದಾತ ಎಂದು ಶ್ರೀಕೃಷ್ಣ ಆಯೋಗ ಹೆಸರಿಸಿದ ಬಿಜೆಪಿ ಮುಖಂಡರಲ್ಲಿ ಒಬ್ಬ! ಗಂಗಾರಾಂ ಟಾಪುನ ಸಾಕ್ಷ್ಯದ ಆಧಾರದ ಮೇಲೆ ಬಿಜೆಪಿ ಶಾಸಕನ ಬಂಧನವಾಗಿದೆ ಎಂಬ ಕಾರಣದಮೇಲೆ ಆತನನ್ನು ಮುಗಿಸುವ ಪ್ರಯತ್ನ ನಡೆಯುತ್ತದೆ ಎಂಬುದು ಈತನ ಶಂಕೆ. ವೃತ್ತಿಪರ ಶಂಕೆ ಏನ್ನೋಣವೇ! ವಾಹ್ ರೇ ಬಿಜೆಪಿಯ ಕ್ರಿಮಿಲ್-ರಾಜಕಾರಣ ಸ್ವರೂಪ!

ಮಹಿಳೆಯನ್ನು ಕೊಂದ ಕಾವಿ ಪ್ರೊಫೆಸರ್

ಪ್ರೊಫೆಸರ್ ಕೆ.ಜಿ.ರುಸ್ತೋಗಿ ಒಬ್ಬ NCERT ಪ್ರೊಫೆಸರ್. ಈತನದೊಂದು ಆತ್ಮಚರಿತ್ರೆ ಪ್ರಕಟವಾಗಿದೆ - 'ಆಪ್‌ಬೀತಿ' ಎಂದು ಅದರ ಹೆಸರು. 1947 ರಲ್ಲಿ ದೇಶ ವಿಭಜನೆಯ ವೇಳೆ ನಡೆದ ದಂಗೆಗಳಲ್ಲಿ ಒಬ್ಬ ಮುಸ್ಲಿಂ ಮಹಿಳೆಯನ್ನು ತಾನು ಕೊಂದುದಾಗಿ ಅವರು ಅದರಲ್ಲಿ ಹೇಳಿ ಕೊಂಡಿದ್ದಾರೆ. ಅಷ್ಟೇ ಅಲ್ಲ ಎನ್.ಸಿ.ಇ.ಆರ್.ಟಿ. (ರಾಷ್ಟ್ರೀಯ ಶಿಕ್ಷಣ ಸಂಶೋಧನಾ ಮಂಡಳಿ) ಯ ಪ್ರೊಫೆಸರ್ ಆಗಲು ಅವರಿವರ ಪಶೀಲಿಗೆ ಓಡಾಡಿ ರುವುದಾಗಿಯೂ ಅದರಲ್ಲಿ ಒಪ್ಪಿಕೊಂಡಿದ್ದಾರೆ.

ಇಂತಹ ವ್ಯಕ್ತಿಯನ್ನು ಈಗ ರಾಷ್ಟ್ರೀಯ ಶಿಕ್ಷಣ ಯೋಜನೆ ಮತ್ತು ಆಡಳಿತ ಸಂಸ್ಥೆ(NIEPA) ಯ ಜಂಟಿ ನಿರ್ದೇಶಕರನ್ನು ನೇಮಿಸಲು ರಚಿಸಿದ ಆಯ್ಕೆ ಸಮಿತಿಗೆ ನೇಮಿಸುವ ಪ್ರಯತ್ನ ಮಾನವ ಸಂಪನ್ಮೂಲ ಇಲಾಖೆಯಲ್ಲಿ ನಡೆದಿದೆ ಎಂದು ನವೆಂಬರ್ 5 ರ 'ಏಶ್ಯನ್ ಏಜ್' ಪತ್ರಿಕೆ ವರದಿ ಮಾಡಿದೆ. ಈ ಸಂಸ್ಥೆಯ ಅಧ್ಯಾಪಕ ವೃಂದ ಈ ಕಸರತ್ತಿನಿಂದ ಕಳವಳಗೊಂಡಿದ್ದಾರೆ. ಗುಟ್ಟಿನಲ್ಲಿ ನಡೆಯುವ ಕೆಲಸಗಳನ್ನು ನೋಡಿದರೆ ಏನೋ ಮೋಸವಿದ್ದಂತಿದೆ ಎಂದು ಅವರಿಗೆ ಸಂದೇಹವಿದೆ.

ಪಂಜಾಬ್-ಪಂಚಾಯತುಗಳನ್ನು ನೇಮಿಸಿದ ಸದಸ್ಯರಿಂದ ತುಂಬುವ ತಿದ್ದುಪಡಿಸಿ ವಿರೋಧ

ಪಂಜಾಬಿನಲ್ಲಿ ಪಂಚಾಯತುಗಳಲ್ಲಿ ನೇಮಕಾತಿ ಹೊಂದಿದ ಸದಸ್ಯರು ಬಹುಮತದಲ್ಲಿರುವಂತೆ ಮಾಡುವ ತಿದ್ದುಪಡಿಯನ್ನು ಅಲ್ಲಿನ ಸಿಪಿಐ(ಎಂ) ರಾಜ್ಯ ಸಮಿತಿ ಖಂಡಿಸಿದೆ. ಪಂಜಾಬ್ ಪಂಚಾಯತ್ ರಾಜ್ ಸಮಿತಿ ಮಸೂದೆ 1994 ರಲ್ಲಿ. ಉದ್ದೇಶದಿಂದ ಮಾಡಹೊರಟಿರುವ ತಿದ್ದುಪಡಿಯನ್ನು ಅದು ಬಲವಾಗಿ ವಿರೋಧಿಸಿದೆ. ಈ ತಿದ್ದುಪಡಿಯನ್ನು ಅದು ಬಲವಾಗಿ ವಿರೋಧಿಸಿದೆ. ಈ ತಿದ್ದುಪಡಿ ತಂದರೆ ಪಂಚಾಯತ್ ರಾಜ್ಯ ಸಮಿತಿಗಳಲ್ಲಿ ಚುನಾಯಿತ ಸದಸ್ಯರ ಸಂಖ್ಯೆ ಶೇಕಡಾ 40 ರಿಂದ ಶೇಕಡಾ 30 ಕ್ಕೆ ಇಳಿಯುವುದು. ಸರಪಂಚರಿಂದ ಪರೋಕ್ಷವಾಗಿ ಆಯ್ಕೆಯಾಗುವ ಸದಸ್ಯರ ಸಂಖ್ಯೆ ಶೇಕಡಾ 60 ರಿಂದ 70 ಕ್ಕೇರುವುದು ಅದು ಮಾತ್ರ ನೇರ ಚುನಾಯಿತ ಸದಸ್ಯರ ಸಂಖ್ಯೆ ಗಣನೀಯ ಬಹುಮತದಲ್ಲಿರಬೇಕು. ಅದು ಈಗಲೇ ಇಲ್ಲ. ಈ ತಿದ್ದುಪಡಿಯಿಂದ ಗ್ರಾಮೀಣ ಪ್ರದೇಶದಲ್ಲಿ ಪ್ರಜಾಸತ್ತೆಗೆ ಇನ್ನಷ್ಟು ಏಟು ಬೀಳಲಿದೆ ಎಂದು ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಬಲವಂತ ಸಿಂಗ್ ಹೇಳಿಕೆಯಲ್ಲಿ ಹೇಳಿದ್ದಾರೆ.

ತಿದ್ದುಪಡಿಯ ಹಿಂದಿರುವ ಉದ್ದೇಶ ಪ್ರತಿಗಾಮಿ, ಪ್ರಜಾಸತ್ತೆಗೆ ವಿರೋಧವಾದದ್ದು. ಅಕಾಲಿ-ಬಿಜೆಪಿ ಪಕ್ಷಗಳ ದುಷ್ಟಕೂಟ ಪಂಚಾಯತುಗಳಲ್ಲಿ ಚುನಾವಣೆಗಳನ್ನು ಎದುರಿಸಲು ಹಿಂದೇಟು ಹೊಡೆಯುತ್ತಿದ್ದಾರೆ. ಗಾಮೀಣ ಪ್ರದೇಶದಲ್ಲಿ ಸರ್ಕಾರಿ, ಕೈವಾಡ, ನೇಮಕಾತಿಗಳ ಮೂಲಕ ಅಧಿಕಾರ ಪಡೆಯುವ ಹುನ್ನಾರ ಇದು. ನಿಜವಾಗಿಯೂ ಚುನಾಯಿತ ಸದಸ್ಯರ ಸಂಖ್ಯೆಯನ್ನು ಶೇಕಡಾ 50ಕ್ಕೆ ಏರಿಸಬೇಕು. ಐದು ಸಾವಿರ ಜನಸಂಖ್ಯೆಯ ಗ್ರಾಮಕ್ಕೆ ಒಂದು ಪಂಚಾಯತ್ ಸಮಿತಿ ಇರುವ ಈಗಿನ ವ್ಯವಸ್ಥೆಯನ್ನು ಬದಲಿಸಬಾರದೆಂದು ಬಲವಂತ ಸಿಂಗ್ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

ಕಾಂ. ರಾಮಚಂದ್ರ ಘಂಘಾರೆ ನಿಧನ

ಮಹಾರಾಷ್ಟ್ರದ ವಿದರ್ಭ ಪ್ರದೇಶದಲ್ಲಿ ಜನಪ್ರಿಯರಾಗಿದ್ದ ಹಿರಿಯ ಸಿಪಿಐ(ಎಂ) ಹಾಗೂ ರೈತ ಮುಖಂಡ ಕಾಂ ರಾಮಚಂದ್ರ ಘಂಘಾರೆ ಅಕ್ಟೋಬರ್ 30 ರಂದು ನಿಧನರಾದರು. ಅವರಿಗೆ 72 ವರ್ಷವಾಗಿತ್ತು. ಕಾಂ. ಘಂಘಾರೆ ಸಿಪಿಐ(ಎಂ) ನ ಮಹಾರಾಷ್ಟ್ರ ರಾಜ್ಯ ಸಮಿತಿಯ ಸದಸ್ಯರೂ ಹಾಗೂ ಮಹಾರಾಷ್ಟ್ರ ರಾಜ್ಯ ಕಿಸಾನ್ ಸಭಾದ ಉಪಾಧ್ಯಕ್ಷರೂ ಆಗಿದ್ದರು. ಈ ಹಿರಿಯ ಸ್ವಾತಂತ್ರ್ಯ ಹೋರಾಟಗಾರ 1991 ರಲ್ಲಿ ವಾರ್ಧಾದಿಂದ ಈಗಿನ ಕೇಂದ್ರ ಮಂತ್ರಿ ವಸಂತ ಸಾಠೆಯವರನ್ನು ಸೋಲಿಸಿ ಲೋಕಸಭೆಗೆ ಆಯ್ಕೆಯಾಗಿದ್ದರು. ಇದಕ್ಕೆ ಮೊದಲು 1967 ರಲ್ಲಿ ವಿಧಾನಸಭೆಗೂ ಆಯ್ಕೆಯಾಗಿದ್ದರು.

ಅಕ್ಟೋಬರ್ 31 ರಂದು ನಡೆದ ಅಂತಿಮ ಯಾತ್ರೆಯಲ್ಲಿ ವಾರ್ಧಾ ಜಿಲ್ಲೆಯ ಸಾವಿರಾರು ಜನ ಭಾಗವಹಿಸಿದ್ದರು.

ಬ್ರೆಜಿಲ್ ರಿಯೋ-ಡಿ-ಜನೇರಿಯೋದಲ್ಲಿ ಟ್ರೇಡ್‌ಯೂನಿಯನ್‌ಗಳ ಸಭೆ

ಜಾಗತೀಕರಣದ ವಿರುದ್ಧ ಎರಡನೇ ವಿಶ್ವ ಸಮ್ಮೇಳನ

ಬ್ರೆಜಿಲ್‌ನ ರಾಜಧಾನಿ ರಿಯೋ-ಡಿ-ಜನೇರಿಯೊದಲ್ಲಿ ಸೆಪ್ಟೆಂಬರ್ 1 ರಿಂದ 3 ರವರೆಗೆ ಜಾಗತೀಕರಣದ ವಿರುದ್ಧ ವಿಶ್ವ ಸಮ್ಮೇಳನ ನಡೆಯಿತು. 1997 ರಲ್ಲಿ ಕ್ಯೂಬಾದ ರಾಜಧಾನಿ ಹವಾನಾದಲ್ಲಿ ನಡೆದ ಮೊದಲನೇ ಸಮ್ಮೇಳನದ ನಂತರ ಇದು ಟ್ರೇಡ್ ಯೂನಿಯನ್‌ಗಳ ಎರಡನೇ ಅಂತರ್‍ರಾಷ್ಟ್ರೀಯ ಸಮ್ಮೇಳನವಾಗಿತ್ತು. ಈ ಸಮ್ಮೇಳನ ಜಗತ್ತಿನ ವಿವಿಧ ದೇಶಗಳಲ್ಲಿ ಜಾಗತೀಕರಣ ಮತ್ತು ನವ-ಉದಾರವಾದಿ ಬೆಳವಣಿಗೆಗಳನ್ನು ವಿವರವಾಗಿ ಚರ್ಚಿಸಿ, ಅದಕ್ಕೆ ಟ್ರೇಡ್ ಯೂನಿಯನ್‌ಗಳ ಬೆಳೆಯುತ್ತಿರುವ ಪ್ರತಿರೋಧದ ಸ್ಥಿತಿಯನ್ನು ಚರ್ಚಿಸಿತು. ಜಾಗತೀಕರಣದ ಪ್ರಕ್ರಿಯೆ ಬಗ್ಗೆ ಸಾರ್ವತ್ರಿಕ ತಿಳುವಳಿಕೆ ಬೆಳೆಸಿ, ಅದರ ವಿರುದ್ಧ ಹೋರಾಟದಲ್ಲಿ ಅಂತರ್‍ರಾಷ್ಟ್ರೀಯ ಸಂಯೋಜನೆ ಬೆಳೆಸುವುದು ಈ ಸಮ್ಮೇಳನದ ಉದ್ದೇಶವಾಗಿತ್ತು.

ಈ ಸಮ್ಮೇಳನವನ್ನು ಬ್ರೆಜಿಲ್‌ನ ಎಡ ಪಂಥೀಯ ಟ್ರೇಡ್ ಯೂನಿಯನ್ ಸಿಯುಟಿ ನಡೆಸಿಕೊಟ್ಟಿತು. ಸಿಯುಟಿ ಬ್ರೆಜಿಲ್‌ನ ಕಮ್ಯುನಿಸ್ಟ್ ಪಕ್ಷ, ವರ್ಕರ್ಸ್ ಪಾರ್ಟಿ, ಇತರ ಸೋಶಲಿಸ್ಟ್ ಪಕ್ಷಗಳ ಕಾರ್ಯಕರ್ತರು ಒಟ್ಟಿಗೆ ದುಡಿಯುವ ಟ್ರೆಡ್ ಯೂನಿಯನ್, ಕ್ಯೂಬಾ ಲ್ಯಾಟಿನ್(ದಕ್ಷಿಣ) ಅಮೆರಿಕಾ, ಯುರೋಪ, ಏಶ್ಯಾಗಳ ಟ್ರೇಡ್ ಯೂನಿಯನ್ ಪ್ರತಿನಿಧಿಗಳು, WFTU ಮತ್ತಿತರ ಹಲವು ಅಂತರ್‍ರಾಷ್ಟ್ರೀಯ ಟ್ರೇಡ್ ಯೂನಿಯನ್ ಸಂಘಟನೆಗಳ ಪ್ರತಿನಿಧಿಗಳು ಸಭೆಗೆ ಬಂದಿದ್ದರು. ಮೂರುದಿನಗಳ ಕೂಲಂಕುಷವಾದ ಚರ್ಚೆ ನಂತರ ಜಾಗತೀಕರಣದ ವಿರುದ್ಧ ಟ್ರೇಡ್ ಯೂನಿಯನ್‌ಗಳ ಸಾರ್ವತ್ರಿಕ ತಿಳುವಳಿಕೆ ಇರುವ ಮತ್ತು ಅಂತರ್‍ರಾಷ್ಟ್ರೀಯ ಕಾರ್ಯಾಚರಣೆಯಲ್ಲಿ ಸಂಯೋಜನೆಗೆ ಕರೆ ಕೊಡುವ ನಿರ್ಣಯವನ್ನು ಸಭೆ ಅಂಗೀಕರಿಸಿತು. ಜಾಗತೀಕರಣದ ವಿರುದ್ಧ ವಿಶ್ವ ಹೋರಾಟದಲ್ಲಿ ಈ ಸಭೆ ಅತ್ಯಂತ ಮಹತ್ವದ ಮೈಲಿಗಲ್ಲಾಗಿತ್ತು.

ಭಾರತದ ಪ್ರತಿನಿಧಿಗಳು

ಭಾರತದಿಂದ ಐವರು ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿ ಕೊಡುಗೆ ನೀಡಿದರು. ಸಿಐಟಿಯು ಮತ್ತು ಸಾರ್ವಜನಿಕ ಮತ್ತು ಇತರ ಕಾರ್ಮಿಕರ ಅಂತರ್‍ರಾಷ್ಟ್ರೀಯವನ್ನು ಪ್ರತಿನಿಧಿಸಿ ಸುಕೋಮಲ್ ಸೇನ್, ವಿಮಾ ನೌಕರರ ಸಂಘ AIIEA ಪ್ರತಿನಿಧಿಸಿ ಎನ್.ಎಂ.ಸುಂದರಂ, ಸಿಐಟಿಯು ಕಾರ್ಯದರ್ಶಿಗಳಲ್ಲೊಬ್ಬರಾದ ಎ.ಕೆ.ಪದ್ಮನಾಭನ್, ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಮಹಾಸಂಘದ ಅಧ್ಯಕ್ಷ ಕೆ.ಗಂಗಾಧರನ್, ಕೊಚ್ಚಿನ್ ಬಂದರು ಕಾರ್ಮಿಕರ ಯೂನಿಯನ್ ಕೆ.ವಿ.ಎ.ಐಯ್ಯರ್ - ಈ ಐವರು ಪ್ರತಿನಿಧಿಗಳು. ಸಮ್ಮೇಳನವನ್ನು ಐದು ಸಭೆಗಳಾಗಿ ವಿಂಗಡಿಸಲಾಗಿತ್ತು. ಆರಂಭದ ಸಭೆಯಲ್ಲಿ ಪ್ರಖ್ಯಾತ ಬ್ರೆಜಿಲಿಯನ್ ಆರ್ಥಿಕ ತಜ್ಞ ಜೋ ಡಿ ರ 'ಜಾಗತೀಕ ಬಂಡವಾಳ' ದ ಮೇಲೆ ಭಾಷಣ ಪ್ರಮುಖ ಕಾರ್ಯಕ್ರಮವಾಗಿತ್ತು. ಈ ಭಾಷಣದಲ್ಲಿ ಅವರು ಜಾಗತಿಕ ಬಂಡವಾಳಶಾಹಿ ಬೆಳವಣಿಗೆಯ ಈಗಿನ ಹಂತದ ಬಗ್ಗೆ ವಿವರ ನೀಡಿದರು. ಬ್ರೆಜಿಲ್ ಹಿಂದೆಂದೂ ಕಾಣದ ತೀವ್ರ ಬಿಕ್ಕಟ್ಟಿಗೆ ತಳ್ಳಿದ ಬಗ್ಗೆ ವಿವರಗಳನ್ನು ನೀಡಿದ ಮೇಲೆ, ಆ ಮೂಲಕ ಜಾಗತಿಕ ಬಂಡವಾಳಶಾಹಿಯ ಬಿಕ್ಕಟ್ಟಿನ ಪರಿಸ್ಥಿತಿ ಬಗ್ಗೆ ವಿವರಿಸಿದ ಐಎಂಎಫ್-ವಿಶ್ವಬ್ಯಾಂಕ್ ನಿರ್ದೇಶಿತ ಆರ್ಥಿಕ ನೀತಿಗಳು ಸಾಮಾನ್ಯ ಜನರಿಗೆ ಹೇಗೆ ವಿರುದ್ಧವಾದವು, ಬ್ರೆಜಿಲ್‌ನಲ್ಲಿ ಅವು ಉಂಟುಮಾಡಿದ ವಿನಾಶದ ಚಿತ್ರಣ ನೀಡುತ್ತಾ ಇದಕ್ಕೆ ಕಾರ್ಮಿಕರ, ಬಡಜನರ ಪ್ರತಿರೋಧದ ಹೋರಾಟವೊಂದೆ ಹೇಗೆ ಪರಿಹಾರ ಎಂದು ಮನಗಾಣಿಸಿದರು. ಕ್ಯೂಬಾದ ಟ್ರೇಡ್ ಯೂನಿಯನ್ ನಾಯಕ ಪೆಡ್ರೂಸ್ ರೋಸ್ ಸಹ ಆರಂಭದ ಸಭೆಯಲ್ಲಿ ಮಾತನಾಡಿದರು.

ಎರಡನೇ ಸಭೆ ಯುರೋಪ್‌ನಲ್ಲಿ ಜಾಗತೀಕರಣದ ವಿಶಿಷ್ಟತೆ, ಅಲ್ಲಿನ ಕಾರ್ಮಿಕರ ಮೇಲೆ ಅವರ ಪರಿಣಾಮ, ಯೂನಿಯನ್‌ಗಳ ಪ್ರತಿರೋಧದ ಬಗ್ಗೆ ಬೆಳಕು ಚೆಲ್ಲಿತು. ಯುರೋಪಿಯನ್ ಒಕ್ಕೂಟ, ಆರ್ಥಿಕವಾಗಿ, ರಾಜಕೀಯವಾಗಿ ಮಹತ್ವದ ಪಾತ್ರ ವಹಿಸುತ್ತಾ, ಅಲ್ಲಿನ ಪ್ರತಿದೇಶದ ಸರ್ಕಾರದ ನೀತಿಯ ಮಹತ್ವ ಕಡಿಮೆಯಾಗುತ್ತಿರುವುದು ಯುರೋಪಿನಲ್ಲಿ ಜಾಗತೀಕರಣದ ವಿಶಿಷ್ಟರೂಪ. ಇದರಿಂದಾಗಿ ಟ್ರೇಡ್ ಯೂನಿಯನ್‌ಗಳು ದಶಕಗಳ ಹೋರಾಟದ ನಂತರ ಗಳಿಸಿದ ಸಾಧನೆಗಳು, ಕ್ರಮಗಳು, ಕಾನೂನುಗಳನ್ನು ಯೂರೋಪಿಯನ್ ಐಕ್ಯತೆ ಹೆಸರಲ್ಲಿ ಮುರಿಯುತ್ತಿರುವುದರ ವಿರುದ್ಧ ಪ್ರತಿರೋಧ ಯುರೋಪಿನ ಪ್ರಮುಖ ಬೆಳವಣಿಗೆ. ಫ್ರೆಂಚ್ ಸಿ.ಜಿ.ಟಿ. ಪೋರ್ಚುಗೀಸ್‌ನ ಸಿ.ಜಿ.ಟಿ.ಪಿ. ಸ್ಪೈನ್‌ನ ಗ್ಯಾಲಿಶಿಯನ್, ಗ್ರೀಸ್ ಮತ್ತು ಇಟಲಿಯ ಸಿಜಿಐಎಲ್‌ನ ಪ್ರತಿನಿಧಿಗಳು ಎರಡನೇ ಸಭೆಯಲ್ಲಿ ಮಾತನಾಡಿದರು.

ಏಶ್ಯಾದ ಬಿಕ್ಕಟ್ಟು

ಮೂರನೇ ಸಭೆ ಏಶ್ಯಾದಲ್ಲಿ ಜಾಗತೀಕರಣ ಉಂಟುಮಾಡಿರುವ ಬಿಕ್ಕಟ್ಟು ಹಾಗೂ ಅದಕ್ಕೆ ಕಾರ್ಮಿಕರ ಪ್ರತಿರೋಧದ ಬಗ್ಗೆ ಚರ್ಚಿಸಿತು. ಭಾರತದ ಪ್ರತಿನಿಧಿಗಳ ಪರವಾಗಿ ಸುಕೋಮಲ ಸೇನ್, ಚೀನಾ ಟ್ರೇಡ್ ಯೂನಿಯನ್‌ಗಳ ಪರವಾಗಿ ಲಾಹುವಾ ಮತ್ತಿತರರು ಈ ಸಭೆಯಲ್ಲಿ ಮಾತನಾಡಿದರು. ರಶ್ಯಾ, ದಕ್ಷಿಣಪೂರ್ವ ಏಶ್ಯಾ, ಜಪಾನ್, ಭಾರತಗಳಲ್ಲಿ ಜಾಗತೀಕರಣ ಉಂಟು ಮಾಡಿರುವ ಬಿಕ್ಕಟ್ಟಿನ ವಿಶಿಷ್ಟತೆಗಳ ಹಾಗೂ ಅದಕ್ಕೆ ಬೆಳೆಯುತ್ತಿರುವ ಪ್ರತಿರೋಧದ ಬಗ್ಗೆ ಸುಕೋಮಲ್ ಸೇನ್ ವಿವರವಾಗಿ ಮಾತನಾಡಿದರು. ಇತ್ತೀಚೆಗೆ 'ಏಶ್ಯಾದ ಹುಲಿ'ಗಳೆನಿಸಿದ ದೇಶಗಳ ಪತನ, ಐ.ಎಂ.ಎಫ್ ಪರಿಹಾರಗಳು ಕೆಲಸ ಮಾಡಲಿರುವುದರ ಮಹತ್ವದ ಬಗ್ಗೆ ಅವರು ಗಮನ ಸೆಳೆದರು. ಚೀನಾದ ಲಾ ಹುವಾ ಅಲ್ಲಿ ಜಾಗತೀಕರಣಕ್ಕೆ ತೆರೆದಿರುವ ಕ್ಷೇತ್ರಗಳು ಒಟ್ಟು ಕೈಗಾರಿಕೆ ಪ್ರಮಾಣದಲ್ಲಿ ಅತಿ ಸಣ್ಣದು ಎಂದು ಒತ್ತಿ ಹೇಳಿ, ಜಾಗತೀಕರಣ ಚೀನಿ ಕಾರ್ಮಿಕರಿಗೆ ಉಂಟು ಮಾಡಿರುವ ಸಮಸ್ಯೆಗಳ ಬಗ್ಗೆ ವಿವರವಾಗಿ ಹೇಳಿದರು. ಆದರೆ ಒಟ್ಟಾರೆ ಆರ್ಥಿಕ ಬೆಳವಣಿಗೆ ಈ ನಕಾರಾತ್ಮಕ ಬೆಳವಣಿಗೆಯನ್ನು ಸರಿಯಾಗಿಸಬಲ್ಲದು ಎಂದು ಹೇಳಿದರು. ನಾಲ್ಕನೇ ಸಭೆ ಲ್ಯಾಟಿನ್(ದಕ್ಷಿಣ) ಅಮರಿಕಕ್ಕೆ ಮೀಸಲಾಗಿತ್ತು. ಬ್ರೆಜಿಲ್, ಉರುಗ್ವೆ, ಪರಾಗ್ವೆ, ಚಿಲಿ, ಅರ್ಜೆಂಟೈನಾ, ಕ್ಯೂಬಾ ಮತ್ತು ಪೆರುಗಳ ಪ್ರತಿನಿಧಿಗಳು ಸಭೆಯಲ್ಲಿ ಮಾತನಾಡಿದರು. 1994 ರ ಮೆಕ್ಸಿಕನ್ ಬಿಕ್ಕಟ್ಟು, ಅದರ ವಿರುದ್ಧ ಕಾರ್ಮಿಕರ ತೀವ್ರ ಪ್ರತಿರೋಧದ ಬಗ್ಗೆ ಪ್ರತಿನಿಧಿಗಳು ವಿವರವಾಗಿ ಮಾತನಾಡಿದರು. ಆಗಸ್ಟ್ 23 ರಂದು ಒಂದು ಲಕ್ಷ ಬ್ರೆಜಿಲಿಯನ್ ಕಾರ್ಮಿಕರ ಪ್ರತಿಭಟನಾ ಮೆರವಣಿಗೆ ಬಗ್ಗೆ ಹೇಳಲಾಯಿತು.

ಐದನೇ ಸಭೆಯಲ್ಲಿ ಕರಡು ನಿರ್ಣಯದ ಮೇಲೆ ಚರ್ಚೆ ನಡೆದು ಅದನ್ನು ಅಂಗೀಕರಿಸಲಾಯಿತು. ಈ ಅಂತರ್‍ರಾಷ್ಟ್ರೀಯ ಸಮ್ಮೇಳನದಿಂದ ಜಾಗತೀಕರಣದ ವಿರುದ್ಧ ಕಾರ್ಮಿಕರ ಪ್ರತಿರೋಧದ ಕಾರ್ಯಾಚರಣೆಯಲ್ಲಿ ಸಂಯೋಜನೆ ಬೆಳೆಯಲಿದೆ. ಪರಿಣಾಮಕಾರಿಯಾಗಿ ಬೆಳೆಯಲಿದೆ. ಸೆಪ್ಟೆಂಬರ್ 2 ರಂದು ಬ್ರೆಜಿಲ್ ಟ್ರೇಡ್ ಯೂನಿಯನ್ ಸಿಯುಟಿ ಮತ್ತು ಭಾರತದ ಸಿಐಟಿಯು ಪ್ರತಿನಿಧಿಗಳು ಭಾಗವಹಿಸಿ, ಎರಡೂ ಸಂಘಟನೆಗಳ ನಡುವೆ ಬಾಂಧವ್ಯ ಸ್ಥಾಪಿಸುವ ಬಗ್ಗೆ ಒಪ್ಪಂದವಾಯಿತು. ಬ್ರೆಜಿಲ್‌ನ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಸದಸ್ಯ ಲೂಯಿ ಫರ್ನಾಂಡೀಸ್ ಸಮ್ಮೇಳನಕ್ಕೆ ಬಂದಿದ್ದ ಎಲ್ಲಾ ಕಮ್ಯುನಿಸ್ಟ್ ಸದಸ್ಯರಿಗೆ ವಿಶೇಷ ಔತಣ ಕೂಟ ಏರ್ಪಡಿಸಿದ್ದು, ಅಲ್ಲಿ ಕಮ್ಯುನಿಸ್ಟರ ನಡುವೆ ಅಂತರ್‍ರಾಷ್ಟ್ರೀಯ ಸಂಯೋಜನೆ ವಿಶಿಷ್ಟ ಅಗತ್ಯದ ಬಗ್ಗೆ ಅನೌಪಚಾರಿಕ ಮಾತುಕತೆ ನಡೆಯಿತು.

ಜಾಗತೀಕರಣದ ವಿರುದ್ಧ ವಿಶ್ವ ಕಾರ್ಮಿಕರ ರಣಕಹಳೆ

ಜಾಗತೀಕರಣದ ಸುಂಟರಗಾಳಿ ಎಲ್ಲೆಡೆ ಬೀಸಿ ಕಾರ್ಮಿಕರ ಜನತೆಯ ಹಕ್ಕುಗಳನ್ನು, ಜೀವನವನ್ನು ನಾಶ ಮಾಡುತ್ತಿರುವಾಗ ಕವಿಯುತ್ತಿರುವ ಹತಾಶೆ, ನಿರುತ್ಸಾಹವನ್ನು ಮೆಟ್ಟಿ ನಿಂತು ಸವಾಲು ಹಾಕುವ ಎರಡು ಘಟನೆಗಳು ನಡೆದಿವೆ - ಇತ್ತೀಚೆಗೆ, ಬ್ರೆಜಿಲ್ ರಾಜಧಾನಿ ರಿಯೋ-ಡಿ-ಜನೇರಿಯೋದಲ್ಲಿ ಸೆಪ್ಟೆಂಬರ್ 1 ರಿಂದ 3 ರವರೆಗೆ ನಡೆದ ಜಾಗತೀಕರಣ ವಿರುದ್ಧ ಟ್ರೇಡ್ ಯೂನಿಯನ್ ಅಂತರ್‍ರಾಷ್ಟ್ರೀಯ ಸಮ್ಮೇಳನ ಒಂದು. ಇತ್ತೀಚೆಗೆ ಅಕ್ಟೋಬರ್ 25 ರಿಂದ 29 ವರೆಗೆ ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್ ನಲ್ಲಿ ನಡೆದ ಮೂರನೇ ಜಗತ್ತಿನ ಟ್ರೇಡ್ ಯೂನಿಯನ್‌ಗಳ(SIGIOR) 5ನೇ ಸಮ್ಮೇಳನ. ಜಾಗತೀಕರಣಕ್ಕೆ ಜಾಗತಿಕ ಕಾರ್ಮಿಕ ವರ್ಗ ಒಡ್ಡುತ್ತಿರುವ ಸವಾಲು ಸಂಘಟಿತ, ರೂಪ ತಳೆಯುತ್ತಿರುವುದು ಇವೆರಡು ಘಟನೆಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಸಾಮ್ರಾಜ್ಯಶಾಹಿ ಜಾಗತೀಕರಣದ ಬದಲು ಸಮಾಜವಾದಿ ಜಾಗತೀಕರಣದತ್ತ ನಡೆಯಬೇಕಾದ ಹಾದಿಯಲ್ಲಿ ಇವು ಪ್ರಮುಖ ಹೆಜ್ಜೆಗಳು.

21ನೇ ಶತಮಾನದ ಮೊದಲ ಮೇ ದಿನದಂದು ವಿಶ್ವ ಕಾರ್ಮಿಕರ ರಣಕಹಳೆ ಮೊಳಗಲಿದೆ

21ನೇ ಶತಮಾನದ ಮೊದಲ ಮೇ ದಿನ (ಅಂದರೆ ಮೇ 1, 2000) ಮೂರನೇ ಜಗತ್ತಿನ ಕಾರ್ಮಿಕರು

ಸಾಮೂಹಿಕ ಚೌಕಾಶಿ ಮತ್ತು
ಟ್ರೇಡ್ ಯೂನಿಯನ್ ಹಕ್ಕು ಎತ್ತಿ ಹಿಡಿಯಿರಿ!
ಐಎಂಎಫ್-ವಿಶ್ವಬ್ಯಾಂಕ್ ಶರಣಾಗತಿ ಬೇಡ!
ವಿಶ್ವ ವಾಣಿಜ್ಯ ಸಂಸ್ಥೆ (WTO) ಆಕ್ರಮಣ ನಿಲ್ಲಿಸಿ
ಕೆಲಸದ ಹಕ್ಕು ಮತ್ತು ಎಲ್ಲರಿಗೂ ಕೆಲಸ!
ರಫ್ತು ವಲಯಗಳಲ್ಲಿ ಕಾರ್ಮಿಕರ ವಿರುದ್ಧ
ತಾರತಮ್ಯ ಬೇಡ!!

ಎಂಬ ಘೋಷಣೆಗಳನ್ನು ಮೊಳಗಿಸಲಿದ್ದಾರೆ. ಈ ಬಗ್ಗೆ ಇತ್ತೀಚಿಗೆ ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್‌ನಲ್ಲಿ ನಡೆದ (ಅಕ್ಟೋಬರ್ 25 ರಿಂದ 29 ವರೆಗೆ) ಮೂರನೇ ಜಗತ್ತಿನ ಟ್ರೇಡ್‌ಯೂನಿಯನ್‌ಗಳ ಸಮ್ಮೇಳನ ಈ ಬಗ್ಗೆ ತಿರ್ಮಾನಿಸಿದೆ. ಈ ಮೇಲಿನ ಘೋಷಣೆಗಳ ಸುತ್ತ ಕಾರ್ಮಿಕರನ್ನು ಸಂಘಟಿಸಿ, ಮುಂದಿನ ಮೇ ದಿನವನ್ನು ಆಚರಿಸಲು ಸಮ್ಮೇಳನದಲ್ಲಿ ತೀರ್ಮಾನಿಸಲಾಯಿತು. ಭಾರತ, ದಕ್ಷಿಣ ಆಫ್ರಿಕಾ, ದಕ್ಷಿಣ ಕೊರಿಯಾ, ಆಸ್ಟ್ರೇಲಿಯ, ಫಿಲಿಪೈನ್ಸ್, ಇಂಡೋನೇಶ್ಯಾ, ಮಲೇಶ್ಯಾ, ಪಾಕಿಸ್ತಾನ, ಶ್ರೀಲಂಕಾ, ನೈಜಿರಿಯಾ ಸೇರಿದಂತೆ 14 ದೇಶಗಳಿಂದ 121 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಭಾರತದಿಂದ 14 ಪ್ರತಿನಿಧಿಗಳು ಭಾಗವಹಿಸಿದ್ದರು. ಇದು 'ಭಾರತೀಯ ಸಮುದ್ರ ಪ್ರದೇಶದ ಟ್ರೇಡ್ ಯೂನಿಯನ್ ಸಮ್ಮೇಳನ(Indian Occen Region Trade Union Conferance - IORTUC) ದ 5ನೇ ಸಮಾವೇಶವಾಗಿತ್ತು. ಆದರೆ ಈ ವರ್ಷದಿಂದ ಈ ಸಂಘಟನೆ ತನ್ನ ಹೆಸರನ್ನು ಬದಲಾಯಿಸಿ 'ಸಿಗ್‌ಟುರ್' (SIGTUR-Southern Initiativ on Globalisation and Trade Union Rights - ಜಾಗತೀಕರಣ ಮತ್ತು ಟ್ರೇಡ್ ಯೂನಿಯನ್ ಹಕ್ಕುಗಳ ಬಗ್ಗೆ ದಕ್ಷಿಣದ ಮುನ್ನೆಗೆತ) ಎಂದು ಮಾಡಿಕೊಂಡಿದೆ. ಹಿಂದೆ ಭಾರತ ಸಮುದ್ರದ ಪ್ರದೇಶಗಳ ಟ್ರೇಡ್ ಯೂನಿಯನ್‌ಗಳ ಸಂಘಟನೆಯಾಗಿದ್ದು, ದಕ್ಷಿಣ(ಅಂದರೆ ಅಭಿವೃದ್ಧಿ ಹೊಂದಿದ ಮೂರನೇ ಜಗತ್ತಿನ ದೇಶಗಳು) ದ ದೇಶಗಳ ಟ್ರೇಡ್ ಯೂನಿಯನ್‌ಗಳ ಸಂಘಟನೆಯಾಗಿ ಮಾರ್ಪಟ್ಟಿದೆ.

ಯೂನಿಯನ್‌ಗಳ ಅಂತರ್‍ರಾಷ್ಟ್ರೀಯ ಜಂಟಿ ಕಾರ್ಯಾಚರಣೆ, ಸೌಹಾರ್ದತೆ

ಸಮ್ಮೇಳನ ನಾಲ್ಕು ಕಾರ್ಯಾಗಾರಗಳಾಗಿ ವಿಂಗಡಿಸಿ ನಡೆಯಿತು. ಜಾಗತಿಕ ಯೂನಿಯನ್‌ಗಳು, ಜಾಗತೀಕರಣದ ವಿರುದ್ಧ ಯೂನಿಯನ್ ರಣನೀತಿ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಅಂತರ್‍ರಾಷ್ಟ್ರೀಯ ಪ್ರಚಾರ-ಪ್ರಕ್ಷೋಭೆ, ಮುಂದಿನ ಮೇ ದಿನಕ್ಕೆ ಸಾಮಾನ್ಯ ಕಾರ್ಯಕ್ರಮ. ಟ್ರೇಡ್‌ಯೂನಿಯನ್‌ಗಳ ಸಂಘಟನೆ ರಾಷ್ಟ್ರೀಯವಾಗಿದ್ದು, ಅವುಗಳಿಗೆ ಅಂತರ್‍ರಾಷ್ಟ್ರೀಯ ಎಚ್ಚರ ಇರಬೇಕು ಎಂಬುದು ಸಭೆಗಳಲ್ಲಿ ವ್ಯಕ್ತವಾದ ಮುಖ್ಯ ನಿಲುವು ಆಗಿತ್ತು. ಅಂದರೆ ಜಾಗತೀಕರಣದ ವಿರುದ್ಧ ರಾಷ್ಟ್ರೀಯ ಟ್ರೇಡ್ ಯೂನಿಯನ್‌ಗಳ ಬದಲು, ಅಂತರ್‍ರಾಷ್ಟ್ರೀಯ ಸಂಘಟನೆ ಕಟ್ಟುವುದು ಸರಿ ಹೋಗಲ್ಲ. ಆದರೆ ಟ್ರೇಡ್ ಯೂನಿಯನ್‌ಗಳಿಗೆ ಸ್ಪಷ್ಟ ಅಂತರ್‍ರಾಷ್ಟ್ರೀಯ ಕಣ್ಣೋಟ ಇರಬೇಕು. ರಾಷ್ಟ್ರೀಯ ಟ್ರೇಡ್ ಯೂನಿಯನ್‌ಗಳು ಅಂತರ್‍ರಾಷ್ಟ್ರೀಯ ಸಂಯೋಜನೆ ಬಗ್ಗೆ ಕಾಳಜಿ ವಹಿಸಬೇಕು.

ಜಾಗತೀಕರಣದ ಪರಿಣಾಮಗಳ ಬಗ್ಗೆ ಕಾರ್ಮಿಕ ವರ್ಗದಲ್ಲಿ ಶಿಕ್ಷಣ, ಜಾಗೃತಿ, ಜಾಗತೀಕರಣದ ಅಪಾಯ ಎದುರಿಸಲು ಸ್ಪಷ್ಟ ಅಂತರ್‍ರಾಷ್ಟ್ರೀಯ ಕಾರ್ಯಾಚರಣೆಗೆ ತಯಾರಿ, ಕಾಂಟ್ರಾಕ್ಟ್ / ಅಸಂಘಟಿತ ಕಾರ್ಮಿಕರ ಸಂಘಟನೆ, ಮಹಿಳೆ - ಯುವ ಕಾರ್ಮಿಕರನ್ನು ತೊಡಗಿಸುವ - ನಾಯಕತ್ವಕ್ಕೆ ತರುವ ಬಗ್ಗೆ ವಿಶೇಷ ಕಾಳಜಿ, ನಿರುದ್ಯೋಗದ ಬಗ್ಗೆ ಪ್ರಚಾರ-ಪ್ರಕ್ಷೋಭೆ ಇವು 'ಜಾಗತೀಕರಣದ ವಿರುದ್ಧ ರಣನೀತಿ' ಕಾರ್ಯಾಗಾರ ಅಂಗೀಕರಿಸಿದ ಕಾರ್ಯಯೋಜನೆಯ ಕೆಲವು ಅಂಶಗಳು.

ಬಹುರಾಷ್ಟ್ರೀಯ ಯೂನಿಯನ್‌ಗಳ ಫೆಡರೇಷನ್‌ಗಳ ನಡುವೆ ಅಂತರ್‍ರಾಷ್ಟ್ರೀಯ ಸೌಹಾರ್ದತೆಯ ಬೆಳವಣಿಗೆ, ಅನುಭವ-ಮಾಹಿತಿ ಹಂಚಿಕೊಳ್ಳುವ ಯೂನಿಯನ್‌ಗಳ ಅಂತರ್‍ರಾಷ್ಟ್ರೀಯ ಜಾಲದ ನಿರ್ಮಾಣ, ನಿರ್ದಿಷ್ಟ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಕಾರ್ಯಾಚರಣೆಯ ಯೋಜನೆ, ನಿರ್ದಿಷ್ಟ ಬಹುರಾಷ್ಟ್ರೀಯ ಕಂಪನಿಗಳ ಕಾರ್ಯವಿಧಾನಗಳ ಬಗ್ಗೆ ಮಾಹಿತಿ ಹಂಚಿಕೊಳ್ಳುವದು, ಜಂಟಿ ರಣನೀತಿ ತಯಾರಿಕೆ - ಇವು 'ಜಾಗತೀಕರಣದ ವಿರುದ್ಧ ಯೂನಿಯನ್‌ಗಳು' ಕಾರ್ಯಾಗಾರ ಅಂಗೀಕರಿಸಿದ ಕಾರ್ಯಾಚರಣೆಯ ಕೆಲವು ಅಂಶಗಳು.

ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಪ್ರಚಾರ-ಪ್ರಕ್ಷೋಭೆ

ರಿಯೋ ಟಿಂಟೋ ಎಂಬ ಗಣಿ ಕ್ಷೇತ್ರದ ದೈತ್ಯ ಬಹುರಾಷ್ಟ್ರೀಯ ಕಂಪನಿ ವಿರುದ್ಧ ಕಳೆದ ಎಂಟು ವರ್ಷಗಳಲ್ಲಿ ಹಲವು ಯೂನಿಯನ್‌ಗಳು ನಡೆಸಿದ ಜಂಟಿ ಪ್ರಚಾರ-ಪ್ರಕ್ಷೋಭೆ ಮುಂದಿನ ಹೋರಾಟಗಳಲ್ಲಿ ಉತ್ತಮ ಮಾದರಿಯಾಗಬಲ್ಲದು ಎಂಬುದು 'ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಅಂತರ್‍ರಾಷ್ಟ್ರೀಯ ಪ್ರಚಾರ-ಪ್ರಕ್ಷೋಭೆ' ಕಾರ್ಯಾಗಾರದ ನಿರ್ಧಾರವಾಗಿತ್ತು, ರಿಯೋ ಟಿಂಟೋ ಪ್ರಚಾರದ ಅನುಭವ-ಮಾಹಿತಿಯನ್ನು ಎಲ್ಲಾ ಯೂನಿಯನ್ನುಗಳಿಗೆ ಹಂಚುವುದು, ಇತರ ಕಂಪನಿಗಳ ಬಗ್ಗೆ ಕ್ಷೇತ್ರಗಳಲ್ಲಿ ಇದರ ಮೇಲೆ ಆಧಾರಿತ ಕಾರ್ಯಯೋಜನೆ ತಯಾರಿಸುವುದು, ಕಂಪನಿಗಳ ವಿರುದ್ಧ ಕಾರ್ಯಾಚಾರಣೆಯ ಕಾರ್ಮಿಕರಲ್ಲದೆ ಇತರ ಸಮಾಜದ ಜನವಿಭಾಗಗಳನ್ನು ಒಳಗೊಳ್ಳುವುದು, ಕಂಪನಿಗಳ ವಿರುದ್ಧ ಬಹಿಷ್ಕಾರದ ಆಂದೋಲನದ ಬಗ್ಗೆ ಕಾರ್ಯಯೋಜನೆ ತಯಾರಿ - ಈ ಕಾರ್ಯಾಗಾರ ಅಂಗೀಕರಿಸಿದ ಕೆಲವು ಕಾರ್ಯಕ್ರಮಗಳು, ಮುಂದಿನ ಮೇ ದಿನದ ಸಾಮಾನ್ಯ ಕಾರ್ಯಕ್ರಮವನ್ನು ನಾಲ್ಕನೇ ಕಾರ್ಯಾಗಾರ ರೂಪಿಸಿತು. ಈ ಬಗ್ಗೆ ವರದಿಯ ಮೊದಲ ಭಾಗದಲ್ಲಿ ಆಗಲೇ ವಿವರಗಳಿವೆ. ಐದು ಘೋಷಣೆಗಳ ಸುತ್ತ ಮುಂದಿನ ಮೇ ದಿನದ ಕಾರ್ಯಕ್ರಮ ಹಮ್ಮಿಕೊಳ್ಳುವುದು, ಈ ಘೋಷಣೆಗಳ ಸುತ್ತ ಕಾರ್ಮಿಕರನ್ನು ಅಣಿ ನೆರೆಸುವುದು ಈ ಕಾರ್ಯಾಗಾರದ ಪ್ರಮುಖ ನಿರ್ಧಾರವಾಗಿತ್ತು.

ಕೆಲವು ದೇಶಗಳಿಂದ ಟ್ರೇಡ್ ಯೂನಿಯನ್‌ಗಳು ಬಂದಿರದೆ, ಕೆಲವು ಸ್ವಯಂ-ಸೇವಾ ಸಂಘಟನೆಗಳು ಬಂದಿದ್ದವು. ಟ್ರೇಡ್ ಯೂನಿಯನ್‌ಗಳಲ್ಲದ ಸ್ವಯಂ-ಸೇವಾ ಸಂಘಟನೆಗಳನ್ನು 'ಸಿಗ್‌ಟುರ್'ಗೆ ಸೇರಿಸಿಕೊಳ್ಳದಿರಲು ಸಮ್ಮೇಳನ ತೀರ್ಮಾನಿಸಿತು. ಸಮ್ಮೇಳನವನ್ನು ದಕ್ಷಿಣಾ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಮತ್ತು ಕೊಸಾಟು(ದಕ್ಷಿಣ ಆಫ್ರಿಕಾದ ಟ್ರೇಡ್ ಯೂನಿಯನ್) ಕಾರ್ಯದರ್ಶಿಗಳು ಸಮ್ಮೇಳನದ ಉದ್ಘಾಟನೆಯಲ್ಲಿ ಮಾತನಾಡಿದರು. ಭಾರತದಿಂದ ಸಿಐಟಿಯುನ ಎಂ.ಕೆ.ಫಂದೆ ಮಾತನಾಡಿದರು. ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾದ ಬಂದರು, ಜಲ ಸಾಗಾಣಿಕೆ ವಿಭಾಗದ ಯೂನಿಯನ್‌ಗಳ ನಡುವೆ ಸಹಕಾರದ, ಸೌಹಾರ್ದತೆಯ ಮಾದರಿ ಒಪ್ಪಂದವನ್ನು ಸಮ್ಮೇಳನದಲ್ಲೇ ಮಾಡಲಾಯಿತು.

ಕೃತಕ ಪ್ರೇಮವೇ 'ಓ ಪ್ರೇಮವೇ' ಚಿತ್ರ

ಚಲನ ಚಿತ್ರರಂಗ ಮಾಧ್ಯಮದಲ್ಲಿ ಪ್ರೇಮ ಕಥೆಗಳೇ ಮೇಲುಗೈಯಲ್ಲಿದ್ದರೂ ಬೆರಳೆಣಿಕೆಯಷ್ಟಾದರೂ ಪ್ರೀತಿ ಪ್ರೇಮದ ಕಥೆಯಾಧಾರಿತ ಚಿತ್ರಗಳು ಪ್ರೇಕ್ಷಕರ ಮನಮುಟ್ಟುವ ರೀತಿಯಲ್ಲಿ ತಲುಪುತ್ತಿಲ್ಲ. ಇತ್ತೀಚಿಗೆ ತೆರೆಕಂಡ 'ಓ ಪ್ರೇಮವೇ' ಚಿತ್ರದಂತ ಕಥೆಗಳೂ ಈಗಾಗಲೇ ನೂರಾರು ಬಂದೋಗಿವೆ.

ಸ್ನೇಹಿತನ ಮದುವೆಗೆಂದು ಸ್ನೇಹಿತರ ಜೊತೆಯಲ್ಲಿ ಹಳ್ಳಿಗೆ ಹೋಗುತ್ತಾನೆ ಚಿತ್ರದ ನಾಯಕ ರಾಜ (ರವಿಚಂದ್ರನ್). ಮದುವೆ ಮನೆಯಲ್ಲಿ ನಾಯಕಿ (ರಂಭಾ) ಪ್ರೇಮಾಳನ್ನು ಭೇಟಿಯಾಗುತ್ತಾನೆ. ಇವರಿಬ್ಬರ ಪ್ರೇಮ



ಚಿಗುರುತ್ತದೆ. ಆದರೆ ಪ್ರೇಮಳ ತಂದೆ ತನ್ನ ಸೇಹಿತನ ಮಗನಾದ ರಾಜ ಎಂಬ ಇನ್ಸ್‌ಪೆಕ್ಟರ್ ಗೆ ನಿಶ್ಚಿತಾರ್ಥ ಏರ್ಪಡಿಸುತ್ತಾನೆ. ಇದು ಚಿತ್ರದ ನಾಯಕನಾದ ರಾಜನಿಗೆ ತಿಳಿಯುತ್ತದೆ. ವೃತ್ತಿಯಲ್ಲಿ ಡಾಕ್ಟರ್ ಆದ ರಾಜ ಪ್ರೇಮಾಳ ತಾತನ ಆರೋಗ್ಯ ನೋಡಿಕೊಳ್ಳುವ ನೆಪದಲ್ಲಿ ಪ್ರೇಮಳ ಮನೆಯಲ್ಲಿ ಉಳಿಯುತ್ತಾನೆ. ಮದುವೆ ಸಿದ್ಧತೆ ನಡೆಯುತ್ತಿರುತ್ತದೆ. ಮದುವೆ ದಿನದಂದು ಇನ್ಸ್‌ಪೆಕ್ಟರ್ ರಾಜ ನಾಯಕ ರಾಜನನ್ನು ರೌಡಿಗಳಿಂದ ಥಳಿಸುತ್ತಾನೆ. ನಾಯಕ ಮದುವೆ ಮಂಟಪಕ್ಕೆ ಬಂದು ವೈರಿಗಳ ಜೊತೆ ಗುದ್ದಾಡುತ್ತಾನೆ. ಈ ಮಧ್ಯದಲ್ಲಿ ತನ್ನ ತಂದೆಯ ಮಾತನ್ನು ಮೀರಿ ಪ್ರೇಮಿಸಿದ ರಾಜನನ್ನು ಮದುವೆ ಆಗಲು ಸಾಧ್ಯವಾಗದ್ದಕ್ಕಾಗಿ ಬೆಂಕಿಗೆ ಆಹುತಿಯಾಗಲು ಯತ್ನಿಸುತ್ತಾಳೆ. ನಾಯಕ ರಾಜ ಪ್ರಾಣದ ಹಂಗು ತೊರೆದು ಅವಳನ್ನು ರಕ್ಷಿಸುತ್ತಾನೆ. ಕೊನೆಗೆ ನಿಜವಾದ ಪ್ರೀತಿ ಇವನಲ್ಲಿದೆ ಎಂದು ರಾಜನಿಗೆ ಮದುವೆ ಮಾಡುವುದೆಂದು ತೀರ್ಮಾನಿಸುತ್ತಾರೆ.

ಅಪರಿಚಿತರು ಪರಿಚಿತರಾದನಂತರ ಆರಂಭವಾಗುವ ಪ್ರೇಮಕ್ಕೆ ಎದುರಾಗುವ ವಾಸ್ತವ ಸಮಸ್ಯೆಗಳು ಈ ಚಿತ್ರದಲ್ಲಿ ಎದುರುಗಾಣುವುದಿಲ್ಲ. ಕಥೆ ರೆಡಿಮೇಡ್ ರೀತಿಯಲ್ಲಿ ಸಾಗುತ್ತದೆ. ಈ ಚಿತ್ರದಲ್ಲಿನ ನಾಯಕ ನಾಯಕಿ ಇಬ್ಬರೂ ಆಗರ್ಭ ಶ್ರೀಮಂತರೇ ಆಗಿರುತ್ತಾರೆ. ನಾಯಕ ತನಗೆ ಅನ್ನಿಸಿದನ್ನು ಸಾಧಿಸುತ್ತೇನೆ, ಪಡೆದೇತೀರುತ್ತೇನೆ ಎಂಬಂತೆ ಬೀಗುತ್ತಿರುತ್ತಾನೆ ಅಂದರೆ ನಾಯಕ ಸರ್ವಸಾಮರ್ಥ್ಯಗಳ ಖಣಿ. ಇಂಥ ಚಿತ್ರಣ ಬರೀ ಸಿನಿಮಾಗಳಲ್ಲಿ ಮಾತ್ರ ನಡೆಯಲು ಸಾಧ್ಯ.

ಪ್ರೇಮ ಕಥೆಗಳನ್ನು ಸಿನಿಮೀಯಗೊಳಿಸಿ ಕೃತಕ ಘಟನೆಗಳನ್ನು ಪೋಣಿಸಿ ಚಿತ್ರಿಸುತ್ತಾರೆ. ತಮ್ಮ ನಿಜ ಜೀವನದಲ್ಲಿ ಆಗಲಾರದ ಇಂಥ ಪ್ರೇಮ ಕಥೆಗಳನ್ನು ಜನರು ಬೆರಗುಗಣ್ಣಿನಿಂದ ನೊಡುತ್ತಾರೆ. ಈ ಚಿತ್ರದ ಕೊನೆಯಲ್ಲಿ ಚಿತ್ರದ ನಾಯಕ ಹೇಳುತ್ತಾನೆ "ಹೆಣ್ಣು ಮಕ್ಕಳು ಮಗುವಾಗಿದ್ದಾಗ ಮುದ್ದಾದ ಹೆಸರು ಇಡುತ್ತಾರೆ, ಇಷ್ಟವಾದ ಗೊಂಬೆಗಳನ್ನು ಕೊಡಿಸುತ್ತಾರೆ, ಅವಳ ಎಲ್ಲಾ ಆಸೆಗಳನ್ನು ಪೂರೈಸುತ್ತಾರೆ, ಆದರೆ ಅವಳ ಜೀವನ ಸಂಗಾತಿಯನ್ನು ಅವಳೇ ಆಯ್ಕೆ ಮಾಡಿಕೊಳ್ಳುವುದನ್ನು ವಿರೋಧಿಸುತ್ತಾರೆ" ಎಂದು.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ನಮ್ಮ ಸಮಾಜದಲ್ಲಿ ಹೆಣ್ಣು ಮಕ್ಕಳು ಜನಿಸಿದರೆಂದರೆ ಅಸಹ್ಯ ಪಡುವ ಪದ್ಧತಿ, ಹೆಣ್ಣು ಮಕ್ಕಳಿಗೇಕೆ ವಿದ್ಯಾಭ್ಯಾಸ ಎನ್ನುವ ಮೌಢ್ಯತೆ, ಹೆಣ್ಣು ಮಕ್ಕಳು ಚಿಕ್ಕ ವಯಸ್ಸಿನಲ್ಲಿ ಅಪ್ಪ ಅಮ್ಮನ ಹಿಡಿತದಲ್ಲಿ, ಮದುವೆ ನಂತರ ಗಂಡನ ಹಿಡಿತದಲ್ಲಿ, ಅನಂತರ ಮಕ್ಕಳ ಹಿಡಿತದಲ್ಲಿಯೇ ನಲುಗಿ ಹೋಗುತ್ತಿರುವಾಗ ಈ ಸಮಾಜದಲ್ಲಿ ಹೆಣ್ಣಿಗೆ ಸ್ವಾತಂತ್ರ್ಯ ಸಮಾನತೆ ಎಲ್ಲಿದೆ?. ಅವರು ನಿರಂತರವಾಗಿ ವರದಕ್ಷಿಣೆ, ಮುಂತಾದ ಶೋಷಣೆಗೆ ಆಹುತಿಯಾಗುತ್ತಿರುವುದನ್ನು ಮನಗಾಣಬೇಕಿದೆ. ಶ್ರೀಮಂತರ ಮನೆಗಳಲ್ಲಿ ಬೆರಳೆಣಿಕೆಯಷ್ಟು ಹೆಣ್ಣು ಮಕ್ಕಳು ಕೆಲವೊಂದು ಆಸೆಗಳನ್ನು ಪೂರೈಸಿಕೊಳ್ಳಬಹುದು. ಆದರೆ ಶ್ರೀಮಂತ ಮಹಿಳೆಯರಿಗೂ ಸಮಾನತೆದಕ್ಕಿಲ್ಲ ಹಾಗೂ ಸಮಾನತೆಗಾಗಿ ದನಿ ಎತ್ತುವ ಶಕ್ತಿಯನ್ನು ಶ್ರೀಮಂತಿಕೆ ನೀಡುತ್ತಿಲ್ಲ.

ಚಲನ ಚಿತ್ರಗಳಲ್ಲಿ ಸಿನಿಮೀಯವಾಗಿ ನಿಜ ಜೀವನದ ಕೆಲವು ತುಣುಕುಗಳನ್ನು ಮಾತ್ರ ಚಿತ್ರಿಸಿ ನಿಜಸ್ಥಿತಿಯನ್ನು ಮರೆಮಾಚುವುದು ಎದ್ದುಕಾಣುತ್ತದೆ. ಪ್ರೇಮಕಥೆಗಳಲ್ಲಿ ಯುವ ಪ್ರೇಮಿಗಳಿಗೆ ಬರುವ ಅಂಜಿಕೆಯು, ಅಂತರಾಳದ ಭಾವನೆಗಳು (ಸ್ವಾಭಾವಿಕವಾಗಿ ಅದರಲ್ಲೂ ಯುವತಿಯರ) ಕನಸುಗಳು, ಜಾತಿ, ಅಂತಸ್ತು; ಹಿರಿಯರ ವಿರೋಧ, ಈ ಎಲ್ಲಾ ವಾಸ್ತವತೆಯ ಪ್ರೇಮ ಕತೆಗಳು ಇಲ್ಲವಾಗಿವೆ. ಯುವಕರನ್ನು ಭ್ರಮೆಗಳಲ್ಲಿ ಮುಳುಗಿಸುವ ವಾಸ್ತವವನ್ನು ಎದುರಿಸಲು ಅಸಮರ್ಥರನ್ನಾಗಿ ಮಾಡುವುದೇ ಚಲನಚಿತ್ರ ಸಂಸ್ಕೃತಿಯ ಗುರಿಯಾಗಿರುವಾಗ ವಿಭಿನ್ನ ರೀತಿಯ ನೈಜ ಪ್ರೇಮ ಕಥೆಯ ಚಿತ್ರಗಳ ನಿರ್ಮಾಣ ಎಲ್ಲಿ ಸಾಧ್ಯ?.

ಇನ್ನೂ ಈ ಚಿತ್ರದ ಬಗ್ಗೆ ಹೇಳುವುದಾದರೆ ನೆನಪಿನಲ್ಲಿ ಉಳಿಯುವಂಥದ್ದೇನು ಇಲ್ಲ. ನಂಜುಂಡರ ಸಂಭಾಷಣೆ ಚುರುಕಾಗಿಲ್ಲದಿದ್ದರೂ ಪರವಾಗಿಲ್ಲ. ವಿ. ಚಂದ್ರನ್ ಸಂಗೀತ ನಿರ್ದೇಶನದಲ್ಲಿ ವಿಶೇಷತೆ ಏನೂ ಇಲ್ಲ. ಆದರೆ ಸೀತರಾಂ ರವರು ಛಾಯಗ್ರಹಣದಲ್ಲಿ ನಮ್ಮೂರುಗಳ ಬೆಟ್ಟ ಗುಡ್ಡಗಳು, ಕೆರೆ ನದಿಗಳು, ಹಸಿರು ಪಚ್ಚೆ ಪೈರುಗಳು, ಹಾಗೆ ಹೊರದೇಶಗಳ ಪ್ರಕೃತಿ ಸೌಂದರ್ಯದ ಸೊಬಗನ್ನು ನೋಡುವಂತೆ ಸೆರೆ ಹಿಡಿದಿದ್ದಾರೆ. ಇನ್ನು ನಟನೆಯಲ್ಲಿ ವಿ.ರವಿಚಂದ್ರನ್ ಯಥಾಸ್ಥಿತಿ, ರಂಭಾಳ ನಟನೆಗಿಂತ ಅವಳನ್ನು ಆಗಾಗ ಚಲನ ಚಿತ್ರದಲ್ಲಿ ನೊಡುತ್ತಿದ್ದಂತೆ ಭಾಸವಾಗುತ್ತದೆ. ಇನ್ನು ದೊಡ್ಡಣ್ಣ, ಉಮಾಶ್ರೀ, ಕಾಶಿ ತಮ್ಮ ಹಾಸ್ಯ ಚಟಾಕಿಯಿಂದ ಪ್ರೇಕ್ಷಕರನ್ನು ನಗಿಸುತ್ತಾರೆ. ಈ ಚಿತ್ರದಲ್ಲೂ ಪೈಟುಗಳು, ಹಿಂಸೆಯನ್ನು ತುಂಬಲು ನಿರ್ದೇಶಕರು ಮರೆತಿಲ್ಲ ಕಾರಣ ಈ ಚಿತ್ರವು ಕೂಡ ರಿಮೇಕ್ ಚಿತ್ರತಾನೆ. ಆದರೆ ಅಶ್ಲೀಲತೆ ಕಾಣುವುದಿಲ್ಲ. ಇದು ಒಂದು ಕೃತಕ ಪ್ರೇಮಕಥೆ ಎಂದಷ್ಟೇ ಹೇಳಬಹುದು.

- ಬಿ.ರಾಜಶೇಖರಮೂರ್ತಿ

ಉಡುಪಿ ಮಠಗಳ ರಾಜಕೀಯ

ಉಡುಪಿಯ ಅಷ್ಟ ಮಠಗಳು ಬಿ.ಜೆ.ಪಿ.ಯ ಬಾಲಂಗೋಚಿಯಾಗಿ ಬ್ರಾಹ್ಮಣೋತ್ತಮದ ಸಂರಕ್ಷಣೆಗೆ ದೀಕ್ಷಾ ಬದ್ಧವಾಗಿದೆ. ಮಠಕ್ಕೂ, ಬಿಜೆಪಿ ಪಕ್ಷಕ್ಕೂ ಇರುವ ಅನ್ಯನ್ಯ ಸಂಬಂಧದ ಗುಟ್ಟು ಎಲ್ಲರಿಗೂ ಗೊತ್ತಿರುವಂತದ್ದು. ಪ್ರಸ್ತುತ ಭಾರತದಲ್ಲಿ ಬಿಜೆಪಿಯ ಏಳಿಗೆಗಾಗಿ ಇಂತಹ ಮಠಗಳು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ತಮ್ಮ ಎಲ್ಲಾ ರೀತಿಯ ಸಂಪನ್ಮೂಲಗಳನ್ನು ಧಾರೆ ಎರೆಯುತ್ತಿದೆ.

ಉಡುಪಿ ಮಠಗಳಲ್ಲೇ ಪ್ರಖ್ಯಾತರಾದ ಪೇಜಾವರ ಮಠಾಧೀಶರಾದ ವಿಶ್ವೇಶತೀರ್ಥರು ವಿಶ್ವಹಿಂದು ಪರಿಷತ್ತಿನ ಉಪಾಧ್ಯಕ್ಷರುಗಳಲ್ಲಿ ಓರ್ವರು. ಅಯೋಧ್ಯಾ ಗುಂಗಿನ ಸಮಯದಲ್ಲಿ ಇವರು ದೇಶದ ಉದ್ದಗಲಕ್ಕೂ ಸಂಚರಿಸಿ ಪ್ರಚೋದಾತ್ಮಕ ಭಾಷಣ ಮಾಡಿದವರಾಗಿದ್ದಾರೆ. ಇತಿಹಾಸದ ಕಪ್ಪು ಚುಕ್ಕೆಯಾದ ಬಾಬರಿ ಮಸೀದಿಯ ಧ್ವಂಸದ ಕಾರ್ಯಾಚರಣೆಯಲ್ಲಿ 'ಪ್ರಥಮ ಹೊಡೆತವನ್ನು ನೀಡಿದವರು ಈ ಪೇಜಾವರ ಮಠಾಧೀಶರು' ಎಂದು ಇತ್ತೀಚಿಗೆ ಬಿಜೆಪಿ ತೊರೆದ ಮಾಜೀ ಸಂಸತ್ ಸದಸ್ಯ ಸಾಕ್ಷಿ ಮಹಾರೆಜ್‌ರವರು ಪತ್ರಿಕಾಗೋಷ್ಠಿಯಲ್ಲಿ ಬಹಿರಂಗಗೊಳಿಸಿದರು. ಇತ್ತೀಚಿನ ತನಕ ಉಡುಪಿ ಮಠಾದೀಶರು ಈ ಬಗ್ಗೆ ಪ್ರತಿಕ್ರಿಯಿಸಲಿಲ್ಲ.

ಅದಮಾರು ಮಠಾಧೀಶರ ರಾಜಕೀಯ ಪತ್ರಿಕಾಗೋಷ್ಠಿ

ಅದಮಾರು ಮಠಾಧೀಶರು ಚುನಾವಣೆಯ ಮೊದಲು ಮತ್ತು ಆದಾದ ನಂತರ ಒಂದೊಂದು ರಾಜಕೀಯ ಪತ್ರಿಕಾಗೋಷ್ಠಿ ನಡೆಸಿದರು. ಶ್ರೀ ವಿಭುದೇಶ ತೀರ್ಥರು ಮೊದಲಿನ ಪತ್ರಿಕಾಗೋಷ್ಠಿಯಲ್ಲಿ ವಿದೇಶಿ ಸೋನಿಯಾ ಪ್ರಧಾನಿಯಾದರೆ ದೇಶ ತೊರೆಯುವುದಾಗಿ ಮಾತ್ರವಲ್ಲದೆ ಎರಡೂ ಕಡೆಗಳಲ್ಲೂ ಸೋನಿಯಾಗಾಂಧಿ ಸೋಲುತ್ತಾರೆ ಎಂದು ಉದ್ಧಟತನದಿಂದ ಹೇಳಿದರು.

ಚುನಾವಣೆ ಮುಗಿದ ನಂತರ ಕಳೆದವಾರ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ತೀರಾ ರಾಜಕೀಯದ ಭಾಷಣ ಮಾಡಿದರು. ರಾಜ್ಯದಲ್ಲಿ ಬಿಜೆಪಿ ಸೋಲಿನ ಬಗ್ಗೆ ವಿವರಣೆ ನೀಡಿದರು. ಸುಷ್ಮಾರವರು ಬಳ್ಳಾರಿಯಲ್ಲಿ ಯಾಕೆ ಸೋತರು ಎಂಬ ಬಗ್ಗೆಯೂ ಹೇಳಿದರು. ಮಾತ್ರವಲ್ಲ ವಾಜಪೇಯಿ ಸರಕಾರದ ಬಗ್ಗೆಯೂ ಹೇಳಿದರು.

ಇಹದ ವ್ಯಾಮೋಹ ತ್ಯಜಿಸಿದ ಸ್ವಾಮೀಜಿಯವರು ನೇರ ರಾಜಕೀಯಕ್ಕೆ ಇಳಿಯುವುದು ಒಳ್ಳೆಯದಲ್ಲವೇ?

- ಕೃಷ್ಣಪ್ಪ ಕೊಂಚಾಡಿ

ನವೆಂಬರ್ 24, 1999 'ಐಕ್ಯರಂಗ' ಪ್ರಸಾರ ದಿನ

ನವೆಂಬರ್ 24, 1999 ಮಹಾನ್ ತತ್ವಜ್ಞಾನಿ, ದುಡಿಯುವವರ್ಗದ ಒಡನಾಡಿ ಫೆಡ್ರಿಕ್ ಎಂಗಲ್ಸ್‌ರ ಜನ್ಮದಿನ. ದುಡಿಯುವ ಜನರ ಪ್ರಾಣಮಿತ್ರ 'ಐಕ್ಯರಂಗ' ಪ್ರಸಾರದ ದಿನವನ್ನಾಗಿ ಆಚರಿಸಲು ಬಳ್ಳಾರಿ ಜಿಲ್ಲೆಯ ಐಕ್ಯರಂಗ ಬಳಗ ಮತ್ತು ಸಹೃದಯ ಹಿತೈಷಿಗಳು ನಿರ್ಧರಿಸಿದ್ದಾರೆ. ಪ್ರಸಾರ ಹೆಚ್ಚಿಸಲು ಎಲ್ಲರೂ ಕೈಜೋಡಿಸಿ. ಯಶಸ್ವಿಗೊಳಿಸಿ. ಈ ಮೂಲಕ ಎಂಗೆಲ್ಸರ ಜನ್ಮದಿನ ಸಾರ್ಥಕಗೊಳಿಸಿ.

ಸಂತ ಕಬೀರ್

ಪುಟ 4 ರಿಂದ

ರಮಾನಂದ ಅನುಯಾಯಿಯಾದ.

ಸಿಖ್ಖರ ಧರ್ಮಗುರು ನಾನಕ್ ಅವರು ಕಬೀರ್‌ನಿಂದ ಪ್ರೇರೇಪಣೆ ಪಡೆದು ಸಿಖ್ ಪಂಥಕ್ಕೆ ಹುಟ್ಟು ನೀಡಿದರು. ಕಬೀರ್ ಹಿಂದಿ ಮತ್ತು ಪಂಜಾಬಿಗಳಲ್ಲಿ ರಚಿಸಿದ ಅನೇಕ ಕವಿತೆಗಳು ಸಿಖ್ಖರ ಪವಿತ್ರ ಗ್ರಂಥವೆನಿಸಿದ 'ಆದಿಗ್ರಂಥ'ದಲ್ಲಿ ಸ್ಥಾನ ಪಡೆದುಕೊಂಡಿರುವುದು ಈತ ಚರಿತ್ರೆಯಲ್ಲಿ ಪ್ರಮುಖ ಸ್ಥಾನ ಸಂಪಾದಿಸಿರುವುದಕ್ಕೆ ಪ್ರಮುಖ ಕಾರಣಗಳಾಗಿವೆ.

ಈತ ಎಂದೂ ಸಂಪೂರ್ಣವಾಗಿ ಆಧ್ಯಾತ್ಮಿಕ ಬದುಕನ್ನೇನು ಬಾಳಲಿಲ್ಲ. ಆತ ಧಾರ್ಮಿಕತೆಯಲ್ಲಿ ಎಷ್ಟು ಲೀನವಾಗಿದ್ದನೋ ಸಂಸಾರದ ಜವಾಬ್ದಾರಿಯನ್ನೂ ಅಷ್ಟೇ ಸಮರ್ಥವಾಗಿ ನಿಭಾಯಿಸಿದ ಕೂಡ. ಮದುವೆಯಾಗಿ ಒಂದು ಗಂಡು ಹಾಗೂ ಒಂದು ಹೆಣ್ಣು ಮಕ್ಕಳ ತಂದೆಯಾಗಿ, ತನ್ನ ಕುಲಕಸುಬಾದ ನೇಯ್ಗೆಯಲ್ಲಿ ತೊಡಗಿಸಿಕೊಂಡು ಸಂಸಾರ ಭಾರವನ್ನು ನಿಭಾಯಿಸಿದ. ತನ್ನ ಧಾರ್ಮಿಕ ಸತತ ಶ್ರದ್ಧೆ, ಸಾಮಾಜಿಕ ಸುಧಾರಣೆಗಳ ಮಧ್ಯೆಯೂ ಲೌಕಿಕ ಜವಾಬ್ದಾರಿಗಳಿಂದ ಪಲಾಯನಗೈಯಲಿಲ್ಲ.

.ಸಂತ ಕಬೀರ್ ರಚಿಸಿದ ಕಾವ್ಯಗಳನ್ನು ಸಖಿ, ಪದ ಹಾಗೂ ರಮಣಿ ಎಂಬ ಮೂರು ವಿಧಗಳೆಂದು ವಿಂಗಡಿಸಬಹುದು. ಸಖಿ ದ್ವಿಪದಿಗಳಾಗಿದ್ದು, ದೋಹಾಗಳೆಂದು ಪ್ರಖ್ಯಾತವಾಗಿವೆ. ಕಬೀರ್ ರಚಿಸಿದ ಕವಿತೆಗಳಲ್ಲಿ ಉಪಮಾಲಂಕಾರ ಮತ್ತು ರೂಪಕಾಲಂಕಾರಗಳನ್ನು ಅತ್ಯಂತ ಶಕ್ತಿಯುತವಾಗಿ ಬಳಸಿದ್ದು ತನ್ನ ಸರಳ ಭಾಷೆಯಿಂದ ಜನಮನ ತಣಿಸಿದೆ.

ಜಾತೀವಾದ ಮತ್ತು ವಿಗ್ರಹ ಪೂಜೆಗಳನ್ನು ಪ್ರಬಲವಾಗಿ ವಿರೋಧಿಸಿ ಸಂತ ಕಬೀರ್ ತನ್ನ ಕವನಗಳಲ್ಲಿ ಭಕ್ತಿ ಗಳಿಕೆಯ ಮಾರ್ಗವನ್ನು ಬೋಧಿಸಿದಂತೆ ದಾರ್ಶನಿಕತೆಯನ್ನು ಮತ್ತು ಸಾಮಾಜಿಕ ಪ್ರಜ್ಞೆಯನ್ನು ಬೆಳೆಸುವತ್ತಲೂ ಗಮನಹರಿಸಿದ್ದಾರೆ. ಸರ್ವಧರ್ಮ ಸಮಭಾವವನ್ನು ವ್ಯಕ್ತಪಡಿಸುತ್ತಾ ಎಲ್ಲಾ ದೇವರಲ್ಲೂ, ಧರ್ಮದಲ್ಲೂ ಏಕತ್ವವನ್ನು ಕಂಡ ಮಹಾನ್ ಸಾಧಕನಾಗಿ ಕಬೀರ್ ಕಾಣುತ್ತಾನೆ. ಆತನ ಕವಿತೆಗಳೂ ಜನರಿಗೆ ಅದೇ ಸಂದೇಶವನ್ನು ನೀಡುತ್ತದೆ. ಕೇವಲ ದೇವರ ಧ್ಯಾನದಲ್ಲೇ ತೊಡಗದೆ ಕಾಯಕವನ್ನೂ ದೇವರನ್ನಾಗಿ ಕಾಣೆ ಎಂದು ಉಪದೇಶಿಸುವ ಆತ ನಿಜ ಜೀವನದಲ್ಲೂ ಅದೇ ಮಾರ್ಗವನ್ನು ತುಳಿದ.

ಧಾರ್ಮಿಕ ಆಚರಣೆಯ ಒಳಗೆ ಕಂಡುಬರುವ ಮೋಸಗಳನ್ನು ಯಾವುದೇ ಮುಲಾಜಿಲ್ಲದೆ ಖಂಡಿಸಿದ ಕಬೀರ್, ಧಾರ್ಮಿಕ ಕುರುಡು ನಂಬಿಕೆಗಳಾದ ಉಪವಾಸ, ಅತಿರೇಕದ ಆಚರಣೆ, ವೇಷಭೂಷಣಗಳನ್ನು ಟೀಕಿಸಿದ. 1518 ರಲ್ಲಿ ಗೋರಖ್‌ಪುರದ ಮಘಹಾರ್‌ನಲ್ಲಿ ತನ್ನ ಅಂತಿಮ ಕ್ಷಣಗಳನ್ನು ಕಳೆದ ಈತ ಈ ಸ್ಥಳದಲ್ಲಿ ಸಾವನ್ನಪ್ಪಿದವರು ನೇರ ನರಕಕ್ಕೆ ಹೋಗುತ್ತಾರೆ ಎನ್ನುವ ಮಾತಿದ್ದುದರಿಂದಲೇ ತನ್ನ ಅಂತ್ಯ ಇಲ್ಲಾಗಬೇಕೆಂದು ಬಯಸಿದ.

ತನ್ನ ಜೀವನದ ಕೊನೇ ದಿನಗಳಲ್ಲಿ ಕಬೀರ್ ತನ್ನ ಬೆಂಬಲಿಗರೇ ಪರಸ್ಪರ ಕದನ ನಡೆಸುವುದನ್ನು ನೋಡಬೇಕಾಯಿತು. ಮಘಹಾರ್‌ನಲ್ಲಿ ಕಬೀರನ ಕಳೇಬರವನ್ನು ತನ್ನದಾಗಿಸಿಕೊಳ್ಳಲು ಹಿಂದೂ ಮತ್ತು ಮುಸ್ಲಿಂ ತಂಡಗಳು ಪರಸ್ಪರ ಬಡಿದಾಡಿಕೊಂಡರು.

ದೇಶವೀಗ ಕಬೀರ್ ಅವರ 600ನೇ ಜಯಂತಿಯ ಆಚರಣೆಯಲ್ಲಿ ತೊಡಗಿದೆ. ಧರ್ಮದ ನಿಜವಾದ ಕಾಳಜಿಯನ್ನು ಜನರಿಗೆ ತಲುಪಿಸುವಲ್ಲಿ ಆ ಮೂಲಕ ಸಾಮಾಜಿಕ ಸಾಮರಸ್ಯವನ್ನು, ಹಿಂದು-ಮುಸ್ಲಿಂ ಐಕ್ಯತೆಯನ್ನು ಬೆಸೆಯುವಲ್ಲಿ ಕಬೀರ್ ಮಹತ್ತರ ಪಾತ್ರವಹಿಸಿದ್ದಾನೆ. ಇಂದಿನ ಈ ಮಾಧ್ಯಮಗಳ ಯುಗದಲ್ಲೂ ಅಸಾಧ್ಯವಾದುದನ್ನು ಕಬೀರ್ ಸಾಧಿಸಿದ್ದಾನೆ. ಇದರಿಂದಲೇ ಕಬೀರ್ ನಮಗೆ ಆದರ್ಶವಾಗಿ ನಿಲ್ಲುತ್ತಾನೆ.

Reg.No.17015/64 KRNM/BGS-405 MAG(2) PRBDECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ